ಪ್ರಚಾರ ಪುಸ್ತಕಮಾಲೆ 42

ಕೌಟಿಲ್ಯ

ಡಾ|| ಎಂ. ವಿ. ಕೃಷ್ಣರಾವ್

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯ
ಪ್ರಚಾರ ಪುಸ್ತಕ ಮಾಲೆ—೪೨

ಕೌಟಿಲ್ಯ

ಡಾ|| ಎಂ. ವಿ. ಕೃಷ್ಣರಾವ್, ಎಂ.ಎ., ಡಿ.ಲಿಟ್.

೧೯೬೦

ಮೂರನೆಯ ಮುದ್ರಣ ೧೯೫೩

ನಾಲ್ಕನೆಯ ಮುದ್ರಣ ೧೯೬೧

೩೦೦೦ ಪ್ರತಿಗಳು

ಐದನೆಯ ಮುದ್ರಣ ೧೦,೦೦೦ ಪ್ರತಿಗಳು

ಬೆಲೆ : ೭೫ ಪೈಸೆ

ಪ್ರಕಾಶಕರು : ನಿರ್ದೇಶಕರು, ಪ್ರಸಾರಾಂಗ, ಮೈಸೂರು–೧೨

ಮುದ್ರಕರು, ವಿಶ್ವವಿದ್ಯಾನಿಲಯದ ಮುದ್ರಣಾಲಯ

ಮೈಸೂರು

ಅರಿಕೆ

ಕೌಟಿಲ್ಯನ ಅರ್ಥಶಾಸ್ತ್ರವು ಮೋಸ ಮತ್ತು ಕುಟಿಲತನಕ್ಕೆ ತೌರುಮನೆ ಎಂಬ ಅಪವಾದ ಸಾಮಾನ್ಯವಾಗಿದೆ. ಯೂರೋಪಿನಲ್ಲಿ ಮ್ಯಾಕೆವೆಲ್ಲಿ ಎಂಬ ರಾಜನೀತಿಜ್ಞನ ವಿಷಯದಲ್ಲೂ ಇದೇ ವಿಧವಾದ ತಪ್ಪು ತಿಳಿವಳಿಕೆ ಇದೆ. ದುಷ್ಟರನ್ನೂ ಮೋಸಗಾರರನ್ನೂ ಸಾಧುಮಾರ್ಗದಿಂದ ಮೂಲೋತ್ಪಾಟನ ಮಾಡುವುದು ಸಾಧ್ಯವಿಲ್ಲವೆನ್ನುವುದು ಇವರ ಅಭಿಮತ. ಕಪಟಿಗಳ ವಿಷಯದಲ್ಲಿ ಕಾಪಟ್ಯವನ್ನು ಆಚರಿಸುವುದೇ ಸರಿಯಾದ ನೀತಿ ಎಂದು ಇವರು ಘೋಷಿಸಿರುತ್ತಾರೆ. ದುಷ್ಟರನ್ನು ಮಟ್ಟಹಾಕುವುದಕ್ಕೆ ಮಾಡುವ ತಂತ್ರವನ್ನು ಶಿಷ್ಟರ ವಿಚಾರದಲ್ಲೂ ಉಪಯೋಗಿಸಬೇಕೆಂದು ಇವರು ಹೇಳಿಲ್ಲ. ಇಟಲಿಯ ರಾಜ ನೀತಿಜ್ಞ ಕಾವೂರನು ಹೇಳುವಂತೆ ರಾಷ್ಟ್ರ ಕ್ಷೇಮಚಿಂತನೆಯಿಂದಲೂ ಪುರೋಭಿವೃದ್ಧಿಯ ದೃಷ್ಟಿಯಿಂದಲೂ ರಾಜತಂತ್ರ ಪ್ರವೀಣರು ಮಾಡುವ ಕೆಲಸಗಳನ್ನು ಸಾಮಾನ್ಯರಾದ ನಾವು ಮಾಡಿದ್ದೇ ಆದರೆ ಪರಮ ನೀಚರೆನಿಸಿಕೊಳ್ಳುವೆವು. ಕೌಟಿಲ್ಯನ ಅರ್ಥಶಾಸ್ತ್ರವನ್ನು ಓದುವಾಗ ಇದನ್ನು ಜ್ಞಾಪಕದಲ್ಲಿಡಬೇಕು.

ಕೌಟಿಲ್ಯನ ದಂಡನೀತಿಯನ್ನು ಕುರಿತು ನಾನು ಶಿವಮೊಗ್ಗೆಯಲ್ಲಿ ಮಾಡಿದ ಪ್ರಚಾರೋಪನ್ಯಾಸವನ್ನು ಇಲ್ಲಿ ಸ್ವಲ್ಪ ವಿಸ್ತರಿಸಿ ಬರೆದಿರುತ್ತೇನೆ. ಇದರ ಹಸ್ತಪ್ರತಿಯನ್ನು ಆಮೂಲಾಗ್ರವಾಗಿ ಪರಿಷ್ಕರಿಸಿದುದಕ್ಕಾಗಿ ಸಂಪಾದಕರಿಗೂ ಸಂಪಾದಕೀಯ ಮಂಡಲಿಯವರಿಗೂ ಅಚ್ಚಿನ ಕರಡು ಪ್ರತಿಯನ್ನು ಓದಿ ಉಪಯುಕ್ತವಾದ ಸಲಹೆಗಳನ್ನು ಕೊಟ್ಟದ್ದಕ್ಕಾಗಿ ಶ್ರೀಮಾನ್ ಡಾ॥ ಎಚ್. ಎಲ್. ಹರಿಯಪ್ಪನವರಿಗೂ ನಾನು ಕೃತಜ್ಞನಾಗಿರುತ್ತೇನೆ.

ಎಂ. ವಿ. ಕೃಷ್ಣರಾವ್

*ಧರ್ಮಶ್ಚ ವ್ಯವಹಾರಶ್ಚ ಚರಿತ್ರಂ ರಾಜಶಾಸನಂ ।
ವಿವಾದಾರ್ಥಶ್ಚತುಷ್ಪಾದಃ ಪಶ್ಚಿಮಃ ಪೂರ್ವಬಾಧಕಃ ॥ (II. 3.)

ವಿಷಯಾನುಕ್ರಮಣಿಕೆ

वंशे विशालवंश्यानां ऋषीणामपि भूयसाम् ।
अप्रतिग्राहकाणां यो बभूव भुवि विश्रुतः ॥
जातवेदा इवार्चिष्मान् वेदान् वेदविदां वरः ।
योऽधीतवान् सुचतुरः चतुरोऽप्येकवेदवत ॥
यस्याभिचारवज्रेण वज्रज्वलनतेजसः ।
पपात मूलतः श्रीमान् सुपर्वा नन्दपर्वतः ॥
एकाकी मन्त्रशक्तया यः शक्त्या शक्तिधरोपमः ।
आजहार नृचन्द्राब चन्द्रगुप्ताय मेदिनीम् ॥
नीतिशास्त्रामृतं धीमान् अर्थशास्त्रमहोदधेः ।
सुमुद्दध्रे नमस्तस्मै विष्णुगुप्ताय वेधसे ॥
दर्शनात्तस्य सुदृशो विद्यानां पारदृश्वनः ।
राजविद्याप्रियतया संक्षिप्तग्रन्थमर्थवत ॥

ಯೋಗೀಶ್ವರ ವಂಶದಲ್ಲಿ ಜನಿಸಿ ತ್ಯಾಗಿಯಂತೆ ಜೀವಿಸಿ ಚತುರ್ವೇದಗಳಲ್ಲಿ ಪಾರಂಗತನಾಗಿ ವೇದಾಂತಿಗಳಲ್ಲಿ ಅಗ್ರಗಣ್ಯನಾಗಿ ಪೂಜ್ಯಸ್ಥಾನವನ್ನು ಗಳಿಸಿ ದೇಶ ದೇಶಗಳಲ್ಲೆಲ್ಲಾ ಅಗ್ನಿದೇವನಂತೆ ಹೊಳೆದು ಸಿಡಿಲಿನಂತಹ ತನ್ನ ಆತ್ಮಶಕ್ತಿಯಿಂದ ಬೆಟ್ಟದಂತಹ ನಂದರನ್ನೂ ಉರುಳಿಸಿ ಇನ್ನೊಬ್ಬರ ಸಹಾಯವನ್ನಪೇಕ್ಷಿಸದೆ, ತನ್ನ ಬುದ್ಧಿಕೌಶಲದಿಂದ, ದೇವತೆಗಳ ಸೈನ್ಯಾಧಿಪತಿಗೆ ಸರಿದೂಗುವ ಸಾಹಸದಿಂದ ಸಹೃದಯ ಚಂದ್ರಗುಪ್ತನಿಗೆ ಚಕ್ರಾಧಿಪತ್ಯವನ್ನು ದೊರಕಿಸಿಕೊಟ್ಟು ಅರ್ಥಶಾಸ್ತ್ರವೆಂಬ ಸಮುದ್ರವನ್ನು ಮಥಿಸಿ ರಾಜನೀತಿಯೆಂಬ ಅಮೃತವನ್ನು ತೆಗೆದ ದಿವ್ಯ ತೇಜಸ್ವಿ ಶ್ರೀ ವಿಷ್ಣುಗುಪ್ತನಿಗೆ ನಮೋ ನಮಃ

'ಕಾಮಂದಕ'
ಭಾಗ ೧(೭—೨)

ಪುರಾತನ ಭಾರತದ ರಾಜನೀತಿಜ್ಞರಲ್ಲೆಲ್ಲ ಕೌಟಿಲ್ಯನು ಅಗ್ರಗಣ್ಯನು. ಅವನ ವ್ಯಕ್ತಿತ್ವವು ಅಪೂರ್ವವಾದುದು. ಅವನು ಶಾಸ್ತ್ರಜ್ಞನಲ್ಲದೆ ರಾಜತಂತ್ರನಿಪುಣನೂ ಆಗಿದ್ದನು. ಆ ಕಾಲದ ರಾಜಕೀಯ ಮತ್ತು ಸಾಮಾಜಿಕ ಕ್ರಾಂತಿಗಳಿಗೆ ಕಾರಣ ಕರ್ತ. ಕೌಟಿಲ್ಯನಿಗೂ ಪಾಶ್ಚಿಮಾತ್ಯ ರಾಜನೀತಿಜ್ಞರಿಗೂ ಹೋಲಿಕೆಗಳಿಗಿಂತಲೂ ವ್ಯತ್ಯಾಸವೇ ಹೆಚ್ಚು. ಅರಿಸ್ಟಾಟಲ್, ಮ್ಯಾಕೆವೆಲ್ಲಿ ಮತ್ತು ಇತರ ಯೂರೋಪಿಯನ್ನರೇ ರಾಜನೀತಿ ಶಾಸ್ತ್ರದಲ್ಲಿ ವಿಶಾರದರು ಎಂದು ನಂಬಿ, ಪ್ರಪಂಚದ ಇತರ ಭಾಗಗಳಲ್ಲಿ ಸ್ವಾವಲಂಬಿಗಳಾಗಿ, ತಮ್ಮದೇ ಒಂದು ವೈಶಿಷ್ಟ್ಯ ದಿಂದ ಹೊಳೆದ ಜ್ಞಾನಿಗಳನ್ನು ಆ ಯೂರೋಪಿಯನ್ನರ ಮಟ್ಟದಿಂದ ಅಳೆಯುವುದು ನಮ್ಮ ಕುರುಡು ಸಮರ್ಥನೆಗಳ ಲ್ಲೊಂದು. ಹೀಗಾಗಿ ಕೌಟಿಲ್ಯನ ವ್ಯಕ್ತಿತ್ವಕ್ಕೆ ಅಪಘಾತ ವಾಗಿದೆ. ಅವನ ಅರ್ಥಶಾಸ್ತ್ರದ ಅರ್ಥವು ಜನರಿಗೆ ಉಪ ಯೋಗವಾಗದೆ ಉಳಿದಿದೆ. ಕೌಟಿಲ್ಯನ ನೈಜ ವ್ಯಕ್ತಿನಿರೂಪಣೆ ಗಾಗಿ ಇಂಗ್ಲಿಷಿನಲ್ಲಿ "Studies in Kautilya" ಎಂಬ ಗ್ರಂಥವೊಂದನ್ನು ಪ್ರಕಟಿಸಿದ್ದೇನೆ. ಕನ್ನಡ ಬಾಂಧವರಿಗಾಗಿ ಈ ಪುಟ್ಟ ಪುಸ್ತಕವನ್ನು ಮೂರನೆಯ ಬಾರಿ ಪ್ರಕಟಿಸುತ್ತಿರು ವಾಗ ಇತ್ತೀಚಿನ ಪರಿಶೋಧನೆಗಳ ಪರಿಣಾಮದಿಂದ ಗೊತ್ತಾದ ಹೊಸ ವಿಷಯಗಳನ್ನು ಇಲ್ಲಿ ಹೇಳುವುದು ಪ್ರಕೃತ.

ಕೌಟಿಲ್ಯನು ಅರ್ಥಶಾಸ್ತ್ರವನ್ನು ಶುಕ್ರ ಮತ್ತು ಬೃಹಸ್ಪತಿ ಗಳನ್ನು ಪ್ರಾರ್ಥಿಸಿ ಪ್ರಾರಂಭಿಸುತ್ತಾನೆ. ವೈಜ್ಞಾನಿಕ ರೀತಿ ಯಲ್ಲಿ ಸಾಮಾಜಿಕ ಮತ್ತು ರಾಜಕೀಯ ಸಮಸ್ಯೆಗಳನ್ನು ಪರೀ ಕ್ಷಿಸುವುದಕ್ಕೆ ಶಾಸ್ತ್ರ ಎಂದು ಹೆಸರು. ಪೂರ್ವಪಕ್ಷ, ಉತ್ತರ ಪಕ್ಷ ಮತ್ತು ಸಿದ್ಧಾಂತ ಎಂದು ತೀರ್ಮಾನಕ್ಕೆ ಬರಬೇಕಾದರೆ

ೀಕಾಗುವ ೩ ಹಂತಗಳು ಕಂಡುಬರುತ್ತವೆ. ವಸ್ತು ವಿಷಯಗಳನ್ನು ವಿಪರ್ಯಾಯ, ವಾಕ್ಯವಿಶೇಷ, ಅನುಮಾನ, ವ್ಯಾಖ್ಯಾನ, ವರ್ಜನ, ನಿದರ್ಶನ ಮತ್ತು ಅನಾಗತವೀಕ್ಷಣ ಎಂದೂ, ಸ್ಥಳಸನ್ನಿವೇಶ, ಸಂಶಯ, ಅಂತರ್ಯ, ಅಂತರಗಳಾಗಿ ವಿಭಜಿಸಿ ತ್ವಾಂಶಗಳನ್ನೂ ಪರೀಕ್ಷೆಮಾಡಿವೆ. ವಿಕಲ್ಪ, ಸಮುಚ್ಚಯ ಮತ್ತು ಊಹ್ಯ ಎಂದು ಉತ್ತರೋತ್ತರಗಳನ್ನು ನೋಡಿ ಪರೀಕ್ಷೆ ಮಾಡಿವೆ. ಪದಗಳ ಬಹುಪ್ರಯೋಗಗಳನ್ನು ವಿವರಿಸಿ ಬಗೆ ಗೆಯ ರಾಜಕಾರ್ಯ ಜಾಲವನ್ನು ಚಿತ್ರಿಸುವುದಕ್ಕಾಗಿ ಕೌಟಿಲ್ಯನು 'ಸ್ವಸಮುಜ್ಞ' ಮೊದಲಾದ ಪದಗಳನ್ನೇ ನಿರ್ಮಿಸಿ ದ್ದಾನೆ. ಸರ್ಕಾರದ ಮತ್ತು ಸಮಾಜದ ವಿಶೇಷ ಪರಿಸ್ಥಿತಿಗಳನ್ನು ಣ್ಣಾರ ನೋಡಿ ಅನುಭವಿಸಿದ ದೃಷ್ಟಾಂತ ಇವನ ತೀರ್ಮಾನ ಗಳಲ್ಲಡಗಿದೆ. ಅರಿಸ್ಟಾಟಲ್‌ನಂತೆ ತನ್ನ ತತ್ತ್ವಗಳನ್ನು ಕಾರ್ಯರೂಪಕ್ಕೆ ತಂದು ಒರೆ ಹಚ್ಚುತ್ತಾನೆ.

'ಸರ್ವಶಾಸ್ತ್ರಾಣ್ಯನುಕ್ರಮ್ಯ ಪ್ರಯೋಗಾನುಪಲಭ್ಯ ಚ'

ಮಾನವ ಪ್ರಪಂಚದಲ್ಲಿ ಸಂಗತಿಗಳು ದೈವನಿಯಮದಂತೆ ಜರುಗುತ್ತವೆ, ಅಥವಾ ಮಾನವನ ಬುದ್ಧಿಗೆ ಮೀರಿದ ಒಂದು ಪ್ರಪದ ಕೈವಾಡವಿದೆ, ಅಥವಾ ಎಲ್ಲವೂ ದೈವಲೀಲೆ, ಈ ರನಾದ ಅಪೌರುಷ ತತ್ತ್ವವನ್ನು ಅಲ್ಲಗಳೆಯುತ್ತಾನೆ. ಸಮಾಜದ ಭವ್ಯ ನಿರ್ಮಾಣವು ದೇವರ ಕೈಯಲ್ಲಿ ಇಲ್ಲ. ಅದು ಮಾನವನ ಹಿಡಿತದಲ್ಲಿಯೇ ಇದೆ, ರಾಜನು ತನ್ನ ಉದ್ಯಮ ದಿಂದ ಮಾನವನ ಸ್ಥಿತಿಯನ್ನೇ ಬದಲಾಯಿಸಿ ಯುಗಪುರುಷ ನಾಗಬಹುದು ಎನ್ನುವುದು ಅವನ ವಾದ.

'ನಕ್ಷತ್ರಮಿತಿ ಪೃಚ್ಛಂತಂ ಬಲಮರ್ಥೋಽತಿವರ್ತತೇ
ಅರ್ಥೋ ಹ್ಯರ್ಥಸ್ಯ ನಕ್ಷತ್ರಂ ಕಿಂ ಕರಿಷ್ಯಂತಿತಾರಕಾಃ

ಎಲ್ಲವೂ ನಕ್ಷತ್ರಫಲ ಎಂದು ನಂಬುತ್ತಿದ್ದ ಆ ಕಾಲದಲ್ಲಿ ಪುರುಷನ "ಉದ್ಯಮಕ್ಕೆ" ಪ್ರಾಮುಖ್ಯತೆಯನ್ನು ಕೊಡುವ ಅವನ ವಾದವು ಎಷ್ಟು ಕ್ರಾಂತಿಕರ ಮತ್ತು ಎಷ್ಟು ಆಧುನಿಕ ವಾಗಿ ಕಾಣುತ್ತದೆ!

ಕೌಟಿಲ್ಯನಿಗೆ ದಂಡನೀತಿಯೆಂದರೆ ನಾಲ್ಕು ಕಾರ್ಯಕ್ರಮ ಗಳು " ಅಲಬ್ಧಸ್ಯ ಲಭ್ಯಾರ್ಥಃ " ಇಲ್ಲದಿರುವುದನ್ನು ಸಂಪಾದಿ ಸುವುದು. "ಲಬ್ಧ ಪರಿರಕ್ಷಣ " ಗಳಿಸಿದುದನ್ನು ಉಳಿಸುವುದು. "ರಕ್ಷಿತ ವಿವರ್ಧಿನೀ " ಹಾಗೆ ಉಳಿಸಿದುದನ್ನು ಇನ್ನೂ ಹೆಚ್ಚಿಸು ವುದು. "ವೃದ್ಧಸ್ಯ ತೀರ್ಥೇಷು ಪ್ರತಿಪಾದಿನೀ" ಹಾಗೆ ಹೆಚ್ಚಿದು ದನ್ನು ಅರ್ಹರಾದವರಿಗೆ ಹಂಚುವುದು. ಇವುಗಳೇ ದಂಡ ನೀತಿಯ ವಸ್ತು. ದಂಡನೀತಿಯ ಮೊದಲು ಎರಡು ಅಂಗಗಳು ಕೌಟಿಲ್ಯನ ಕಾಲಕ್ಕೆ ಮೊದಲೇ ಗೊತ್ತಿದ್ದವು. ಆದರೆ ರಕ್ಷಿತ ವಿವರ್ಧಿನೀ ಮತ್ತು ವೃದ್ಧಸ್ಯ ಪ್ರತಿಪಾದಿನೀ ಎನ್ನುವ ಗುರುತರ ರಾಜ್ಯಾಂಗ ನೀತಿಯ ಕಾರ್ಯಾಂಗಗಳನ್ನು ಕಂಡು ಹಿಡಿದವನು ಕೌಟಿಲ್ಯನು. ಇವುಗಳನ್ನು ತನ್ನ ಅರ್ಥಶಾಸ್ತ್ರದಲ್ಲಿ ಅಳವಡಿಸಿ, ಅವುಗಳು ಹೇಗೆ ಸಾಧ್ಯ ಎನ್ನುವುದನ್ನು ತೋರಿಸಿಕೊಟ್ಟಿದ್ದಾನೆ. ಕೌಟಿಲ್ಯನಿಗೆ "ರಕ್ಷಿತವಿವರ್ಧಿನೀ " ಎಂದರೆ ದೇಶದ ಆದಾಯ ವನ್ನು ಹೆಚ್ಚಿಸಲು ಪ್ರಕೃತಿಯ ಸಂಪತ್ತನ್ನು ಉಪಯೋಗಿಸು ವುದು. ಈ ಮೂಲಕ ದೇಶದಲ್ಲಿ ಶಾಂತಿ, ಸುಭಿಕ್ಷತೆಯನ್ನುಂಟು ಮಾಡಿ ಧರ್ಮಸ್ಥಾಪನೆಯನ್ನು ಮಾಡುವುದು.

ರಾಜ್ಯಾಂಗ ನೀತಿಗೆ ನೈತಿಕ ತಳಹದಿಯನ್ನು ಹಾಕುವುದಕ್ಕೆ ಪ್ರಯತ್ನಿಸಿದವರಲ್ಲಿ ಪ್ಲೇಟೋ ಮತ್ತು ಅರಿಸ್ಟಾಟಲ್ ಮುಖ್ಯ ರಾದವರು. ಕೌಟಿಲ್ಯನು ಆ ಪ್ರಸಿದ್ಧ ಜ್ಞಾನಿಗಳಂತೆ ರಾಜ್ಯಾಂಗ ವಿಧಾನಕ್ಕೂ ನೀತಿಶಾಸ್ತ್ರಕ್ಕೂ ಯಾವ ವ್ಯತ್ಯಾಸವೂ ಇಲ್ಲವೆಂದು

ಸಂಘಜೀವನಕ್ಕೆ ಆತ್ರೇಯು ಪಟ್ಟಡನನ್ನು ತೊಡಿಸುತ್ತಾನೆ. ಸಾತ್ವಿಕಜೀವನಕ್ಕೆ, ಸೌಖ್ಯಕ್ಕೆ ಸಾಧನ ಇದೇ ಪ್ರಕೃತಿ ನಿಯಮ ಎಂದು ಮೂವರೂ ನಂಬುತ್ತಾರೆ. ಆದರೆ ಪ್ಲೇಟೋ ಕೈಗೆ ನಿಲುಕದ ಧ್ಯೇಯಗಳನ್ನು ತೋರಿಸುತ್ತಾನೆ. ಅರಿಸ್ಟಾಟಲ್ ಉದಾತ್ತಧ್ಯೇಯಗಳನ್ನು ವಾಸ್ತವ ಪ್ರಪಂಚಕ್ಕೆ : ಕೆಳಗಿಳಿಸಿ ಬಿಡುತ್ತಾನೆ. ಕೌಟಿಲ್ಯನ ದಾರಿ ಬೇರೆ. ಕೌಟಿಲ್ಯನು ವಾಸ್ತವತೆಯನ್ನು ಆತ್ಮಬಲದಿಂದ ಧ್ಯೇಯದ ಉನ್ನತಮಟ್ಟಕ್ಕೆ ಏರಿಸುತ್ತಾನೆ.

ಜೀವಾತ್ಮನನ್ನು ಕಂಡು ನಾನು ತಾನು ಎನ್ನುವುದನ್ನು ತೊರೆದು ಅಂತರಾತ್ಮನಿಗೂ ಪರಮಾತ್ಮನಿಗೂ ಇರುವ ಅಂತರವನ್ನು ಹೋಗಲಾಡಿಸಿ ಪರಬ್ರಹ್ಮನಲ್ಲಿ ಬೆರೆತು ಲೋಕೋಪಕಾರಿಯಾಗಿ ಅತ್ಯುತ್ತಮ ಜೀವನ ನಡೆಸುವವನನ್ನು ಕೌಟಿಲ್ಯನು 'ತೀರ್ಥ' ಎಂದು ಕರೆಯುತ್ತಾನೆ. 'ತೀರ್ಥ' ಎಂದರೆ ಸಾಮಾನ್ಯವಾದ ಅರ್ಥ ಹಾಯ್ಗಡಲು ಎಂದು. ತೀರ್ಥನಾದವನು ಜೀವನದ ಅಂಬಿಗನು—ಈ ಪ್ರಪಂಚದಿಂದ ಮುಂದಿನ ಪ್ರಪಂಚಕ್ಕೆ ದಾಟಿಸುವವನು, ಮಾನವನನ್ನು ದೇವನನ್ನಾಗಿ ಮಾಡುವವನು. ದುಸ್ಥಿತಿಯಲ್ಲಿದ್ದ ದೇಶವನ್ನು ಉತ್ತಮಸ್ಥಿತಿಗೆ ತರುವವನು, ಆತ್ಮನ ಅಂತಃಕರಣಗಳು ಕುರುಡಾಗಿರುವವನನ್ನು ಕೈಹಿಡಿದು ಕರೆದೊಯ್ಯುವವನು.

ಹಿಂದೆ ಅಜಾತಶತ್ರುವು 'ತಿತಿಯ' ರೆಂಬ ಆ ಕಾಲದ ಪ್ರಸಿದ್ಧ ಗುರುಗಳ ದರ್ಶನಕ್ಕಾಗಿ ಯಾತ್ರೆ ಮಾಡುತ್ತಿದ್ದನಂತೆ. ಜೈನರು ತಮ್ಮ ಗುರುಗಳನ್ನು 'ತೀರ್ಥಂಕರ'ರು ಎಂದು ಕರೆದರು. ಮಹಾಭಾರತದಲ್ಲಿ ವಿಷ್ಣುವನ್ನು ತೀರ್ಥಂಕರ ಎಂದು ಹೇಳಿದೆ. ಇದರಿಂದ ತೀರ್ಥರಿಗೆ ಹಿಂದೂ ಸಮಾಜದಲ್ಲಿ ಹೇಗೆ

ಪ್ರೂಜ್ಯಸ್ಥಾನವಿತ್ತು ಎನ್ನುವುದು ತಿಳಿಯ ಬರುತ್ತದೆ. ಆದುದ ರಿಂದಲೇ ಕೌಟಿಲ್ಯನು ತನ್ನ ದಂಡನೀತಿಯಲ್ಲಿ ತೀರ್ಥಯಾತ್ರೆಯ ಪ್ರತಿಪಾದನೆಯನ್ನು ಅಂತಿಮ ಗುರಿಯಾಗಿ ಇಟ್ಟಿರುವುದು. ದಂಡನೀತಿಯ ಮುಖ್ಯಗುರಿ ತತ್ತ್ವಜ್ಞಾನಿಗೆ ಆಶ್ರಯವನ್ನಿತ್ತು, ಜ್ಞಾನದ ಬೆಳವಣಿಗೆಗೆ ಅವಕಾಶವನ್ನು ಕಲ್ಪಿಸುವುದು. ಈ ಮೂಲಕ ವೇದ ವಿದ್ಯೆಯಲ್ಲಿ ವಿಚಾರ ತರಂಗಗಳನ್ನೆಬ್ಬಿಸಿ ಪರಮಾರ್ಥಕ್ಕೆ ಪಥವನ್ನು ಕಂಡು ಹಿಡಿದು ಮಾನವಕುಲವನ್ನು ರೂಪುಗೊಳಿಸುವುದು. ಅಶೋಕನು ಇಂಥ ತತ್ತ್ವಜೀವಿಗಳು ಗೃಹಸ್ಥರಾಗಲೀ, ಸನ್ಯಾಸಿಗಳಾಗಲೀ, ಶೂದ್ರರಾಗಲೀ, ಅವರ ಪ್ರತಿಪಾದನೆಗಳು ಪರಸ್ಪರ ವಿರುದ್ಧವಾದರೂ ಅವರಿಗೆ ದಾನ ಧರ್ಮಾದಿಗಳನ್ನು ಮಾಡಿ ಸನ್ಮಾನಿಸುತ್ತಿದ್ದನು. ಇದಕ್ಕಾಗಿ ಕೌಟಿಲ್ಯನು ದಂಡನೀತಿಯ ನಾಲ್ಕನೇ ಕಾರ್ಯಕ್ರಮಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಟ್ಟು ರಾಜನು ತೀರ್ಥರನ್ನು ಕಂಡುಹಿಡಿದು ಅವರಿಗೆ ತನ್ನ ಹೆಚ್ಚಿದ ಐಶ್ವರ್ಯವನ್ನು ಹಂಚ ಬೇಕೆಂದು ವಿಧಿಸಿದ್ದಾನೆ.

‘ ವೃದ್ಧಸ್ಯ ತೀರ್ಥೇಷು ಪ್ರತಿಪಾದಿನೀ.’

ತೀರ್ಥನು ಸಮಾಜದ ಚೇತನ ಮತ್ತು ನಿಶ್ಚೇತನ ಶಕ್ತಿಗಳ ಮಧ್ಯೆ ಸ್ಥಿತಮನಸ್ಸುಳ್ಳವನು. ಸರ್ವಸಮನ್ವಯತೆ ತೀರ್ಥನ ತತ್ವ. ಅನಿತ್ಯತೆಯ ಸಂಪರ್ಕದಿಂದ ನೈಜತೆಯನ್ನು ಹೊಂದು ವುದನ್ನು ಕಾಣಬಲ್ಲ ‘ ಸಮದರ್ಶಿ ’. ಜೀವನದಲ್ಲಿ ಕಂಡುಬರುವ ಎಲ್ಲಾ ಬಗೆಯ ಪರಸ್ಪರ ವಿರುದ್ಧ ವಸ್ತು ವಿಷಯಗಳನ್ನೆಲ್ಲಾ ಶಾಂತಿ ಸೌಹಾರ್ದತೆಗಳಿಗೊಳಪಡಿಸುವುದು ಅವನ ಗುಣ ವಿಶೇಷ. ಸೂಕ್ಷ್ಮಗ್ರಾಹಿ ಜೀವಿಗಳ, ಸಸ್ಯಗಳ ಮತ್ತು ಪ್ರಾಣಿ ಗಳಲ್ಲೆಲ್ಲ ಕಂಡು ಬರುವ ಸಜೀವ ತತ್ವವನ್ನು ಅರಿಯಬಲ್ಲ

ಜಾಣ. ಸಮಾಜದ ಜೀವನಾಡಿಯನ್ನು ಹಿಡಿಸಿ ಸಮಾಜವನ್ನು ಉತ್ತಮ ಸಾರ್ಥಕತೆಗೆ ಎತ್ತುವವನು ತೀರ್ಥ. ಸಮಾಜವು ಬದಿಗೆಟ್ಟಿರುವಾಗ ಅದಕ್ಕೆ ಕಾರಣವಾದ ಹಳೆಯ ಕಂದಾಚಾರ ಸಂಪ್ರದಾಯಗಳನ್ನು ಹೋಗಲಾಡಿಸಿ, ಸಮಾಜದ ಆತ್ಮದ ನಿಜವಾದ ಬಣ್ಣವನ್ನು ಕಂಡುಹಿಡಿದು ಸಮಾಜದ ನಡೆನುಡಿಗಳಲ್ಲೆಲ್ಲಾ ಹೊಸ ಚೈತನ್ಯವು ಉಕ್ಕುವಂತೆ ಮಾಡುವವನು.

ಹಿಂದುವಿನ ಆತ್ಮೀಯ ಸಂಸ್ಕೃತಿಯು ಹಿಂದೂ ನಾಗರಿಕತೆಯ ಎಲ್ಲಾ ಛಾಯೆಗಳನ್ನೂ ಒಳಗೊಂಡಿತ್ತು. ಈ ವಿಚಾರದಲ್ಲಿ ಮ್ಯಾಕ್ಸ್‌ಮುಲ್ಲರ್ ಈ ರೀತಿ ಹೇಳಿದ್ದಾನೆ:—"ಇಂಡಿಯಾ ದೇಶದ ಸಾಹಿತ್ಯದ ಮಟ್ಟವು ಪ್ರಪಂಚದಲ್ಲಿ ಇನ್ನೆಲ್ಲಿಯೂ ಇಲ್ಲ. ಹಾಗೆಯೇ ಅದರ ನಾಗರಿಕತೆಗೂ ಒಂದು ವೈಶಿಷ್ಟ್ಯವಿದೆ. ಆ ವೈಶಿಷ್ಟ್ಯವೇನೆಂದರೆ, ದೇಶವೇ ಆತ್ಮಸತ್ಯದ ಕಡೆಗೆ ಬಾಗಿದೆ. ನಾಡಿನ ಒಂದು ಅಂಚಿನಿಂದ ಇನ್ನೊಂದು ಅಂಚಿನವರೆಗೂ ಎಲ್ಲೆಲ್ಲಿಯೂ ಜನರು ಸತ್ಯಾನ್ವೇಷಣೆಯಲ್ಲಿ, ಆತ್ಮೀಯ ಸ್ವಾತಂತ್ರ್ಯ ಸಾಧನೆಯಲ್ಲಿ ತೊಡಗಿದ್ದಾರೆ. ದೇಶವೇ ತತ್ವ ಸಾಧನೆಗಾಗಿ ಸೃಜಿಸಲ್ಪಟ್ಟಿದೆ. ದೇಶವೇ ಆತ್ಮೀಯ ಮುನ್ನಡೆಗೆ ಯಂತ್ರೋಪಕರಣವಾಗಿದೆ. ಕುಟುಂಬವೇ ಆತ್ಮೀಯ ತಳಹದಿಯ ಮೇಲೆ ಕಟ್ಟಲ್ಪಟ್ಟಿದೆ. ನಿತ್ಯ ಜೀವನವೇ ತರಗತಿಗಳಾಗಿ ವಿಂಗಡಿಸಲ್ಪಟ್ಟು ಆತ್ಮೀಯ ಮುನ್ನಡೆಗೆ ಅನುಕೂಲ ಮಾಡಲ್ಪಟ್ಟಿದೆ". ಆತ್ಮೀಯ ಸಾಧನೆಗಳಿಗೆ ತೌರೂರಾದ ಭರತಖಂಡವು ಕ್ಷಯಿಸುತ್ತಿರುವ ದೃಶ್ಯವು ಕೌಟಿಲ್ಯನಿಗೆ ಗೋಚರವಾಗದೆ ಇರಲಿಲ್ಲ. ಬೌದ್ಧಮತ ಪ್ರಚಾರದಿಂದ ಆಶ್ರಮಧರ್ಮವು ಹಾಳಾಗಿತ್ತು. ಯಾವುದರಮೇಲೆ ಧರ್ಮ ಮೋಕ್ಷಗಳೆರಡೂ ನಿಂತಿದ್ದುವೋ ಆ ಅರ್ಥವನ್ನೇ ಜನರು ಕಡೆಗಣಿಸಿದ್ದರು.

ಗೃಹಸ್ಥನು ಕರ್ತವ್ಯ ಬಾಹಿರನಾಗಿ ಸಾಮಾಜಿಕ ಮತ್ತು ಆರ್ಥಿಕ ಜೀವನದಿಂದ ತಪ್ಪಿಸಿಕೊಂಡು ತ್ಯಾಗಿಯಾಗುವ ಮಹದಾಸೆ ಯಿಂದ ಧ್ಯಾನ ಮನಸ್ಕನಾಗುವ ಸ್ಥಿತಿಯುಂಟಾಗಿತ್ತು. ವಾನಪ್ರಸ್ಥ ಮತ್ತು ಸನ್ಯಾಸ ಆಶ್ರಮಗಳ ಉದ್ಧಾಮ ಜೀವನ ಮಾರ್ಗಗಳು ಗೃಹಸ್ಥ ಜೀವನವನ್ನು ಆಕ್ರಮಿಸಿಕೊಂಡಿದ್ದುವು. ಹೀಗೆ ಸಂತೋಷಮಯವಾದ ಗೃಹಸ್ಥ ಜೀವನವು ಯಾವಾಗ ಕ್ರಮತಪ್ಪಿತೋ ಐಹಿಕ ಜೀವನದ ಆಧಾರವೇ ಅಲುಗಿತು. ಅರ್ಥ ಕಾಮಯುಕ್ತವಾದ ಜೀವನವನ್ನೇ ಕತ್ತರಿಸಿ ಧರ್ಮ ಜೀವನವನ್ನು ಬೆಳಸುವುದು ಕೌಟಿಲ್ಯನಿಗೆ ಅಷ್ಟು ಹಿಡಿಸಲಿಲ್ಲ. ಸಮಾಜವೆಲ್ಲವೂ ಆತ್ಮೀಯ ವಿಷಯಗಳಲ್ಲಿ ಮಗ್ನವಾದರೆ ಧರ್ಮದ ಅಡಿಗಲ್ಲಾದ ಅರ್ಥವನ್ನೇ ಕಿತ್ತರೆ ಸಮಾಜ ಹಾಳಾ ಗುತ್ತದೆ ಎಂದು ಎಚ್ಚರಿಕೆ ಕೊಟ್ಟನು. ಶಬ್ದಕ್ಕೂ ಅರ್ಥಕ್ಕೂ ಇರುವ ಸಂಬಂಧದಂತೆ ಗಂಧಕ್ಕೂ ಸೌಂದರ್ಯಕ್ಕೂ ಇರುವ ಹೊಂದಿಕೆಯಂತೆ ಅರ್ಥ ಧರ್ಮಗಳೆರಡೂ ದಂಪತಿಗಳು. ಅವೆರಡನ್ನೂ ವಿಚ್ಛೇದಿಸುವುದಾದರೆ ಅಥವಾ ರಾಜದಂಡವನ್ನು ಧರ್ಮದಂಡದಿಂದ ಬೇರ್ಪಡಿಸುವುದಾದರೆ ರಾಜ್ಯಕ್ಕೆ "ಮತ್ಸ್ಯ ನ್ಯಾಯವೇ" ಗತಿ. ಅಂತಃಕರಣವಿಲ್ಲದ, ಗುರಿಗಳಿಲ್ಲದ, ಯೌವ್ವನವಿಲ್ಲದ, ನೀತಿನಿಯಮಗಳಿಲ್ಲದ ಮಠಾಧಿಕಾರಿಗಳ ನಿರಂಕುಶಾಧಿಕಾರವೇ ಕೊನೆಗೆ ಕಾದಿರುವುದು.

ಭರತಖಂಡವು ವಿಚಾರಭರಿತವಾದ ಸರ್ಕಾರವನ್ನು ಸ್ಥಾಪಿಸಿ ಮನುಷ್ಯ ಸಮಾಜಕ್ಕೆ ಮಾದರಿಯಾದ ರೂಪುರೇಷೆಯ ಗಡಿಯನ್ನು ನಿರ್ಮಿಸಿದನು. ವರ್ಣಾಶ್ರಮ ಧರ್ಮವನ್ನು ಅನುಸರಿಸುವುದರಿಂದ ಜೀವನ ತುಂಬುತ್ತದೆ. ಮನುಷ್ಯನಿಗೆ ಇದರಲ್ಲಿ ಕ್ರಮವರಿತು ನಡೆಯಲು ಮಾರ್ಗದರ್ಶಕ ಗುರು

ವೊಬ್ಬನು ಬೇಕು. ಅಲ್ಲದೆ, ಮಾರ್ಗವನ್ನು ಬಯಸುವವನು ಮಾರ್ಗ ತಪ್ಪದಂತೆ ಸಂರಕ್ಷಿಸುವ ಗುರುವಿರಲೇಬೇಕು. ಕೌಟಿಲ್ಯನು ಈ ಗುರುತ್ವಕ್ಕಾಗಿ ಪುರೋಹಿತನನ್ನು ತೋರಿಸಲಿಲ್ಲ ಅಥವಾ ವೇದಾಂತಿಯನ್ನು ನಿಯಮಿಸಲಿಲ್ಲ. ಸ್ವಾಮಿಯೇ ರಾಜ್ಯಾಂಗ ಜನ್ಮವೆತ್ತ ಮೂರ್ತಿ—ಮನುಷ್ಯನು ತನ್ನ ಆತ್ಮೀಯತೆಯನ್ನು ತಾನು ಅರಿಯುವಂತೆ ಮಾಡುವ ಮಾರ್ಗದರ್ಶಿ.

ಕೌಟಿಲ್ಯನು ತನ್ನ ಭಾರತವನ್ನು "ಚತುರ ಮಹೀ" ಎಂದು ಕರೆಯುತ್ತಾನೆ. "ದೇಶಃ ಪೃಥಿವ್ಯಾಂ ತಸ್ಯಾಂ ಹಿಮವತ್ ಸಮುದ್ರಾಂತರಮ್ ಉದೀಚೀನಾಂ ಯೋಜನಸಹಸ್ರ ಪರಿಮಾಣಂ ತಿರ್ಯಕ್ ಚಕ್ರವರ್ತಿ ಕ್ಷೇತ್ರಂ ತತ್ರಾರಣ್ಯೋ ಗ್ರಾಮಃ ಪರ್ವತಶ್ಚೋದಕೀ ಭೂಮಿಃ ಸಮೋ ವಿಷಾಮ ಇತಿ ವಿಶೇಷಃ" ಅರಣ್ಯಗಳಿಂದಲೂ ಹಳ್ಳಿಗಳಿಂದಲೂ ನದಿಗಳಿಂದಲೂ ಸರೋವರಗಳಿಂದಲೂ ಜಲಪಾತಗಳಿಂದಲೂ ಫಲವತ್ತಾದ ಮೈದಾನಗಳಿಂದಲೂ, ಭಾರತ ಧರಣಿಯು ಮೈ ಯೌವನದಿಂದ ತುಂಬಿರಲಿ ವಸಂತ ಋತುವು ಬರಲಿ ಎಂದು ಹಾಡಿದ ಕೋಗಿಲೆ, ಹಿಮಾಲಯ ಪರ್ವತದಿಂದ ಸಮುದ್ರದ ವರೆಗೂ, ಅಖಂಡ ಹಿಂದೂಸ್ಥಾನವು ಏಕೈಕ ರಾಷ್ಟ್ರವಾಗಲಿ ಎಂಬ ಹೊಂಗನಸನ್ನು ಕಂಡ ಅರ್ಥಯೋಗಿ.

ಆ ದಿವ್ಯಶಿಲ್ಪಿಯ ಕನಸನ್ನು ಕಾರ್ಯರೂಪಕ್ಕೆ ತಂದವನು ಅಶೋಕನು. ಆ ಯುಗವು ಬಹಳ ದೊಡ್ಡದು. ಮನುಷ್ಯನು ಮಾನವ ದಿಗಂತದ ಸೊಬಗನ್ನು ಕಂಡನು. ಸ್ವತಂತ್ರ ಭಾರತವು ಒಮ್ಮೊಮ್ಮೆ ಹಿಂದಿರುಗಿ ನೋಡಿ ಕೌಟಿಲ್ಯ, ಚಂದ್ರಗುಪ್ತ, ಬಿಂದುಸಾರ, ಅಶೋಕ, ಇವರುಗಳನ್ನು ಕಂಡು ಹಿಗ್ಗಿ, ಮುಂದಿನ ಹೆಜ್ಜೆಯನ್ನಿಡುವುದು ಮೇಲು.

ಎಂ. ವಿ. ಕೃಷ್ಣರಾವ್

೧. ಪ್ರವೇಶ

ಹಿಂದೂ ರಾಜಕೀಯವು ಅತಿ ಪುರಾತನವಾದುದು. ಇದರ ಮೂಲತತ್ವಗಳು ಋಗ್ವೇದದ ಕಾಲದಲ್ಲೇ ಸ್ಪಷ್ಟವಾಗಿ ನಮಗೆ ಗೋಚರವಾಗುವುವು. ಸ್ಮೃತಿ ಮತ್ತು ಪುರಾಣಗಳಲ್ಲಿ ರಾಜಕೀಯ ವಿಷಯಗಳನ್ನು ವಿವರಿಸುವ ಶಾಸ್ತ್ರಕ್ಕೆ ದಂಡನೀತಿ ಅಥವಾ ರಾಜನೀತಿ ಎಂದು ಹೆಸರು. ಆದರೆ ಸ್ಮೃತಿಗಳಲ್ಲೂ ಪುರಾಣಗಳಲ್ಲೂ ರಾಜನೀತಿ ಧರ್ಮಶಾಸ್ತ್ರದೊಂದಿಗೆ ಬೆರೆತಿದೆ. ದಂಡನೀತಿಯೊಂದನ್ನೇ ಪೂರ್ಣವಾಗಿ ವಿವರಿಸುವ ಅತಿ ಪ್ರಾಚೀನಗ್ರಂಥವೆಂದರೆ ಕೌಟಿಲ್ಯನ ಅರ್ಥಶಾಸ್ತ್ರ. ಇದಕ್ಕಿಂತಲೂ ಹಿಂದೆ ಈ ವಿಚಾರವಾಗಿ ಅನೇಕ ದಂಡನೀತಿ ಗ್ರಂಥಗಳು ಇದ್ದುವೆಂದು ಅರ್ಥಶಾಸ್ತ್ರವೇ ತಿಳಿಸುತ್ತದೆ. ಕೌಟಿಲ್ಯನು ತನಗಿಂತಲೂ ಹಿಂದಿನ ದಂಡನೀತಿಕಾರರಾದ ಬೃಹಸ್ಪತಿ, ಭಾರದ್ವಾಜ, ವಾತವ್ಯಾಧಿ, ಪಿಶುನ ಮೊದಲಾದವರ ಮತಗಳನ್ನು ವಿಮರ್ಶೆಮಾಡಿ ತನ್ನ ಮತವನ್ನು ಅರ್ಥಶಾಸ್ತ್ರದಲ್ಲಿ ಸ್ಥಾಪಿಸಿದ್ದಾನೆ. ರಾಜನೀತಿ ಗ್ರಂಥಗಳಲ್ಲೆಲ್ಲಾ ಕೌಟಿಲ್ಯನ ಅರ್ಥಶಾಸ್ತ್ರವು ಅತಿ ಮುಖ್ಯವಾದುದು. ಅದಕ್ಕಿಂತಲೂ ಹಿಂದೆ ರಾಜಧರ್ಮದ ವಿಚಾರವಾಗಿ ನಡೆಸಿದ್ದ ಸಂಶೋಧನೆ ಮತ್ತು ವಿಮರ್ಶೆಗಳ ಸಾರ ಅದರಲ್ಲಿ ಕ್ರೋಡೀಕೃತವಾಗಿದೆ. ಆದುದರಿಂದ ಈಚಿನ ರಾಜನೀತಿಗ್ರಂಥಗಳಿಗೆಲ್ಲಾ ಅದು ಆಧಾರ.

ಅರ್ಥಶಾಸ್ತ್ರವು ಪ್ರಕಾಶಕ್ಕೆ ಬಂದಮೇಲೆ ಹಿಂದೂರಾಜನೀತಿಯ ವಿಚಾರದಲ್ಲಿ ಪಾಶ್ಚಾತ್ಯರಿಗಿದ್ದ ಅನೇಕ ತಪ್ಪು ಅಭಿಪ್ರಾಯಗಳು ತೊಲಗಿ ರಾಜಕೀಯದಲ್ಲಿ ಹಿಂದುಗಳು ಬಹಳ ಆಳವಾಗಿ ಪ್ರವೇಶಿಸಿದ್ದರೆಂದು ಸ್ಪಷ್ಟವಾಯಿತು. ಈ ಮಹಾ

ಗ್ರಂಥವನ್ನು ಬೆಳಕಿಗೆ ತಂದ ಡಾ|| ಆರ್. ಶಾಮಶಾಸ್ತ್ರಿಗಳು ಮೈಸೂರಿಗೆ ಒಂದು ದೊಡ್ಡ ಕೀರ್ತಿಯನ್ನು ಗಳಿಸಿರುತ್ತಾರೆ. ಇವರು ೧೯೦೫ ರಲ್ಲಿ ತಂಜಾವೂರಿನ ಕಡೆಯ ಪಂಡಿತನೊಬ್ಬರಿಂದ ಕೈ ಬರಹದ ಪ್ರತಿಯೊಂದನ್ನು ಸಂಪಾದಿಸಿ ಅದನ್ನು ಇಂಗ್ಲಿಷಿಗೆ ಭಾಷಾಂತರಮಾಡಿ ೧೯೧೫ರಲ್ಲಿ ಪ್ರಕಟಿಸಿದರು. ಅದೇ ಕಾಲದಲ್ಲಿ ಡಾ|| ಟಿ. ಗಣಪತಿಶಾಸ್ತ್ರಿಗಳು ತ್ರಿವೆಂಡ್ರಮಿನ 'ಓರಿಯಂಟಲ್ ಸೀರೀಸ್' ಎಂಬ ಪ್ರಾಚ್ಯ ಪುಸ್ತಕಮಾಲೆಯಲ್ಲಿ ಸಂಸ್ಕೃತ ಪ್ರತಿಯನ್ನು ಅಚ್ಚುಹಾಕಿಸಿದರು. ಅಲ್ಲದೆ ಡಾ|| ಜಾಲಿಯವರು ಪಂಜಾಬಿನ ಸಂಸ್ಕೃತ ಗ್ರಂಥಮಾಲೆಯಲ್ಲಿ ಇನ್ನೊಂದು ಸಂಸ್ಕರಣವನ್ನು ಪ್ರಚುರಪಡಿಸಿದರು. ಅಲ್ಲಿಂದೀಚೆಗೆ ಕೌಟಿಲ್ಯನನ್ನು ಕುರಿತು ಅನೇಕ ವಿಮರ್ಶಾತ್ಮಕವಾದ ಗ್ರಂಥಗಳೂ, ಲೇಖನಗಳೂ ಹೊರಬಿದ್ದಿವೆ. ಇವೆಲ್ಲದರ ಪರಿಣಾಮವಾಗಿ ಪ್ರಪಂಚದ ರಾಜನೀತಿಜ್ಞರ ಕಣ್ಣು ತೆರೆಯಿತು. ಈ ಗ್ರಂಥವನ್ನು ಪಾಶ್ಚಾತ್ಯ ದೇಶಗಳ ಅನೇಕ ರಾಜಕಾರ್ಯ ಪಟುಗಳು ಬಹಳ ಆಸಕ್ತಿಯಿಂದ ಓದಿ ಉಪಯೋಗ ಪಡೆದಿದ್ದಾರೆ ಮತ್ತು ಪಡೆಯುತ್ತಲೂ ಇದ್ದಾರೆ. ಹಿಟ್ಲರ್ ಮತ್ತು ಮುಸೊಲಿನಿಯರಂತಹ ವಿಧಾಯಕರೂ ಸಹ ಮ್ಯಾಕಿವೆಲ್ಲಿಯ "ಪ್ರಿನ್ಸ್" ಮತ ಕೌಟಿಲ್ಯನ ಅರ್ಥಶಾಸ್ತ್ರ, ಇವುಗಳಿಂದ ವಿಶೇಷವಾದ ಸ್ಫೂರ್ತಿಯನ್ನು ಪಡೆದಿರಬಹುದೆಂದು ಊಹಿಸಬಹುದಾಗಿದೆ.

ಅರ್ಥಶಾಸ್ತ್ರದ ಕರ್ತೃವು ಯಾರೆಂಬ ವಿಚಾರದಲ್ಲಿ ತೀವ್ರವಾದ ಭಿನ್ನಾಭಿಪ್ರಾಯಗಳಿವೆ. ಕೌಟಿಲ್ಯ ಎಂಬುದು ಗ್ರಂಥಕರ್ತನ ಅಡ್ಡ ಹೆಸರಿರಬಹುದು, ಅಥವಾ ಕೌಟಿಲ್ಯ ಎಂಬುದು ಸಂಪ್ರದಾಯವಾಗಿ ಕೊಟ್ಟ ಹೆಸರಾಗಿ, ಮತ್ತು ಅದು ಗ್ರಂಥಕರ್ತನ ಕುಟಿಲತ್ವವನ್ನು ಸೂಚಿಸುವ ಚಿಹ್ನೆಯಾಗಿರಬಹುದು.

ಗ್ರಂಥದಲ್ಲಿ ಕುಟಿಲೋಪಾಯಗಳೂ ದುಷ್ಟಪದ್ಧತಿಗಳೂ ವರ್ಣಿತವಾಗಿರುವುದರಿಂದ ಒಬ್ಬ ಕುಟಿಲಮಂತ್ರಿಯೇ ಇದನ್ನು ರಚಿಸಿರಬೇಕೆನ್ನುವುದು ಒಂದು ವಾದ. ಗ್ರಂಥಕರ್ತನು ಚಂದ್ರಗುಪ್ತ ಮೌರ್ಯನ ಮಂತ್ರಿಯಾಗಿಯೂ ಪ್ರಸಿದ್ಧನಾಗಿಯೂ ಇದ್ದಲ್ಲಿ ಚಂದ್ರಗುಪ್ತನ ಆಸ್ಥಾನಕ್ಕೆ ರಾಯಭಾರಿಯಾಗಿ ಬಂದಿದ್ದ ಮೆಗಾಸ್ತನೀಸನು ತನ್ನ "ಇಂಡಿಕಾ" ಎಂಬ ಪುಸ್ತಕದಲ್ಲಿ ಇವನ ಹೆಸರನ್ನು ಹೇಳದೆ ಇರುತ್ತಿದ್ದನೆ? ಅವನು ಅರ್ಥಶಾಸ್ತ್ರದ ಹೆಸರನ್ನಾಗಲೀ ಅದರ ಕರ್ತೃವಾದ ಕೌಟಿಲ್ಯನ ಹೆಸರನ್ನಾಗಲೀ ಹೇಳದಿರುವುದರಿಂದ "ಕೌಟಿಲ್ಯ" ಎಂಬುದು ವ್ಯಂಗ್ಯನಾಮವೇ ಹೊರತು ವ್ಯಕ್ತಿನಾಮವಲ್ಲ (ನಿಜವಾದ ಗ್ರಂಥಕರ್ತನ ಹೆಸರಲ್ಲ). ಇದು ವಿಂಟರ್‌ನಿಟ್ಸ್ ಮೊದಲಾದ ಪಂಡಿತರ ಅಭಿಪ್ರಾಯ.

ಅರ್ಥಶಾಸ್ತ್ರವನ್ನು ಬರೆದವನು ಕೌಟಿಲ್ಯನೆಂಬ ಬ್ರಾಹ್ಮಣನೆಂಬುದಕ್ಕೆ ಕೆಲವು ಆಧಾರಗಳಿವೆ. ಕೌಟಿಲ್ಯನೆಂಬ ಬ್ರಾಹ್ಮಣನು ನವನಂದರನ್ನು ನಿರ್ಮೂಲಮಾಡಿ ಚಂದ್ರಗುಪ್ತನನ್ನು ಸಾರ್ವಭೌಮ ಪದವಿಗೆ ಏರಿಸಿದನೆಂದು ವಿಷ್ಣುಪುರಾಣದಲ್ಲಿ ಹೇಳಿದೆ. ನೀತಿಶಾಸ್ತ್ರವನ್ನು ಬರೆದ ಕಾಮಂದಕನ ಹೇಳಿಕೆಯೂ ಇದನ್ನೇ ಸಮರ್ಥಿಸುತ್ತದೆ. ದಂಡಿ ತನ್ನ ದಶಕುಮಾರ ಚರಿತೆಯಲ್ಲಿ ವಿಷ್ಣುಗುಪ್ತನೆಂಬ ಬ್ರಾಹ್ಮಣನು ಮೌರ್ಯರ ಉಪಯೋಗಕ್ಕಾಗಿ ಹಿಂದಿನ ಅರ್ಥಶಾಸ್ತ್ರಗಳ ಸಾರರೂಪವಾದ ಆರು ಸಾವಿರ ಶ್ಲೋಕಗಳುಳ್ಳ ಅರ್ಥಶಾಸ್ತ್ರ ಗ್ರಂಥವನ್ನು ರಚಿಸಿದನೆಂದು ಹೇಳಿದ್ದಾನೆ. ಬಾಣನು ಕೌಟಿಲ್ಯನ ಅರ್ಥಶಾಸ್ತ್ರವು ಕುಟಿಲನೀತಿ ಎಂದು ಹೇಳಿದ್ದಾನೆ. ಪಂಚತಂತ್ರದ ಕರ್ತೃವೂ ಕೂಡ ಅರ್ಥ

ಶಾಸ್ತ್ರವನ್ನು ಬರೆದವನು ಚಾಣಕ್ಯನೆಂಬ ಬ್ರಾಹ್ಮಣನೆಂದು ತಿಳಿಸಿದ್ದಾನೆ.

ಕೌಟಿಲ್ಯನ ಹೆಸರಿನ ವಿಚಾರವಾಗಿ ಇನ್ನು ಕೆಲವು ಊಹೆಗಳಿವೆ. ಕುಟಿಲ ಗೋತ್ರದವನಾದುದರಿಂದ ಅರ್ಥಶಾಸ್ತ್ರದ ಗ್ರಂಥಕರ್ತನಿಗೆ ಕೌಟಿಲ್ಯನೆಂಬ ಹೆಸರು ಬಂದಿತೆಂದು ಚಣಕವೆಂಬ ಪಟ್ಟಣದಲ್ಲಿ ಹುಟ್ಟಿದುದರಿಂದ ಚಾಣಕ್ಯನೆಂದೂ ವಿಷ್ಣುಗುಪ್ತನೆಂಬುದು ತಂದೆತಾಯಿಗಳು ಇಟ್ಟ ಹೆಸರೆಂದೂ ಡಾ|| ಗಣಪತಿಶಾಸ್ತ್ರಿಗಳ ಊಹೆ. ಒಟ್ಟಿನಲ್ಲಿ ಕೌಟಿಲ್ಯನು ಕಾಲ್ಪನಿಕ ವ್ಯಕ್ತಿಯಲ್ಲ; ಚಂದ್ರಗುಪ್ತನ ಕಾಲದ ಇತಿಹಾಸದಲ್ಲಿ ಅತ್ಯಂತ ಮುಖ್ಯ ಪಾತ್ರವನ್ನು ವಹಿಸಿದ್ದ ವ್ಯಕ್ತಿ ಎಂಬುದು ಆಧುನಿಕ ವಿದ್ವಾಂಸರನೇಕರ ಅಭಿಮತ.

ಕೌಟಿಲ್ಯನ ಅರ್ಥಶಾಸ್ತ್ರವು ಬಹು ದೊಡ್ಡ ಗ್ರಂಥ. ಇದು ಹದಿನೈದು ಅಧಿಕರಣಗಳಾಗಿಯೂ, ನೂರೈವತ್ತು ಪ್ರಕರಣಗಳಾಗಿಯೂ ವಿಭಾಗಿಸಲ್ಪಟ್ಟಿದೆ. ದಂಡನೀತಿಯ ಸ್ವರೂಪ, ದಂಡನೀತಿಗೂ ಇತರ ಶಾಸ್ತ್ರಗಳಿಗೂ ಇರುವ ಸಂಬಂಧ, ರಾಜನ ವಿದ್ಯಾಭ್ಯಾಸ, ಮಂತ್ರಿಗಳ ಮತ್ತು ಅಧಿಕಾರಿಗಳ ಕರ್ತವ್ಯ, ರಾಜ್ಯಾಡಳಿತದ ವ್ಯವಸ್ಥೆ, ವ್ಯವಸಾಯ, ವಾಣಿಜ್ಯ ಮುಂತಾದ ಆರ್ಥಿಕವ್ಯವಸ್ಥೆ, ಯುದ್ಧ ಮತ್ತು ಶಾಂತಿನೀತಿ, ರಾಜ್ಯಾಂಗಗಳು, ಪ್ರಭುತ್ವದ ಏಳಿಗೆ ಮತ್ತು ಅಳಿವು—ಹೀಗೆ ರಾಜ್ಯಶಾಸ್ತ್ರದ ಎಲ್ಲ ಅಂಶಗಳೂ ಇಲ್ಲಿ ಅಡಕವಾಗಿವೆ. ಒಂದೊಂದು ಅಧಿಕರಣದ ಮೇಲೂ ಒಂದೊಂದು ಪುಸ್ತಕವನ್ನು ಬರೆಯಬಹುದು. ಆದರೆ ಇಲ್ಲಿ ದೊರೆತಿರುವ ಸ್ವಲ್ಪ ಅವಕಾಶದಲ್ಲಿ ಎಲ್ಲವನ್ನೂ ವಿವರಿಸುವುದು ಸಾಧ್ಯವಿಲ್ಲ. ಅಲ್ಲದೆ ಗ್ರಂಥದ ಎಲ್ಲ

ಅಂಶಗಳಲ್ಲೂ ಎಲ್ಲರಿಗೂ ಆಸಕ್ತಿ ಇರುವುದಿಲ್ಲ. ಆದುದರಿಂದ ಮುಖ್ಯವಾಗಿ ರಾಷ್ಟ್ರದ ಸ್ವರೂಪ, ರಾಷ್ಟ್ರದ ಉದ್ದೇಶ, ರಾಷ್ಟ್ರದ ಸಪ್ತಾಂಗಗಳು, ಅವುಗಳಿಗಿರುವ ಪರಸ್ಪರ ಸಂಬಂಧ, ಮಂತ್ರಾಲೋಚನೆ, ಆಡಳಿತಕ್ರಮ, ಸಾಮಾಜಿಕ ಜೀವನದ ವ್ಯವಸ್ಥೆ- ಇವುಗಳನ್ನು ಮಾತ್ರ ವಿವರಿಸಲಾಗಿದೆ. ಯುದ್ಧದ ರೀತಿನೀತಿಗಳನ್ನೂ ಕುಟಿಲತಂತ್ರೋಪಾಯುಗಳನ್ನೂ ಕೌಟಿಲ್ಯನು ಅನೇಕ ಪ್ರಕರಣಗಳಲ್ಲಿ ವಿವರಿಸಿದ್ದರೂ, ಇಲ್ಲಿ ಅವುಗಳ ಗೋಜಿಗೆ ಕೈಹಾಕಿಲ್ಲ.

ಮೌರ್ಯರಾಜ್ಯವು ಸ್ಥಾಪನೆಯಾಗುವುದಕ್ಕೆ ಮುಂಚೆ ಉತ್ತರ ಹಿಂದೂಸ್ಥಾನದಲ್ಲಿ ಯಾವ ಪ್ರಬಲರಾಜ್ಯಗಳೂ ಇರಲಿಲ್ಲ. ರಾಜರು ರಾಗದ್ವೇಷಗಳಿಗೆ ಒಳಗಾಗಿ ಒಬ್ಬರೊಡನೊಬ್ಬರು ಕಾದಾಡಿ ಪರಸ್ಪರ ಪ್ರಭುಶಕ್ತಿಗೆ ಕಂಟಕಪ್ರಾಯರಾಗಿದ್ದರು. ಪ್ರಜಾಸತ್ತಾತ್ಮಕವಾದ "ಗಣ" ಗಳಲ್ಲಿಯೂ ಕೂಡ ಐಕಮತ್ಯವಿರಲಿಲ್ಲ. ಇದೆಲ್ಲದರ ಪರಿಣಾಮವಾಗಿ ಇವರ ಪ್ರಭುಶಕ್ತಿ ಕುಗ್ಗಿ ಯವನರಾಜನಾದ ಅಲೆಕ್ಸಾಂಡರನಿಗೆ ಸೋತರು. ಹಿಂದೂದೇಶದ ಮೇಲೆ ಅಲೆಕ್ಸಾಂಡರನು ಕೇವಲ ಮೂರೇ ವರ್ಷಗಳಕಾಲ ದಂಡಯಾತ್ರೆ ನಡಸಿದನಾದರೂ ಅದು ಹಿಂದೂ ರಾಜಕೀಯದಮೇಲೆ ವಿಶೇಷ ಪರಿಣಾಮಕಾರಿಯಾಯಿತು. ಈ ದಂಡಯಾತ್ರೆಯಿಂದ ದೇಶದಾದ್ಯಂತವು ತಲ್ಲಣಿಸಿತು. ಹಿಂದೂದೇಶದವರನ್ನು ಒಟ್ಟು ಕೂಡಿಸಿ ಆಳುವ ಪ್ರಬಲವಾದ ಪ್ರಭುತ್ವವಿಲ್ಲದಿದ್ದರೆ ಹಿಂದುಗಳು ಪರರಾಜರಿಗೆ ಸೋತು ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಳ್ಳುವರೆಂಬುದು ವಿಶದವಾಯಿತು. ಪ್ರಬಲವಾದ ಸಾಮ್ರಾಜ್ಯವನ್ನು ಕಟ್ಟಲು ಶಕ್ತನೊಬ್ಬನು ದೊರೆತುದಾದರೆ ಅವನಿಗೆ ತಲೆಬಾಗಿ ಬಾಳಲು ಜನರು ಸಿದ್ಧರಾದರು.

ಕೌಟಿಲ್ಯನ ರಾಜನೀತಿ ಹುಟ್ಟಿದುದು ಈ ಪರಿಸ್ಥಿತಿಯಲ್ಲಿ. ಅವನ ತತ್ವವು ಆಗಿನಕಾಲದ ಜನರ ರಾಜಕೀಯ ಮನೋಭಾವ ಮತ್ತು ವರ್ತನೆಯ ಪ್ರತಿಬಿಂಬ. ಕೌಟಿಲ್ಯನು ಬರಿಯ ತತ್ವಜ್ಞಾನಿ ಮಾತ್ರವೇ ಅಲ್ಲ; ಅಸದೃಶವಾದ ರಾಜ್ಯ ನಿರ್ಮಾಪಕನೂ ಆಗಿದ್ದನು. ವೀರನೂ ಧೀರೋದಾತ್ತನೂ ಆದ ಚಂದ್ರಗುಪ್ತನಿಗೆ ಇಂತಹ ರಾಜಮಂತ್ರ ನಿಪುಣನು ದೊರೆತುದರಿಂದ ಪ್ರಬಲವಾದ ಮೌರ್ಯಸಾಮ್ರಾಜ್ಯವು ಸಿದ್ಧಿಸಿತು. ಕೌಟಿಲ್ಯನ ತತ್ವಗಳು ಶುಷ್ಕ ತತ್ವಗಳಾಗದೆ ರಾಜಕೀಯದಲ್ಲಿ ಕಾರ್ಯಕಾರಿಯಾದ ತತ್ವಗಳಾದವು.

೨. ಅರ್ಥಶಾಸ್ತ್ರದ ಸ್ವರೂಪ

ಶಾಸ್ತ್ರಗಳನ್ನು ತ್ರಯೀ, ಆನ್ವೀಕ್ಷಿಕೀ, ವಾರ್ತಾ, ಮತ್ತು ದಂಡನೀತಿ ಎಂದು ನಾಲ್ಕು ಭಾಗಗಳಾಗಿ ವಿಂಗಡಿಸುವುದು ಪ್ರಾಚೀನ ಸಂಪ್ರದಾಯ. ಆದರೆ ದಂಡನೀತಿಕಾರರೆಲ್ಲರೂ ಈ ವಿಭಜನೆಯನ್ನು ಒಪ್ಪುವುದಿಲ್ಲ. ಮನು ತ್ರಯೀ, ವಾರ್ತಾ, ಮತ್ತು ದಂಡನೀತಿ ಇವೇ ಮುಖ್ಯವೆಂದೂ, ಬೃಹಸ್ಪತಿ ವಾರ್ತಾ ಮತ್ತು ದಂಡನೀತಿಗಳೇ ಮುಖ್ಯವಾದುವೆಂದೂ, ಶುಕ್ರನು ದಂಡನೀತಿಯೊಂದೇ ಮುಖ್ಯವಾದ ಶಾಸ್ತ್ರವೆಂದೂ ವಾದಿಸಿರುತ್ತಾರೆ. ಕೌಟಿಲ್ಯನು ಈ ಮೂವರು ತತ್ವಜ್ಞರ ಸಿದ್ಧಾಂತಗಳನ್ನೂ ವಿಮರ್ಶೆಮಾಡಿ, ಅವುಗಳನ್ನು ಖಂಡಿಸಿದ್ದಾನೆ. ಪೂರ್ವಸಂಪ್ರದಾಯದಂತೆ ಶಾಸ್ತ್ರಗಳನ್ನು ನಾಲ್ಕು ಭಾಗಗಳಾಗಿ ವಿಭಜಿಸುವುದೇ ಸಾಧು ಎಂದು ಅವನ ಸಿದ್ಧಾಂತ.

ತತ್ವಶಾಸ್ತ್ರವು (ಅನ್ವೀಕ್ಷಿಕೀ) ಕಾರ್ಯಕಾರಣಗಳ ತಿಳುವನ್ನು ಬಲ ಪಡಿಸುವುದು; ಕ್ಲೇಶಗಳಿಗೆ ಈಡಾಗದಂತೆ ಮನಸ್ಸನ್ನು ಹದಗೊಳಿಸುವುದು. ವೇದಗಳು ಧರ್ಮಾಧರ್ಮದ ತಿಳುವಳಿಕೆ ಯನ್ನುಂಟುಮಾಡುವುವು; ವರ್ಣಾಶ್ರಮ ಧರ್ಮಗಳಿಗನು ಗುಣವಾಗಿ ನಡೆಯುವುದರಿಂದ ಉಂಟಾಗುವ ಪ್ರಯೋಜನ ಅಥವಾ ಅವುಗಳನ್ನು ಮೀರಿದರೆ ಒದಗುವ ವಿಪತ್ತು, ಇವು ಗಳನ್ನು ತಿಳಿಸುವುವು. ಕೃಷಿ, ಪಶುಪಾಲನೆ, ಕೈಗಾರಿಕೆಗಳನ್ನು ವೃದ್ಧಿಗೊಳಿಸಿ ದೇಶವನ್ನು ಸಂಪದ್ಯುಕ್ತವನ್ನಾಗಿ ಮಾಡುವುದು ಹೇಗೆಂಬುದನ್ನು ತಿಳಿಸುವುದು ವಾರ್ತಾ. ಆಡಳಿತದ ರೀತಿ ನೀತಿಗಳನ್ನು ತಿಳಿಸುವುದು ದಂಡನೀತಿ ಅಥವಾ ಅರ್ಥಶಾಸ್ತ್ರ.

ಸಕಲ ಇಷ್ಟಾರ್ಥ ಸಿದ್ಧಿಗಳಿಗೂ ದಂಡನೀತಿ ಕಾರಣ ಭೂತವಾದುದು. ಸುವ್ಯವಸ್ಥಿತವಾಗಿಯೂ ಸ್ವತಂತ್ರವಾಗಿಯೂ ಇರುವ ರಾಜ್ಯದಲ್ಲಿ ಮಾತ್ರ ವರ್ಣಾಶ್ರಮಗಳ ಆಚರಣೆ, ಐಶ್ವರ್ಯಾಭಿವೃದ್ಧಿ, ಜನರ ಪ್ರಾಣ ಮತ್ತು ಆಸ್ತಿಪಾಸ್ತಿಗಳ ಸಂರಕ್ಷಣೆ—ಇವು ಸಾಧ್ಯ. ಧರ್ಮ, ಅರ್ಥ, ಕಾಮ, ಮೋಕ್ಷ ಗಳೆಲ್ಲವೂ ದಂಡಧರನ ಭುಜದ ಮೇಲೆ ನಿಂತಿವೆ. ಅವನ ಭುಜಗಳು ಭದ್ರವಾಗಿರುವವರೆಗೆ ಅವುಗಳೂ ಭದ್ರವಾಗಿರುವುವು. ಅವನ ಭುಜಬಲ ಸಡಿಲಿದರೆ ಇವೆಲ್ಲವೂ ಕುಸಿದುಬೀಳುವುವು. ಹೀಗೆಂದರೆ ದಂಡದ ಬೆದರಿಕೆ ಅಥವಾ ಬರಿಯ ಬಲಪ್ರಯೋಗ ದಿಂದಲೇ ಆಡಳಿತ ನಡಸಬೇಕೆಂಬುದು ಕೌಟಿಲ್ಯನ ಅಭಿಪ್ರಾಯ ವಲ್ಲ. ದಂಡಧರನು ಸದಾ ಉದ್ಯತ (ಎತ್ತಿದ) ದಂಡನಾಗಿದ್ದರೆ, ಶಿಕ್ಷಿಸುವುದೇ ಅವನ ಸರ್ವಸ್ವವಾದರೆ ಪ್ರಜೆಗಳನ್ನು ರೇಗಿಸಿ ಮೇಲೆ ಹಾಕಿಕೊಳ್ಳುವನು; ಅರಣ್ಯದಲ್ಲಿ ತಪಸ್ಸುಮಾಡುತ್ತಿರು ವವನನ್ನು ಕೂಡ ಇವನು ರೇಗಿಸುವನು. ಆದರೆ ದಂಡವಿಹೀನ

ನಾದರೂ ಅನರ್ಥವೇ; ಪ್ರಜೆಗಳು ಅವನನ್ನು ನಿರ್ಲಕ್ಷಿಸುವರು. ಸಮಾಜದಲ್ಲಿ ಮತ್ಸ್ಯನ್ಯಾಯ ತಲೆದೋರುವುದು : ಬಲಿಷ್ಠರು ಬಲಹೀನರನ್ನು ಹಿಂಸಿಸುವರು. ಯುಕ್ತವಾದ ಕಾಲದಲ್ಲಿ ವಿಹಿತವಾಗಿ ಬಲಪ್ರಯೋಗ ಮಾಡಿದರೆ ದುರ್ಬಲರೂ ಬಲಿಷ್ಠರನ್ನು ಎದುರಿಸುವಷ್ಟು ಶಕ್ತಿ ಪಡೆಯುವರು. ಆದುದರಿಂದ ಯುಕ್ತವಾದ ದಂಡಪ್ರಯೋಗವೇ ಸಾಧುವೆಂಬುದು ಕೌಟಿಲ್ಯನ ಮತ. ಪ್ರಭುಶಕ್ತಿಯನ್ನು ಯಾವ ರೀತಿಯಲ್ಲಿ ಉಪಯೋಗಿಸುವುದು ಯುಕ್ತವಾದುದು (ನಯ); ಯಾವ ರೀತಿಯಲ್ಲಿ ಪ್ರಯೋಗಿಸುವುದು ಅಯುಕ್ತ (ಅನಯ); ಯಾವ ರೀತಿಯಲ್ಲಿ ಆಡಳಿತ ನಡಸಿದರೆ ರಾಜ್ಯ ಬಲಪಡುವುದು; ಯಾವುದರಿಂದ ದೇಶವು ದುರ್ಬಲವಾಗುವುದು—ಈ ವಿಷಯಗಳನ್ನು ತರ್ಕಿಸಿ ಸಿದ್ಧಾಂತಮಾಡುವ ಶಾಸ್ತ್ರವೇ ದಂಡನೀತಿ.

೩. ರಾಷ್ಟ್ರದ ಸ್ವರೂಪ ಮತ್ತು ಕರ್ತವ್ಯಗಳು

ವಿಶ್ವವು ಹೇಗೆ ದೈವಸೃಷ್ಟಿಯೋ ಅದೇ ರೀತಿ ರಾಷ್ಟ್ರವೂ ದೈವ ನಿಯಾಮಕವಾಗಿ ಹುಟ್ಟಿದೆ. ರಾಷ್ಟ್ರನಿರ್ಮಾಣಕ್ಕೆ ಮೊದಲು ಜನರು ಮೃಗಪಶುಗಳಂತೆ ಕಾದಾಡುತ್ತ ಬಲಿಷ್ಠರು ಬಲಹೀನರನ್ನು ನುಂಗುತ್ತಿದ್ದರು. ಈ ಅರಾಜಕ ಪರಿಸ್ಥಿತಿಯನ್ನು ಕೊನೆಗಾಣಿಸುವುದಕ್ಕಾಗಿ ಬ್ರಹ್ಮನು ಮನುವನ್ನು ಪ್ರಭುತ್ವಕ್ಕೆ ಆರಿಸಿ ಪ್ರಜಾವರ್ಗದ ಸಂರಕ್ಷಣೆಗಾಗಿ ಆತನನ್ನು ನೇಮಿಸಿದನೆಂದು ಐತಿಹ್ಯ. ಇದರಿಂದ ಪ್ರಭುವಾದವನ ಪ್ರಜಾಸಂರಕ್ಷಣಕಾರ್ಯವು ದೈವನಿಯಾಮಕವಾದುದು ಎಂದು ಶ್ರುತ

ಪಡುವುದು. ರಾಜರಕ್ಷಣೆಯಿಲ್ಲದ ದೇಶ ರಾಜ್ಯವಲ್ಲ; ಅದರಲ್ಲಿ ಆಸ್ತಿ ಪಾಸ್ತಿಗಳಿಲ್ಲ, ಹೆಂಡಿರುಮಕ್ಕಳಿಲ್ಲ, ಎಲ್ಲೆಲ್ಲಿಯೂ ಸೂರೆ, ಧರ್ಮಗ್ಲಾನಿ, ದುಷ್ಟತನ; ಕೃಷಿ, ಕೈಗಾರಿಕೆ ಮತ್ತು ಪಶು ಪಾಲನೆಗೆ ಅವಕಾಶವಿಲ್ಲ; ಜನರು ಭಯಗ್ರಸ್ತರಾಗಿ ಮತ್ಸ್ಯ ನ್ಯಾಯದಿಂದ ವಿಮೋಚನೆ ಇಲ್ಲದೆ ಅಧೋಗತಿಗೆ ಇಳಿಯುವರು. ರಾಜ್ಯರಕ್ಷಣೆ ಇದ್ದರೆ ಶಾಂತಿ, ಜನಪದ ಸಂತೋಷ, ಸ್ತ್ರೀಯರಿಗೆ ಸಮಾಜದಲ್ಲಿ ಗೌರವ, ಯಜ್ಞಯಾಗಾದಿಗಳಿಗೆ ಸೌಲಭ್ಯ, ಕೃಷಿ, ಕೈಗಾರಿಕೆಗಳಿಗೆ ಉತ್ತೇಜನ---ಇವೆಲ್ಲವೂ ದೊರೆಯುವುವು. ಪ್ರಜೆಗಳನ್ನು ಭಯಭೀತಿಗಳಿಂದ ತಪ್ಪಿಸಿ ಅವರ ಉತ್ತಮ ಜೀವನಕ್ಕೆ ಬೇಕಾದ ಅನುಕೂಲಗಳನ್ನು ಕಲ್ಪಿಸಿಕೊಡುವ ಪ್ರಭುವಿಗೆ ಯಾಗವಾಡಿದಷ್ಟು ಫಲ; ಪ್ರಜೆಗಳು ಗಳಿಸಿದ ಪುಣ್ಯದಲ್ಲಿಯೂ ಷಡ್ಭಾಗ. ಪ್ರಜಾರಕ್ಷಣೆಗೆ ಗಮನ ಕೊಡದೆ ಕಂದಾಯ ಮತ್ತು ತೆರಿಗೆಗಳನ್ನು ಮಾತ್ರ ಕೊಳ್ಳುವ ಪ್ರಭುವು ಕಳ್ಳರಾಜ, "ಪಾರ್ಥಿವತಸ್ಕರ" ನೆನ್ನಿಸಿಕೊಳ್ಳುತ್ತಾನೆ.

ರಾಜನು ರಾಷ್ಟ್ರವನ್ನು ರಕ್ಷಿಸಿದ ಮಾತ್ರಕ್ಕೆ ಅವನ ಕರ್ತವ್ಯವು ಮುಗಿಯುವುದಿಲ್ಲ. ಅವನು ಪ್ರಜೆಗಳ ಸುಖವನ್ನು ಕಾಪಾಡಬೇಕು. ಪ್ರಜಾಸೌಖ್ಯವೇ ತನ್ನ ಸೌಖ್ಯ ಅವರ ಹಿತವೇ ತನ್ನ ಹಿತವೆಂದು ಅವನು ತಿಳಿದಿರಬೇಕು. ಈ ಘನ ಉದ್ದೇಶವನ್ನು ಕೌಟಿಲ್ಯನು ಈ ರೀತಿಯಲ್ಲಿ ಹೇಳಿದ್ದಾನೆ.

"ಪ್ರಜಾಸುಖವೇ ಸುಖಂ ರಾಜ್ಞಃ ಪ್ರಜಾನಾಂ ಚ ಹಿತೇ ಹಿತಂ|
ನಾತ್ಮಪ್ರಿಯಂ ಹಿತಂ ರಾಜ್ಞಃ ಪ್ರಜಾನಾಂ ತು ಪ್ರಿಯಂ ಹಿತಂ॥
1 . 19

ಉದಾತ್ತವಾದ ಉದ್ದೇಶಗಳನ್ನು ಹೊಂದಿರುವುದಲ್ಲದೆ ನಡ

ವಳಿಕೆಯಲ್ಲಿಯೂ ಪ್ರಭು ಪ್ರಜೆಗಳಿಗೆ ಮಾದರಿಯಾಗಿರಬೇಕು. ಪ್ರಜಾಕ್ಷೇಮ ಚಿಂತನೆಯಿಂದ ಸತ್ಕಾರ್ಯಗಳನ್ನು ಮಾಡಲು ಸಿದ್ಧನಾಗಿರಬೇಕು.

ರಾಜ್ಞೋಹಿ ವ್ರತಮುತ್ಥಾನಂ ಯಜ್ಞಃ ಕಾರ್ಯಾನುಶಾಸನಂ।
ದಕ್ಷಿಣಾ ವೃತ್ತಿಸಾಮ್ಯಂ ಚ ದೀಕ್ಷಿತಸ್ಯಾಭಿಷೇಚನಂ॥ 1.19

ರಾಜನು ಪ್ರಜಾಹಿತಕ್ಕಾಗಿ ಸಿದ್ಧನಾಗಿರುವುದೇ ಅವನು ಮಾಡುವ ವ್ರತ; ಕಾರ್ಯಾನುಶಾಸನವೇ ಅವನು ಮಾಡುವ ಯಾಗ; ಎಲ್ಲರ ವಿಷಯದಲ್ಲೂ ನಿಷ್ಪಕ್ಷಪಾತವಾದ ಮತ್ತು ಸಮಾನವಾದ ನೀತಿ ಅವನು ಕೊಡಬೇಕಾದ ದಕ್ಷಿಣೆ ಮತ್ತು ಮಾಡಬೇಕಾದ ದೀಕ್ಷಾ ಸ್ನಾನ.

ಧರ್ಮಪರಿಪಾಲನೆ ರಾಜನ ಇನ್ನೊಂದು ಮುಖ್ಯ ಕರ್ತವ್ಯ. ಧರ್ಮಾನುಗುಣವಾಗಿ ನಡೆಯುವುದೇ ಐಹಿಕ ಮತ್ತು ಪರ ಲೋಕ ಸುಖದ ತಳಹದಿ. ರಾಜನೇ ಧರ್ಮಭ್ರಷ್ಟನಾದರೆ ಸಮಾಜದ ಕಟ್ಟುಗಳು ಸಡಿಲವಾಗಿ ಮಾನವ ವರ್ಗವು ಒಬ್ಬರ ನ್ನೊಬ್ಬರು ನುಂಗುವ ಸ್ಥಿತಿಗೆ ಇಳಿಯುತ್ತದೆ. ಧರ್ಮಚ್ಯುತನಾದ ಪ್ರಭುವಿನಿಂದ ಎಂಥೆಂತಹ ಭಯಂಕರ ವಿಪತ್ತುಗಳು ಮಾನವ ವರ್ಗಕ್ಕೆ ಸಂಭವಿಸುತ್ತವೆಂಬುದನ್ನು ಸ್ಮೃತಿಗಳು ಚಿತ್ರಿಸಿವೆ. ಧರ್ಮ ಪರಿಪಾಲನೆ ಮಾಡುವ ಪ್ರಭುವನ್ನು "ರಾಜನ್" ಎಂತಲೂ ಅಧರ್ಮಪ್ರವರ್ತಕನಾದ ಪ್ರಭುವನ್ನು "ವಿಶ್ವಲ" ನೆಂತಲೂ ಸ್ಮೃತಿಗಳು ಕರೆಯುತ್ತವೆ. ಪ್ರಜಾಪರಿಪಾಲನೆ ಗಾಗಿಯೇ ರಾಜನು ನಿರ್ಮಾಣವಾಗಿರುವುದರಿಂದ ಅವನು ಧರ್ಮಕಾರ್ಯಗಳಲ್ಲಿಯೇ ತೊಡಗಿರಬೇಕು.

ಧರ್ಮಾಯ ರಾಜಾ ಭವತಿ ನ ಕಾಮಕರಣಾಯ ತು ।

ಅವನು ತನ್ನ ಪ್ರಜೆಗಳು ಸ್ವಧರ್ಮವನ್ನು ಬಿಡದಂತೆ ನೋಡಿಕೊಳ್ಳಬೇಕು.

ಚತುರ್ವರ್ಣಾಶ್ರಮೋ ಲೋಕೋ ರಾಜ್ಞಾ ದಂಡೇನ ಪಾಲಿತಃ
ಸ್ವಧರ್ಮಕರ್ಮಾಭಿರತೋ ವರ್ತತೇ ಸ್ವೇಷು ವರ್ತ್ಮಸು ॥

"ಧರ್ಮ" ಎಂಬ ಶಬ್ದಕ್ಕೆ ಹಿಂದೂ ಸಂಸ್ಕೃತಿಯಲ್ಲಿ ಒಂದು ವಿಶೇಷ ಅರ್ಥವಿದೆ. ಯಾವ ಉದ್ದೇಶಗಳು ಮತ್ತು ಸಾಧನಗಳು ಮಾನವ ವರ್ಗವನ್ನು ಉದ್ಧರಿಸುವುವೋ ಅವೇ ಧರ್ಮ. ಸಾಮಾಜಿಕ ರಾಜಕೀಯ ಮತ್ತು ಆಧ್ಯಾತ್ಮಿಕ ಪ್ರಗತಿಗೆ ಸಂಬಂಧಿಸಿದ ವಿಷಯಗಳೆಲ್ಲವೂ ಮಾನವನ ಮೇಲ್ಮೆಗೆ ಸಹಕಾರಿಗಳಾದುದರಿಂದ ಅವುಗಳೂ ಧರ್ಮದಲ್ಲಿ ಸಮಾವೇಶವಾಗುವುವು. ಜೀವನದ ಮುಖ್ಯ ಗುರಿ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ—ಇವುಗಳ ಸಾಧನೆ. ಈ ಉದ್ದೇಶದ ಸುಲಭ ಸಾಧನೆಗಾಗಿಯೇ ಜ್ಞಾನಾರ್ಜನೆ, ಸಂರಕ್ಷಣೆ, ವಾಣಿಜ್ಯ, ಮತ್ತು ಕೃಷಿ ಎಂಬ ನಾಲ್ಕು ವೃತ್ತಿಗಳನ್ನು ಆರ್ಯರು ರಚಿಸಿದರು.

ವೈದಿಕ ಧರ್ಮಕ್ಕನುಸಾರವಾಗಿ ಆಯಾ ಜಾತಿಯವರು ತಮ್ಮ ಧರ್ಮವನ್ನು ಕಾಪಾಡಿಕೊಳ್ಳಬೇಕಾದುದು ಅತ್ಯವಶ್ಯಕವೆಂಬುದನ್ನು ಕೌಟಿಲ್ಯನು ಹೇಳುತ್ತಾನೆ. ಧರ್ಮ ಮುಖ್ಯವಾಗಿ ಎರಡು ವಿಧವಾಗಿದೆ: ವರ್ಣಾಶ್ರಮಧರ್ಮ ಮತ್ತು ಸಾಧಾರಣ ಧರ್ಮ ಎಂದು. ವರ್ಣಾಶ್ರಮ ಧರ್ಮದ ಪ್ರಕಾರ ಬ್ರಾಹ್ಮಣನಾದವನು ಮಾಡಬೇಕಾದುದು ಅಧ್ಯಯನ ಮತ್ತು ಅಧ್ಯಾಪನ, ಯಜನ ಮತ್ತು ಯಾಜನ, ದಾನ ಕೊಡುವುದು ಮತ್ತು ತೆಗೆದುಕೊಳ್ಳುವುದು. ಅಧ್ಯಯನ, ಯಜನ, ದಾನ, ಯೋಧವೃತ್ತಿ ಭೂತರಕ್ಷಣೆ ಇವು ಕ್ಷತ್ರಿಯರ ಧರ್ಮ. ವೈಶ್ಯರು ಅಧ್ಯಯನ

ಯಜನ, ದಾನ, ಪಶುಪಾಲನ, ವ್ಯಾಪಾರಗಳನ್ನು ಧರ್ಮವಾಗಿ ಆಚರಿಸಬೇಕು. ಕೃಷಿಕರ್ಮ, ಪಶುಪಾಲನ, ವಾರ್ತಾ, ಮುಂತಾದುವು ಶೂದ್ರನ ಪಾಲಿಗೆ ಬಂದ ಕೆಲಸಗಳು. ಸತ್ಯ, ದಾನ, ಕ್ಷಮೆ, ಅಹಿಂಸೆ, ಇಂದ್ರಿಯಸಂಯಮ, ಗುರು ಶುಶ್ರೂಷೆ, ಲೋಭಶೂನ್ಯತ್ವ, ದೇವಬ್ರಾಹ್ಮಣಪೂಜೆ—ಇವು ಸಾಧಾರಣ ಧರ್ಮಗಳು. ರಾಷ್ಟ್ರದ ಏಳಿಗೆಗೆ ವಿರುದ್ಧವಾಗದ ರೀತಿಯಲ್ಲಿ ಈ ಸಮಸ್ತ ಧರ್ಮಗಳನ್ನೂ ಕಾಪಾಡಬೇಕಾದುದು ರಾಜನ ಕರ್ತವ್ಯ. ರಾಜನಾದವನು ಇದೇ ರೀತಿಯಲ್ಲಿ ದೇಶಪದ್ಧತಿಗಳಿಗೂ, ಕಾನೂನುಗಳಿಗೂ, ಗಣ ಮತ್ತು ಕೆಲಸಗಾರರ ಸಂಸ್ಥೆಗಳ ಧರ್ಮಕ್ಕೂ ಮನ್ನಣೆಯನ್ನು ಕೊಡಬೇಕು. ಪ್ರತಿ ವ್ಯಕ್ತಿ ತನ್ನ ವರ್ಣ, ಸಂಘ, ಸಂಸ್ಥೆಗಳ ನಿಬಂಧನೆಗಳಿಗೆ ಕುಂದುಬಾರದಂತೆ ಸಂಪೂರ್ಣ ಸ್ವಾತಂತ್ರ್ಯದಿಂದ ವರ್ತಿಸಬಹುದು. ಪ್ರತಿ ವ್ಯಕ್ತಿಗೂ ಅವನ ಜೀವನವನ್ನು ಸಾರ್ಥಕಗೊಳಿಸಲು ಅವಶ್ಯವಾದ ಸೌಕರ್ಯಗಳನ್ನು ಏರ್ಪಡಿಸುವುದು ರಾಷ್ಟ್ರದ ಕರ್ತವ್ಯ. ಹಾಗೆ ಒಂದು ರಾಷ್ಟ್ರದಲ್ಲಿ ಉತ್ತಮ ಜೀವನಕ್ಕೆ ಬೇಕಾಗುವ ಅನುಕೂಲಗಳು ಒದಗದಿದ್ದಲ್ಲಿ ಜನರು ಆ ರಾಷ್ಟ್ರವನ್ನು ತ್ಯಜಿಸಿ ಅನುಕೂಲಗಳಿರುವ ಬೇರೆ ರಾಷ್ಟ್ರಗಳಿಗೆ ಒಕ್ಕಲು ಹೋಗಬಹುದು.

ಧರ್ಮಶಾಸ್ತ್ರಗಳಲ್ಲಿ ಉಕ್ತವಾಗಿರುವ ನಿಯಮಗಳನ್ನು ಅಥವಾ ಹಿಂದಿನಿಂದಲೂ ಆಚರಣೆಯಲ್ಲಿರುವ ಕಟ್ಟು ಕಾಯಿದೆಗಳನ್ನು ಪಾಲಿಸುವುದು ರಾಜನಿಗಾಗಿ ಮೀಸಲಾಗಿಟ್ಟ ಕೆಲಸ. ಇದನ್ನು ನಡೆಸುವ ಅಧಿಕಾರ ರಾಜನಿಗೆ ಪೂರ್ಣವಾಗಿ ಉಂಟು. ಆದರೆ ಶಾಸನಗಳನ್ನು ಮಾಡುವ ಅಧಿಕಾರವನ್ನು ಸಾಮಾನ್ಯವಾಗಿ ಹಿಂದೂ ನೀತಿಶಾಸ್ತ್ರಕಾರರು ರಾಜನಿಗೆ ಕೊಟ್ಟಿರುವುದಿಲ್ಲ.

ಶ್ರೋತ್ರಿಯರು ರಚಿಸಿದ ಕಾನೂನಿನ ಪ್ರಕಾರ ತೀರ್ಪುಕೊಡುವ ಅಧಿಕಾರ ಮಾತ್ರ ರಾಜನಿಗೆ ಉಂಟು. ಕೌಟಿಲ್ಯನ ಪ್ರಕಾರ ರಾಜನಿಗೆ ಕಾನೂನುಗಳ ರಚನೆ, ಅದರಂತೆ ತೀರ್ಪುಕೊಡುವ ಅಧಿಕಾರ—ಎರಡೂ ಉಂಟು. ಆದರೆ ಕಾನೂನುಗಳನ್ನು ಮಾಡುವುದಕ್ಕೂ ತೀರ್ಪು ಕೊಡುವುದಕ್ಕೂ ಮುಂಚೆ ಶ್ರೇಷ್ಠ ಸಚಿವರ ಮತ್ತು ನೀತಿ ಶಾಸ್ತ್ರವಿಶಾರದರ ಸಲಹೆಗಳನ್ನು ಪಡೆಯಬೇಕು. ನ್ಯಾಯವಿರುದ್ಧವಾಗಿ ವರ್ತಿಸಿದ ರಾಜನನ್ನು ಜನರು ದೇಶಭ್ರಷ್ಟನನ್ನಾಗಿ ಮಾಡುವರೆಂಬ ಸಂಗತಿಯು ಸ್ಪಷ್ಟವಾಗಿದೆ. ನ್ಯಾಯನಿಷ್ಠನಾದ ಪ್ರಭುವಿಗೆ ಜನರು ಎದುರು ಬರಬಾರದು; ರಾಜನು ನ್ಯಾಯಬದ್ಧನಾಗಿರುವವರೆಗೂ ಅವನು ಪರಮ ಪ್ರಭುತ್ವವನ್ನು ಅನುಭವಿಸಬಹುದು. ವಿನಯ ವಿಚಕ್ಷಣೆಗಳಿಲ್ಲದ ಪ್ರಭುತ್ವ ಪರಮ ಪ್ರಭುತ್ವವಲ್ಲ; ಪಾರಮ್ಯವಿಲ್ಲದ ಪ್ರಭುತ್ವದಲ್ಲಿ ಸ್ವರಾಜ್ಯಸಿದ್ಧಿಯೂ ಇಲ್ಲ. ಆದುದರಿಂದ ಕೌಟಿಲ್ಯನ ಆದರ್ಶಪ್ರಭುತ್ವ ನ್ಯಾಯಪಾರಮ್ಯಗಳೆರಡರಿಂದ ಕೂಡಿದ ಪ್ರಭುತ್ವವೇ ಹೊರತು ಬರಿಯ ನಿರಂಕುಶಪ್ರಭುತ್ವವಲ್ಲ.

ಇಂತಹ ಪ್ರಭುತ್ವವನ್ನು ಸಾಧಿಸಬೇಕಾದರೆ ರಾಷ್ಟ್ರವು ಬಲವಾಗಿರಬೇಕು. ರಾಜನೂ ಶಕ್ತಿಯುತನಾಗಿರಬೇಕು: ಪರಕೀಯರ ಅಧೀನನಾಗಿರಕೂಡದು. ತನ್ನ ಪ್ರಜೆಗಳನ್ನು ಶಿಸ್ತಿನಲ್ಲಿ ಇಡಲು ಬೇಕಾದ ದರ್ಪವನ್ನು ಹೊಂದಿರಬೇಕು. ಈ ರೀತಿ ನಿರ್ಮಾಣವಾದ ರಾಷ್ಟ್ರದಲ್ಲಿ ಅರ್ಥ ಧರ್ಮ ಎರಡೂ ಸಿದ್ಧಿಸುವುವು.

೪. ರಾಜ್ಯಾಂಗಗಳು

ರಾಜನೊಬ್ಬನಿಂದಲೇ ಪ್ರಭುತ್ವವು ನಡಸುವುದು ಸಾಧ್ಯವಿಲ್ಲ. ಒಂದೇ ಚಕ್ರದಿಂದ ಬಂಡಿಯನ್ನು ಓಡಿಸುವುದು ಹೇಗೆ ಅಸಾಧ್ಯವೋ ಅದೇ ರೀತಿ ರಾಜನೊಬ್ಬನೇ ಸರ್ಕಾರದ ಕೆಲಸಗಳನ್ನು ನಡಸುವುದೂ ಅಸಾಧ್ಯ. ಆದುದರಿಂದ ರಾಜ್ಯಾಡಳಿತದಲ್ಲಿ ಏಳು ಅಂಗಗಳು ಏರ್ಪಟ್ಟಿವೆ. ರಾಜನೀತಿಜ್ಞರು ರಾಜ್ಯವನ್ನು ಶರೀರಕ್ಕೂ, ರಾಜ್ಯಾಂಗಗಳನ್ನು ಶರೀರದ ಅವಯವಗಳಿಗೂ ಹೋಲಿಸಿದ್ದಾರೆ. ಯಾವ ಒಂದು ಅವಯವ ಊನವಾದರೂ, ಅಥವಾ ಇಲ್ಲದಿದ್ದರೂ ಶರೀರವು ಹೇಗೆ ಸರಿಯಾಗಿ ಕೆಲಸಮಾಡದೆ ನಿಷ್ಪ್ರಯೋಜಕವಾಗುವುದೋ ಅದೇ ರೀತಿ ರಾಜ್ಯಾಂಗಗಳಲ್ಲಿ ಯಾವುದೊಂದಕ್ಕೆ ಕುಂದು ಬಂದರೂ ರಾಜ್ಯಕ್ಕೆ ಕೇಡು ಸಿದ್ಧ. ಕೌಟಿಲ್ಯನು ರಾಷ್ಟ್ರಕ್ಕೆ ಏಳು ಅಂಗಗಳಿರಬೇಕೆಂದು ಹೇಳಿದ್ದಾನೆ. ಇವು ಸ್ವಾಮಿ, ಮಂತ್ರಿ, ಜನಪದ, ದುರ್ಗ, ಕೋಶ, ಸೈನ್ಯ ಮತ್ತು ಮಿತ್ರ. ಈ ಅಂಗಗಳೆಲ್ಲವೂ ರಾಷ್ಟ್ರದ ಏಳಿಗೆಗೆ ಮುಖ್ಯವಾದವುಗಳಾದರೂ ಇವುಗಳನ್ನು ಸರಿಯಾಗಿ ನಡೆಯುವಂತೆ ಮಾಡುವ ಮುಖ್ಯ ಅಂಗವಾದ ಸ್ವಾಮಿಗೆ ಕೌಟಿಲ್ಯನು ಪ್ರಧಾನ ಸ್ಥಾನವನ್ನಿತ್ತಿದ್ದಾನೆ. ರಾಜನು ಸಪ್ತಾಂಗಗಳ ಮೇಲ್ವಿಚಾರಣೆಯನ್ನು ಎಂದರೆ ರಾಷ್ಟ್ರದ ಐಕ್ಯತೆಯನ್ನು ಸಾಧಿಸಬೇಕು. ಮಂತ್ರಿ ಪರಿಷತ್ತು ರಾಜ್ಯಭಾರಕ್ರಮವನ್ನೂ ಕೋಶವು ಐಶ್ವರ್ಯವನ್ನೂ ಸೈನ್ಯವು ರಾಷ್ಟ್ರಬಲವನ್ನೂ ದುರ್ಗ ಮತ್ತು ಮಿತ್ರರು ರಾಷ್ಟ್ರಸಂರಕ್ಷಣೆಯನ್ನೂ ಸಾಧಿಸಬೇಕು. ಕೌಟಿಲ್ಯನು ಪ್ರತಿಪಾದಿಸಿರುವ ರಾಜ್ಯತತ್ವಗಳಿಗೆ ಅನುಸಾರವಾಗಿ ಸ್ಥಾಪಿಸಿದ ರಾಜ್ಯವನ್ನು ಅದೇ ಕಾಲದ ಗ್ರೀಕರ ರಾಷ್ಟ್ರತತ್ವಗಳೊಡನೆಯೂ ರಾಷ್ಟ್ರಗಳೊಡ

ನೆಯೂ ಪರ್ಷಿಯಾ ದೇಶದಲ್ಲಿ ಡೇರಿಯಸ್ಸನು ಏರ್ಪಡಿಸಿದ್ದ ರಾಜ್ಯಭಾರಕ್ರಮದೊಡನೆಯೂ ತೂಗಿನೋಡಿದರೆ ಅಂದಿನ ಭಾರತದ ರಾಜಕೀಯ ಆಡಳಿತ ವ್ಯವಸ್ಥೆ ಅತಿ ಉನ್ನತದ ಮಟ್ಟವನ್ನೇರಿದ್ದಿತೆಂದು ತಿಳಿಯುತ್ತದೆ.

ಸ್ವಾಮಿ :—ಕೌಟಿಲ್ಯನ ಕಾಲದಲ್ಲಿದ್ದ ಉತ್ತರ ಹಿಂದೂಸ್ಥಾನದ ರಾಜಕೀಯ ಪರಿಸ್ಥಿತಿಯನ್ನು ಪರಿಶೀಲಿಸಿದರೆ ಕೌಟಿಲ್ಯನು ರಾಜನಿಗೆ ಏತಕ್ಕೆ ಪ್ರಧಾನಸ್ಥಾನವನ್ನಿತ್ತನೆಂಬುದು ವ್ಯಕ್ತವಾಗುತ್ತದೆ. ನಾನಾ ರೀತಿಯ ಪ್ರಭುತ್ವವುಳ್ಳ ರಾಜ್ಯಗಳು ಆಳಿದು ದೇಶವು ಛಿನ್ನಭಿನ್ನವಾಗಿದ್ದಿತು. ರಾಜಪ್ರಭುತ್ವವಿದ್ದ ರಾಷ್ಟ್ರಗಳಲ್ಲಿ ರಾಜನ ಮಕ್ಕಳಲ್ಲೇ ಅಂತಃಕಲಹ ಹುಟ್ಟಿ ರಾಜ್ಯಗಳು ಕ್ಷೀಣವಾಗುತ್ತಲಿದ್ದವು. ಒಟ್ಟಿನಲ್ಲಿ ಯಾವ ರಾಜ್ಯವೂ ಪರಕೀಯರ ದಾಳಿಯನ್ನು ಎದುರಿಸುವಷ್ಟು ಶಕ್ತಿಯುತವಾಗಿಲ್ಲಿಲ್ಲ. ಅಂದಿನ ಪರಿಸ್ಥಿತಿಯಲ್ಲಿ ರಾಜ್ಯವು ಸದ್ಯದಲ್ಲಿಯೇ ಸ್ವಾತಂತ್ರ್ಯವನ್ನು ಕಳೆದುಕೊಳ್ಳುವುದೆಂಬ ಭಯವು ಜನರಲ್ಲಿ ಮೂಡಿದ್ದಿತು. ಹದಗೆಟ್ಟಿದ್ದ ಪರಸ್ಥಿತಿಯನ್ನು ತಹಬಂದಿಗೆ ತರುವುದು ಹೇಗೆಂಬುದೇ ಅಂದಿನ ರಾಜಶಾಸ್ತ್ರಜ್ಞರ ಮುಖ್ಯ ಸಮಸ್ಯೆಯಾಗಿದ್ದಿತು. ಜನಗಳೂ ಮೇಲೆ ಹೇಳಿದ ಕೆಲಸವನ್ನು ಮಾಡಬಲ್ಲ ದಕ್ಷನಾದೊಬ್ಬ ನಾಯಕನಿಗೆ ತಲೆಬಾಗಿ ನಡೆಯಲು ಸಿದ್ಧರಾಗಿದ್ದರು. ಕೌಟಿಲ್ಯನು ರಾಷ್ಟ್ರವೆಂದರೆ ನಿರ್ದಿಷ್ಟ ಎಲ್ಲೆಗಳಿಂದ ಪ್ರತ್ಯೇಕಿಸಲ್ಪಟ್ಟ ಪ್ರಕೃತಿಯಿಂದ ಕೂಡಿದ ಒಂದು ಪ್ರದೇಶವೆಂದೂ, ಅದರಲ್ಲಿ ಸಪ್ತಾಂಗಗಳಿಂದ ಕೂಡಿದ ಸರ್ಕಾರವಿರಬೇಕೆಂದೂ ಹೇಳಿದ್ದಾನೆ. ಸಪ್ತಾಂಗಗಳು ಸರಿಯಾಗಿ ಕೆಲಸಮಾಡಬೇಕಾದರೆ ಅವುಗಳಲ್ಲಿ ಮುಖ್ಯನಾದ ರಾಜನು ಬಹು ದಕ್ಷನಾಗಿರಬೇಕು. ಯುಕ್ತಾಯುಕ್ತವಾದ

ದನ್ನೂ ಬಲಾಬಲಗಳನ್ನೂ ಅರಿತು, ವಿನಯದಿಂದ ನಡೆಯುವವ ನಾಗಿರಬೇಕು. ರಾಜ್ಯದ ಒಗ್ಗಟ್ಟು ರಾಜನ ಮೂಲಕ ಸಾಧ್ಯವಾಗುವಮಟ್ಟಿಗೆ ಇತರ ಅಂಗಗಳಿಂದ ಆಗಲಾರದು. ಅವನು ದೇಶದಲ್ಲಿ ಐಕಮತ್ಯವನ್ನು ಹುಟ್ಟಿಸುವನು. ಪ್ರಜಾ ಕ್ಷೇಮ, ಆರ್ಥಿಕೋನ್ನತಿ, ನೈತಿಕ ಜೀವನದ ಮೇಲ್ಮೆ— ಇವೆಲ್ಲವೂ ಅವನಿಂದ ಮಾತ್ರ ಸಾಧ್ಯ, ಅವನೇ ತನ್ನ ನಡತೆ ಯಿಂದ ಎಲ್ಲರಿಗೂ ಆದರ್ಶಪ್ರಾಯನು. ಇದರಂತೆಯೇ ಕಲೆ, ಧರ್ಮ, ನ್ಯಾಯ ಇವುಗಳಲ್ಲಿ ಯಾವದು ಉತ್ತಮಗೊಳ್ಳ ಬೇಕಾದರೂ ರಾಜನ ಅಭಯಹಸ್ತವಿರಲೇಬೇಕು.

ರಾಷ್ಟ್ರಕ್ಕೂ ಮತ್ತು ಅದರ ಪ್ರಕೃತಿಗಳಿಗೂ ರಾಜನೇ ಒಡೆಯ; ಅವನೇ ಸರ್ಕಾರ*. ಪುರೋಹಿತ ಅಮಾತ್ಯರೇ ಮೊದಲಾಗಿ ಎಲ್ಲ ಅಧಿಕಾರಿಗಳನ್ನು ನೇಮಿಸುವ ಹಕ್ಕೂ ಅವನಿ ಗಿದೆ. ರಾಜ್ಯಾರ್ಜನೆ, ರಾಜ್ಯರಕ್ಷಣೆ, ರಾಜ್ಯವಿಸ್ತರಣೆ ಮತ್ತು ಇದರ ಅನುಭವ, ಇವು ನಾಲ್ಕು ರಾಜನ ಮುಖ್ಯ ಉದ್ದೇಶ ಗಳು. ರಾಜ್ಯಾರ್ಜನೆಗೆ ಬೇಕಾದ ಅನುಕೂಲಗಳನ್ನು ಪಡೆಯ ಬೇಕು. ಈ ಕೆಲಸದಲ್ಲಿ ನ್ಯಾಯಾನ್ಯಾಯಗಳ ಪರಿಶೀಲನೆ ಅಗತ್ಯವಿದೆ. ರಾಜ್ಯಪಾಲನೆಯಲ್ಲಿ ತಾನೇ ಸ್ವಂತವಾಗಿ ನಡೆಸ ಲಾಗದ ಕೆಲಸಗಳನ್ನು ಮಂತ್ರಿಮಂಡಲಕ್ಕೆ ವಹಿಸಬೇಕು. ಯೋಗ್ಯರಾದವರನ್ನು ತನ್ನ ಮಿತ್ರವೃಂದದಲ್ಲಿ ಸೇರಿಸಿಕೊಳ್ಳ ಬೇಕು. ದುಷ್ಟರನ್ನೂ ರಾಜದ್ರೋಹಿಗಳನ್ನು ಶತ್ರುಗಳನ್ನೂ ಎಂತಹ ಕುಟಿಲ ಉಪಾಯಗಳಿಂದಲಾದರೂ ನಾಶಪಡಿಸ

---

*"ತತ್ಕೂಟಸ್ಥಾನೀಯೋ ಹಿ ಸ್ವಾಮಿ" ಮತ್ತು "ರಾಜಾ ರಾಜ್ಯ ಮಿತಿ ಪ್ರಕೃತಿಸಂಕ್ಷೇಪಃ" VII, I

ಬಹುದು. * ಪ್ರಜೆಗಳನ್ನು ದಾರಿದ್ರ್ಯ, ಬೆಂಕಿ, ಕ್ಷಾಮವೇ ಮೊದಲಾದ ಉಪನಿಪಾತಗಳ ಹಾವಳಿಯಿಂದ ರಕ್ಷಿಸಬೇಕು. ಇವುಗಳಿಗೆ ರಾಜನು ಗಮನ ಕೊಡದ ಪಕ್ಷದಲ್ಲಿ ಪ್ರಜೆಗಳಲ್ಲಿ ಅತೃಪ್ತಿ ಮೂಡಿ ರಾಷ್ಟ್ರಕ್ಕೆ ವಿಪತ್ತು ಸಂಭವಿಸುತ್ತದೆ.

ರಾಜ್ಯದ ಮುಖ್ಯ ಧ್ಯೇಯಗಳನ್ನು ಸಾಧಿಸುವುದೂ ಆಡಳಿತದ ಕಠಿನ ಸಮಸ್ಯೆಗಳನ್ನು ಪರಿಹರಿಸುವುದೂ ರಾಜ್ಯವನ್ನು ದಕ್ಷತೆಯಿಂದ ಕಾಪಾಡುವುದೂ ಸುಶಿಕ್ಷಿತನಾದ ರಾಜನಿಗೆ ಮಾತ್ರ ಸಾಧ್ಯ. ಆದುದರಿಂದ ದೇಶದ ಉನ್ನತಿಗೆ ಮೂಲ ಕಾರಣನಾದ ರಾಜನ ಪಾತ್ರಕ್ಕೆ ಕೌಟಿಲ್ಯನು ತನ್ನ ಗ್ರಂಥದಲ್ಲಿ ಹೆಚ್ಚು ಗಮನ ಕೊಡುವುದು ನ್ಯಾಯವಾಗಿಯೇ ಇದೆ. ರಾಜನಿಗೆ ಏನು ಗುಣಗಳಿರಬೇಕು, ಅವನ ವಿದ್ಯಾವ್ಯಾಸಂಗವು ಯಾವ ರೀತಿ ನಡೆಯಬೇಕು, ಅವನು ಯಾರ ಮಂತ್ರಾಲೋಚನೆಯನ್ನು ಪಡೆಯಬೇಕು, ಅವನ ನಡತೆ ಹೇಗಿರಬೇಕು, ಅವನು ಜನರ ಶಿಕ್ಷೆ ರಕ್ಷಣೆಯಲ್ಲೂ ನ್ಯಾಯವ್ಯವಸ್ಥೆಯಲ್ಲೂ ಆಚರಿಸಬೇಕಾದ ನೀತಿ ಯಾವುದು, ಪರರಾಜರೊಂದಿಗೆ ಹೇಗೆ ಸಂಧಿ ವಿಗ್ರಹಗಳನ್ನು ನಡೆಸಬೇಕು, ತಾನು ಗೆದ್ದ ದೇಶದ ಪ್ರಜೆಗಳನ್ನು ಹೇಗೆ ಒಲಿಸಿಕೊಳ್ಳಬೇಕು, ಇವೇ ಮೊದಲಾದ ಅಂಶಗಳನ್ನು ಕೌಟಿಲ್ಯನು ಅರ್ಥಶಾಸ್ತ್ರದ ಬೇರೆ ಬೇರೆ ಅಧಿಕರಣಗಳಲ್ಲಿ ವಿವರಿಸಿದ್ದಾನೆ.

ಕೌಟಿಲ್ಯನ ರಾಷ್ಟ್ರದಲ್ಲಿ ರಾಜನಿಗೆ ಅಪರಿಮಿತವಾದ ಅಧಿಕಾರವಿದೆ. ರಾಜ್ಯದ ವ್ಯವಸ್ಥೆಯು ಚೆನ್ನಾಗಿರಬೇಕಾದರೆ ಅದು ಉನ್ನತಿಪಡೆದು ಪ್ರಬಲವಾಗಿರಬೇಕಾದರೆ ರಾಜನಿಗೆ ಅಷ್ಟು

---

* ಏವಂ ದುಷ್ಯೇಷ್ವಧಾರ್ಮಿಕೇಷು ಚ ವರ್ತೇತ ನೇತರೇಷು ॥ V .2

ಮೇಲು; ಮಂತ್ರಶಕ್ತಿಯಿಂದ ಕೂಡಿದ ಪ್ರಭುಶಕ್ತಿ ಇನ್ನೂ ಬೇಕು. ಕಾನೂನು ರಚನೆ, ಶಾಸನಗಳ ಪರಿಪಾಲನೆ, ನ್ಯಾಯ ವ್ಯವಸ್ಥೆ ಮತ್ತು ಜನಗಳ ಸುಖಜೀವನ ಇವೆಲ್ಲವೂ ಮಂತ್ರ ಶಕ್ತಿಬಲದಿಂದಲೇ ಸಾಧ್ಯ. ಮಂತ್ರಿಗಳ ಸಲಹೆಗಳಿಂದ ಉತ್ತಮ ವಾಗಿ ನಿಯಂತ್ರಿತವಾದ ನೃಪತ್ವವೇ ನೃಪತ್ವ.

ಸಹಾಯಸಾಧ್ಯಂ ರಾಜತ್ವಂ ಚಕ್ರಮೇಕಂ ನ ವರ್ತತೇ।
ಕುರ್ವೀತ ಸಚಿವಾಂಸ್ತಸ್ಮಾತ್ತೇಷಾಂ ಚ ಶೃಣುಯಾನ್ಮತಂ॥
1-3-14. 4.

ಉತ್ಕೃಷ್ಟವಾದ ಮಂತ್ರಿಸಹಾಯವಿಲ್ಲದಿದ್ದರೆ ರಾಜನು ಎಷ್ಟೇ ಬಲವಾದ ಸೈನ್ಯಕೋಶಗಳಿಂದ ಕೂಡಿದ್ದರೂ ವ್ಯರ್ಥ. ಮಂತ್ರಿ ಗಳು ರಾಜನ ಕಣ್ಣುಗಳು. ಯಾವ ಕಾರ್ಯಾರಂಭಕ್ಕೂ ಮಂತ್ರಾ ಲೋಚನೆ ಪೂರ್ವಭಾವಿಯಾಗಿ ನಡೆದಿರಬೇಕು: "ಮಂತ್ರ ಪೂರ್ವಸ್ಸರ್ವಾರಂಭಃ" "ಅಮಾತ್ಯಮೂಲಾಸ್ಸರ್ವಾರಂಭಾಃ".

ಮಂತ್ರಿಮಂಡಲಕ್ಕೆ ಅರ್ಥಶಾಸ್ತ್ರದಲ್ಲಿ ಪರಿಷತ್ತೆಂದು ಹೆಸರಿದೆ. ಪರಿಷತ್ತಿನಲ್ಲಿ ಎರಡು ಭಾಗ. ಪ್ರಧಾನಮಂತ್ರಿ, ಪುರೋಹಿತ* ಸೇನಾಪತಿ, ಮತ್ತು ಯುವರಾಜ ಇವರುಗಳಿಂದ ಕೂಡಿದ ಒಳಮಂಡಲ. ದೌವಾರಿಕ, ಅಂತರ್ವಂಶಿಕ, ಪ್ರಶಾಸ್ತಾ, ಸಮಾಹರ್ತಾ, ಸನ್ನಿಧಾತಾ, ಪ್ರದೇಷ್ಟಾ ಮತ್ತು ಇತರ ಅಮಾತ್ಯರಿಂದ ಕೂಡಿದ ಹೊರಮಂಡಲ. ಮಂತ್ರಿಯಾದ ವನು ದೃಢಚಿತ್ತ, ಶೀಲವಂತ, ಸಂಪ್ರಿಯ, ಪ್ರಾಜ್ಞ, ದಕ್ಷ

---

* ವೇದಗಳ ಕಾಲದಲ್ಲಿ ಪುರೋಹಿತನಿಗೆ ರಾಜಕೀಯದಲ್ಲಿ ಮುಖ್ಯ ಪಾತ್ರವಿತ್ತು. ಕೌಟಿಲ್ಯನ ಅರ್ಥಶಾಸ್ತ್ರದ ಸಪ್ತಾಂಗಗಳಲ್ಲಿ ಅವನನ್ನು ಸೇರಿಸಿಲ್ಲ.

ಮತ್ತು ವಾಗ್ಮಿಯಾಗಿರಬೇಕು. ಸಾಮಾನ್ಯವಾಗಿ ಮಂತ್ರಾಲೋಚನೆಯು ಒಳಮಂಡಲಕ್ಕೂ, ಆಲೋಚನೆಯನ್ನು ಕಾರ್ಯರೂಪದಲ್ಲಿ ತರುವ ಕೆಲಸವು ಹೊರಮಂಡಲಕ್ಕೂ ಸೇರಿದ್ದಿತು. ಮಂತ್ರಿಪರಿಷತ್ತಿನಲ್ಲಿ ಅಧ್ಯಕ್ಷ ಮತ್ತು ಅಮಾತ್ಯರೇ ಅಲ್ಲದೆ ಪೌರ ಮತ್ತು ಜನಪದ ಸಂಸ್ಥೆಗಳ ಮುಖಂಡರೂ ಇರುತ್ತಿದ್ದರು. ಈ ತೀರ್ಥರಿಗೆಲ್ಲಾ ಮಹಾಮಾತ್ಯರೆಂಬ ಹೆಸರನ್ನು ಅರ್ಥಶಾಸ್ತ್ರದಲ್ಲಿ ಕೊಟ್ಟಿದೆ. ಬೃಹಸ್ಪತಿ, ಶುಕ್ರ ಮೊದಲಾದ ಸ್ಮೃತಿಕಾರರು ಮಂತ್ರಿಪರಿಷತ್ತಿನಲ್ಲಿ ಎಂಟರಿಂದ ಇಪ್ಪತ್ತುಮೂರು ಮಂದಿ ಸದಸ್ಯರಿರಬಹುದೆಂದು ಹೇಳಿದ್ದಾರೆ. ಕೌಟಿಲ್ಯನು ಒಳಮಂಡಲದಲ್ಲಿ ಮೂರು ಅಥವಾ ನಾಲ್ಕು ಸದಸ್ಯರು, ಹೊರಮಂಡಲದಲ್ಲಿ ರಾಷ್ಟ್ರಾನುಕೂಲತೆಗೆ ತಕ್ಕ ಹಾಗೆ "ಯಥಾಸಾಮರ್ಥ್ಯಂ" ಸದಸ್ಯರು ಇರಬಹುದೆಂದು ಹೇಳುತ್ತಾನೆ.

ಸಂಧಿ ವಿಗ್ರಹಾದಿ ಸಕಲ ಕಾರ್ಯಗಳನ್ನೂ ರಾಜನು ಒಳಮಂಡಲದ ಸಲಹೆ ಪಡೆದು ಸಮಂಜಸವಾಗಿಯೂ ಲೋಕಹಿತಕರವಾಗಿಯೂ ಇರುವಂತೆ ಮಾಡಬೇಕಾಗಿದ್ದಿತು. ಯಾವ ಕೆಲಸವನ್ನು ಪ್ರಾರಂಭಿಸುವುದಕ್ಕೂ ಮುಂಚೆ ಸಾಧನ ನಿರ್ಣಯ, ಕಾರ್ಯಕ್ಕೈಗೂಡಲು ಬೇಕಾಗುವ ಜನಸಾಮಗ್ರಿಗಳ ಸಂಗ್ರಹ, ಕಾಲನಿರ್ಣಯ, ಕಾರ್ಯಸಾಧನೆಗೆ ಅಡ್ಡಿ ಬರುವ ದೈವಿಕ ಮತ್ತು ಮಾನುಷಿಕ ವಿಪತ್ತುಗಳು, ಕಾರ್ಯಸಾಧನೆಯಿಂದ ಉಂಟಾಗುವ ಪರಿಣಾಮ — ಇವುಗಳನ್ನು ನಿಶ್ಚಯಿಸಿ ರಾಜನಿಗೆ ಸಲಹೆ ಕೊಡುವುದು ಒಳಮಂಡಲದ ಮುಖ್ಯ ಕೆಲಸ. ಮಂತ್ರಿ ಪರಿಷತ್ತಿನಲ್ಲಿ ಬಹುಮತ ಬೆಂಬಲವಿಲ್ಲದ ನಿರ್ಣಯಗಳನ್ನು ರಾಜನು ಆಚರಣೆಗೆ ತರಕೂಡದೆಂಬ ಸಂಪ್ರದಾಯಬದ್ಧ

ತತ್ವಕ್ಕೆ ಕೌಟಿಲ್ಯನು ವಿಶೇಷ ಮನ್ನಣೆಯನ್ನು ಕೊಟ್ಟಿದ್ದಾನೆ. ರಾಜನ ಎಲ್ಲಾ ಕಾರ್ಯಗಳಿಗೂ ಅಮಾತ್ಯ ಪರಿಷತ್ತಿನ ಸಮ್ಮತಿ ಮುದ್ರೆ ಆವಶ್ಯಕವಾಗಿದ್ದಿತು. ಎಂದರೆ, ರಾಜನ ಆಜ್ಞೆಗಳು ಶಾಸನಬದ್ಧವಾಗಿದ್ದುವು. ಮಂತ್ರಿಪರಿಷತ್ತು ಲಿಖಿತರೂಪ ದಲ್ಲಲ್ಲದೆ ರಾಜಾಜ್ಞೆಗಳನ್ನು ಆದರಿಸುತ್ತಿರಲಿಲ್ಲ. ಶ್ರುತಿಗೂ ಸ್ಮೃತಿಗೂ ವಿರೋಧ ಬಂದರೆ ಶಿಷ್ಟಾಚಾರವನ್ನೇ ಪ್ರಮಾಣ ವಾಗಿ ತೆಗೆದುಕೊಳ್ಳಬಹುದೆಂದು ಧರ್ಮಶಾಸ್ತ್ರವು ತಿಳಿಸಿದೆ. ಕೌಟಿಲ್ಯನು ಪ್ರಾಚೀನಕಾಲದಿಂದಲೂ ರೂಢಿಯಲ್ಲಿ ಬಂದ ನೈತಿಕ ಮತ್ತು ಧಾರ್ಮಿಕ ನಿಯಮಗಳನ್ನಲ್ಲದೆ ಸಮಾಜ ಬೆಳೆದಂತೆ ದೇಶ ಕಾಲ ಪರಿಸ್ಥಿತಿಗನುಸಾರವಾಗಿ ಅತ್ಯಾವಶ್ಯಕ ವಾಗಿ ಬೇಕಾದ ಬದಲಾವಣೆಗಳನ್ನೂ ಒಪ್ಪುತ್ತಾನೆ.

ದಂಡಗಳನ್ನು ವಿಧಿಸುವ ಶಾಸನವು ಆಜ್ಞಾ ಲೇಖವೆಂತಲೂ, ದಾನ ಸನ್ಮಾನಗಳಿಗೆ ಸಂಬಂಧಪಟ್ಟ ಶಾಸನಗಳು ಉಪಗ್ರಹ ಲೇಖವೆಂತಲೂ, ವರ್ಣ, ಪುರ, ಗ್ರಾಮ, ರಾಷ್ಟ್ರಗಳ ಆಪತ್ತಿನ ನಿವಾರಣೆಗಾಗಿ ರಚಿತವಾದ ಶಾಸನಗಳು ಪರಿಹಾರಲೇಖ ವೆಂತಲೂ, ಪ್ರವೃತ್ತಿಲೇಖ, ಪ್ರತಿಲೇಖ, ಸರ್ವತ್ರಗಲೇಖ ವೆಂತಲೂ ನಾನಾವಿಧವಾದ ಶಾಸನಗಳು ಅರ್ಥಶಾಸ್ತ್ರದಲ್ಲಿ ವಿವರಿಸ ಲ್ಪಟ್ಟವೆ. ಇವುಗಳ ರಚನೆಗೆ ಅಮಾತ್ಯನಂತೆ ಸರ್ವಗುಣಸಂಪನ್ನ ನಾದವನನ್ನೇ ಲೇಖಕನನ್ನಾಗಿ ನೇಮಿಸುವುದು ವಾಡಿಕೆ.

ಜನಪದ, ದುರ್ಗ ಮತ್ತು ಸೈನ್ಯ:—ಇವೂ ಸ್ವಾಮಿ ಮತ್ತು ಅಮಾತ್ಯರಂತೆ ಮುಖ್ಯವಾದ ರಾಜ್ಯಾಂಗಗಳು. ಜನಪದದ ಬೆಂಬಲವಿಲ್ಲದಿದ್ದರೆ ರಾಜನಿಗೆ ಸ್ಥಾನವೇ ಇಲ್ಲ. ಹಸುವಿಲ್ಲದಿದ್ದರೆ ಹಾಲು ಹೇಗೆ ಸಿಕ್ಕುವುದಿಲ್ಲವೋ ಅದೇ ರೀತಿ ಜನಪದವಿಲ್ಲ ದಿದ್ದರೆ ರಾಜನೂ ಇಲ್ಲವೆಂದು ಕೌಟಿಲ್ಯನು ಹೇಳುತ್ತಾನೆ.

ಯಾವ ಶಾಸನಗಳು ಹೊರಬಿದ್ದರೂ ಅವು ಜನಪದದ ಅಭ್ಯುದಯಕ್ಕೆ ಸಹಾಯಕವಾಗಬೇಕು. ಜನಪದದಲ್ಲಿ ಗ್ರಾಮ, ಸಂಗ್ರಹಣ, ಖಾರ್ವಟಿಕ, ದ್ರೋಣಮುಖ ಮತ್ತು ಸ್ಥಾನೀಯ ಇವು ರಾಜಕೀಯ ವಿಭಾಗಗಳು. ಗ್ರಾಮ ಪಂಚಾಯಿತಿಗಳು, ವರ್ತಕಮಂಡಲಿಗಳು, ಕೂಲಿಗಾರರ ಸಂಘಗಳು, ವಿದ್ಯಾ ಸಂಸ್ಥೆಗಳು ಮೊದಲಾದುವು ಸಾಮಾಜಿಕ ಸಂಸ್ಥೆಗಳು, ಇವುಗಳು ದೇಶದ ಆರ್ಥಿಕ ಮೇಲ್ಮೆ, ಪ್ರಜಾಸೌಖ್ಯ, ಕೃಷಿ, ಕೈಗಾರಿಕೆ, ವ್ಯಾಪಾರ, ವಿದ್ಯೆ ಮತ್ತು ಧರ್ಮ ಇವುಗಳ ಮೇಲ್ವಿಚಾರಣೆಯನ್ನು ನೋಡಿಕೊಂಡು ಜನಗಳಿಗೆ ಔದ್ಯೋಗಿಕ ಮತ್ತು ಸಾಮೂಹಿಕ ಸ್ವಾತಂತ್ರ್ಯವನ್ನು ಕೊಟ್ಟು ಸಮಾಜದ ಏಳ್ಗೆಗೆ ಸಹಕಾರಿಗಳಾಗಿದ್ದುವು. ಇವುಗಳ ಸ್ವಾತಂತ್ರ್ಯಕ್ಕೆ ಕುಂದೆಂದರೆ ರಾಷ್ಟ್ರಕ್ಕೆ ಹಾನಿ. ಆದರೆ ಇವುಗಳಿಂದ ಪ್ರಭುತ್ವಕ್ಕಾಗಲಿ ಪ್ರಜಾಹಿತಕ್ಕಾಗಲಿ ಭಂಗವುಂಟಾಗದಂತೆ ನೋಡಿಕೊಳ್ಳುವುದೂ ರಾಜನ ಕರ್ತವ್ಯ. ರಾಜನು ಅವುಗಳ ಉನ್ನತಿಗಾಗಿ ದುಡಿದು ಆ ಕಾಲದ ಸಾಮಾಜಿಕ ಜೀವನದ ಮೂಲಾಧಾರವಾದ ವರ್ಣಾಶ್ರಮ ಧರ್ಮಗಳನ್ನು ಕಾಪಾಡುವುದು ತನ್ನ ಮುಖ್ಯ ಕೆಲಸವೆಂದು ಗಣಿಸಬೇಕಾಗಿದ್ದಿತು. ಅಷ್ಟೇ ಅಲ್ಲ; ಜಿತರಾಷ್ಟ್ರಗಳಲ್ಲೂ ಇಂತಹ ಸಂಸ್ಥೆಗಳ ಸ್ವಾತಂತ್ರ್ಯಕ್ಕೆ ಕುಂದುತರದಂತೆ ನಡೆದುಕೊಳ್ಳಬೇಕಾಗಿದ್ದಿತು. ಹಾಗೆ ರಾಜನಿಂದ ಅವುಗಳಿಗೆ ತೊಂದರೆ ಉಂಟಾದರೆ ಜನರು ಉದ್ರೇಕಗೊಂಡು ರಾಜನನ್ನು ಸಿಂಹಾಸನ ಚ್ಯುತನನ್ನಾಗಿ ಮಾಡುವರೆಂಬ ಭಯವಿತ್ತು.

ರಾಜನಿಗೆ ಭೂಮಿ ಮತ್ತು ಪ್ರಜೆಗಳ ಮೇಲೆ ಸ್ವಾಮ್ಯವಿದೆಯೇ ಎಂಬ ಪ್ರಶ್ನೆ ಭಾರತೀಯ ದಂಡನೀತಿಯಲ್ಲಿ ಬಹು

ಮುಖ್ಯವಾದುದು. ರಾಜನು ಭೂಮಿಗೆ ಮಾತ್ರ ಒಡೆಯ; ಜನಗಳಮೇಲೆ ಮನಸ್ವಿಯಾಗಿ ವರ್ತನೆಮಾಡುವ ಅಧಿಕಾರ ವನ್ನು ಪಡೆದಿಲ್ಲ ಎಂಬ ಅಂಶವನ್ನು ಕೌಟಿಲ್ಯನು ಒಂದು ಸಂದರ್ಭದಲ್ಲಿ ಹೇಳಿದ್ದಾನೆ. ಇದನ್ನೇ ಅರ್ಥಶಾಸ್ತ್ರದ ಮೇಲೆ ಟೀಕೆ ನಡೆಸಿರುವ ಭಟ್ಟಸ್ವಾಮಿಯೂ....

"ರಾಜಾ ಭೂಮೇಃ ಪತಿರ್ದೃಷ್ಟಃ ಶಾಸ್ತ್ರಜ್ಞೈರುದಕಸ್ಯ ಚ।
ತಾಭ್ಯಾಮನ್ಯತ್ತು ಯದ್ದ್ರವ್ಯಂ ತತ್ರ ಸ್ವಾಮ್ಯಂ ಕುಟುಂಬಿನಾಂ॥

ಎಂಬ ಶ್ಲೋಕದಲ್ಲಿ ಹೇಳಿದ್ದಾನೆ. ರಾಜನು ಭೂಮಿ ಮತ್ತು ಉದಕಕ್ಕೆ ಪತಿ: ಮಿಕ್ಕ ಎಲ್ಲಾ ಸಂಪತ್ತಿಗೂ ಕುಟುಂಬಿಗಳು ರಾಜನಿಗೆ ಸರಿಸಮನಾದ ಹಕ್ಕನ್ನು ಹೊಂದಿದ್ದಾರೆಂಬುದು ಈ ಶ್ಲೋಕದ ಅರ್ಥ. ಇದು ಚರ್ಚಾಸ್ಪದವಾದ ವಿಷಯ. ರಾಜನೂ ಅವನ ಪ್ರಜೆಗಳೂ ಭೂಮಿಯ ಸ್ವಾಮಿತ್ವದಲ್ಲಿ ಸಮವಾದ ಹಕ್ಕುಳ್ಳವರು ಎಂದು ಡಾ|| ಥಾಮಸ್‌ರವರು ಈ ಶ್ಲೋಕಕ್ಕೆ ಅರ್ಥಮಾಡುತ್ತಾರೆ.* ರಾಜನು ಈ ದೃಷ್ಟಿ ಯಿಂದ ಪ್ರಜೆಗಳಿಗೆ ಸಮಾನಸ್ಕಂಧನಾದರೆ ಅವನಿಗೆ ತನ್ನ ಅಧಿಕಾರವನ್ನು ದುರುಪಯೋಗಪಡಿಸುವ ಹಕ್ಕು ಇಲ್ಲ. ನ್ಯಾಯವಾದ ರೀತಿಯಲ್ಲಿ ಮಾತ್ರ ಜನಗಳನ್ನು ಕಾಪಾಡುವ ಪ್ರತಿನಿಧಿ ಅವನು. ಆದರೆ ಡಾ|| ಸ್ಮಿತ್ ಮತ್ತು ಡಾ|| ಜಯ ಸ್ವಾಲ್‌ರವರು "ಕುಟುಂಬಿನಾಂ" ಎಂಬ ಪದಕ್ಕೆ ರಾಜನ ಕುಟುಂಬ ಎಂಬ ಅರ್ಥವನ್ನು ಕೊಟ್ಟು, ರಾಷ್ಟ್ರಕ್ಕೆ ಒಡೆಯ

---

1 K.P. Jayaswal Hindu Polity. II. P. 182.

* ಇದಕ್ಕೆ ಬೇರೆ ಆಧಾರವೂ ಉಂಟು. ತುಲ್ಯನೇತನೋಽಸ್ಮಿ। ಭವ ದ್ಭಿಸ್ಸಹ ಭೋಗ್ಯಮಿದಂ ರಾಜ್ಯಂ X. 3.

ನಾದ ರಾಜನಿಗೆ ಭೂಮಿ, ಉದಕ ಮತ್ತು ಪ್ರಜೆಗಳಮೇಲೆ ಸಂಪೂರ್ಣ ಅಧಿಕಾರವಿದೆ ಎಂದು ಹೇಳುತ್ತಾರೆ. ಪ್ರಾಚೀನ ಇತಿಹಾಸಗಳನ್ನು ನೋಡಿದರೆ ರಾಜನು ಪ್ರಜೆಗಳ ಪ್ರತಿನಿಧಿಯಾಗಿ ಅವರಿಗೆ ಸೇವೆ ಸಲ್ಲಿಸಿ ಅದಕ್ಕೆ ಪ್ರತಿಫಲರೂಪವಾಗಿ ತನ್ನ ಸ್ಥಾನವನ್ನು ಪಡೆದಿದ್ದಾನೆಂಬುದಕ್ಕೂ, ಹಾಗೆ ಅವನು ಯೋಗ್ಯರೀತಿಯಲ್ಲಿ ವರ್ತಿಸದೆ ಕರ್ತವ್ಯಭ್ರಷ್ಟನಾದರೆ ಪ್ರಜೆಗಳು ಆತನನ್ನು ಸಿಂಹಾಸನಚ್ಯುತನನ್ನಾಗಿ ಮಾಡುತ್ತಿದ್ದರೆಂಬುದಕ್ಕೂ ನಿದರ್ಶನಗಳಿವೆ. ಇದರಿಂದ ಪ್ರಜೆಗಳಿಗೆ ಆ ಕಾಲದಲ್ಲಿ ಎಷ್ಟರಮಟ್ಟಿನ ಅಧಿಕಾರವಿದ್ದಿತೆಂಬುದು ವ್ಯಕ್ತವಾಗುವುದಲ್ಲದೆ ಪ್ರಜೆಗಳು ಭೂಮಿಗೆ ಒಡೆಯರೆಂದೂ, ಭೂಮಿ ಮತ್ತು ಪ್ರಜೆಗಳ ಸಂರಕ್ಷಣೆ ರಾಜನಿಗೆ ಸೇರಿದುದೆಂದೂ ವ್ಯಕ್ತವಾಗುತ್ತದೆ. ಕೌಟಿಲ್ಯನ ಪ್ರಕಾರ ಪ್ರಜೆಗಳಿಗೂ ರಾಜನಿಗೂ ಒಂದು ವಿಧವಾದ ಪರಸ್ಪರ ನಿಕಟಸಂಬಂಧವು ಕರಾರಿನ ರೂಪದಲ್ಲಿದ್ದಂತೆ ಕಾಣುತ್ತದೆ. ಏಕೆಂದರೆ ರಾಜನು ಕರ್ತವ್ಯಭ್ರಷ್ಟನಾದರೆ ಹೇಗೆ ತನ್ನ ಸ್ಥಾನವನ್ನು ಕಳೆದುಕೊಳ್ಳುತ್ತಿದ್ದನೋ ಅದೇ ರೀತಿ ರೈತನು ಕಂದಾಯವನ್ನು ಕೊಡುವುದನ್ನು ನಿಲ್ಲಿಸಿದರೆ ಅವನ ಭೂಸ್ವಾಮಿತ್ವವು ನಾಶವಾಗುತ್ತಿದ್ದಿತು.

ಜನಪದವನ್ನು ಒಳನಾಡಿನಿಂದಾಗಲೀ ಅಥವಾ ವಿದೇಶಗಳಿಂದಾಗಲೀ ಅಪಾಯ ತಟ್ಟದಂತೆ ಕಾಪಾಡಬೇಕಾದರೆ ಸೈನ್ಯ ಮತ್ತು ದುರ್ಗಗಳು ಅವಶ್ಯಕವಾಗಿದ್ದುವು. ಸಂಚುಕಾರರು ಅನ್ಯದೇಶದ ಗೂಢಚಾರರು, ಸ್ವಾರ್ಥಸಾಧಕರು ಅಂತಃಕಲಹಗಳನ್ನು ಬಿತ್ತಿ ಪ್ರಜೆಗಳಿಗೆ ಹಾನಿಯನ್ನುಂಟುಮಾಡಬಹುದು. ಕಲಹಗಳಿಂದ ಕೂಡಿದ ರಾಜ್ಯವನ್ನು ನೆರೆಯ ರಾಜರು ಆಕ್ರಮಿಸಲು ಅನುಕೂಲವಾಗುವುದು. ರಾಜನು ಇಂಥಾ ಗೊಂದಲಗಳಿಗೆ ಅವಕಾಶವನ್ನು ಕೊಟ್ಟು ಅಜಾಗರೂಕನಾಗಿದ್ದರೆ

ಸಮಯವನ್ನು ಕಾಯುತ್ತ ಸಿದ್ಧವಾಗಿರುವ ಪರರಾಷ್ಟ್ರಗಳು ಈ ರಾಜ್ಯವನ್ನು ನುಂಗುವುವು. ಈ ತೆರನಾದ ತೊಂದರೆಗಳಿಂದ ದೇಶವನ್ನು ಪಾರು ಮಾಡುವುದಕ್ಕಾಗಿ ರಾಜ್ಯದ ಎಲ್ಲೆಗಳಲ್ಲಿಯೂ ಮುಖ್ಯಭಾಗಗಳಲ್ಲಿಯೂ ಕೋಟೆಕೊತ್ತಲಗಳನ್ನು ಕಟ್ಟಿಸಿ ಪರದಾಳಿಯನ್ನು ಯಾವ ಕ್ಷಣದಲ್ಲಿ ಬೇಕಾದರೂ ಎದುರಿಸಲು ಸಾಕಾದಷ್ಟು ಸೈನ್ಯವನ್ನು ಇಟ್ಟಿರಬೇಕು. ದೇಶದ ಒಳಗೆ ನಡೆಯಬಹುದಾದ ಕೃತ್ರಿಮಗಳನ್ನು ಅಡಗಿಸುವಷ್ಟು ಜಾಗರೂಕನಾಗಿರಬೇಕು. ದೇಶದ ಹೆದ್ದಾರಿಗಳ ಬಾಗಿಲುಗಳಲ್ಲೂ, ಪರ್ವತ, ಬೆಟ್ಟ ಮೊದಲಾದ ಸ್ವಾಭಾವಿಕ ತಡೆ ಇಲ್ಲದ ಮೈದಾನ ಪ್ರದೇಶದಲ್ಲೂ, ಕೃಷಿ ಕೈಗಾರಿಕೆಗಳ ಕೇಂದ್ರಗಳಲ್ಲಿಯೂ, ನೀರು ಆಹಾರಗಳು ಸುಲಭವಾಗಿ ದೊರಕದ ಮರುಭೂಮಿಯ ಹತ್ತಿರದಲ್ಲೂ, ನದಿಯ ದ್ವೀಪಗಳಲ್ಲಿಯೂ ಕೋಟೆಗಳನ್ನು ಕಟ್ಟಿ ಅಲ್ಲಿ ಸೈನ್ಯ ಮತ್ತು ಕೋಶಗಳನ್ನು ಇಡಬೇಕು. ಇವುಗಳಲ್ಲಿ ಔದಕ ಮತ್ತು ಪರ್ವತ ದುರ್ಗಗಳೇ ಅತಿ ಮುಖ್ಯವಾದವು. ಆಕ್ರಮಣ ಭಯವಿದ್ದಾಗ ರಾಜನು ದುರ್ಗಮವೂ ಅಭೇದ್ಯವೂ ಆದ ದುರ್ಗಗಳನ್ನು ತನ್ನ ನೆಲೆಯನ್ನಾಗಿ ಉಪಯೋಗಿಸಿಕೊಳ್ಳಲು ಸಿದ್ಧಪಡಿಸಿಕೊಂಡಿರಬೇಕಾಗಿದ್ದಿತು.

ರಾಷ್ಟ್ರರಕ್ಷಣೆಗೆ ದುರ್ಗವು ಎಷ್ಟು ಮುಖ್ಯವಾಗಿದ್ದಿತೋ ಸೈನ್ಯವೂ ಅಷ್ಟೇ ಪ್ರಾಧಾನ್ಯವುಳ್ಳದ್ದಾಗಿದ್ದಿತು. ಸೈನ್ಯವು ಚತುರಂಗಬಲದಿಂದ ಕೂಡಿ ಶಿಸ್ತಿನಲ್ಲಿತ್ತು. ಪ್ರತಿಬಲದಲ್ಲೂ ಅನೇಕ ವಿಭಾಗಗಳಿದ್ದುವು. ಸೈನ್ಯಕ್ಕೆಲ್ಲಾ ಒಬ್ಬ ಮುಖ್ಯ ದಂಡನಾಯಕನೂ ಅನಂತರ ಪ್ರತಿ ಬಲದ ಮೇಲೂ ಒಬ್ಬೊಬ್ಬ ಮುಖ್ಯಾಧಿಕಾರಿಯೂ ಇದ್ದರು. ಇವರ ಕೈಕೆಳಗೆ ಅನೇಕ ವಿಧವಾದ ಅಧಿಕಾರಿಗಳಿದ್ದರು. ಯೋಧವೃತ್ತಿಯು ಬಹಳ

ನಿಯಮಬದ್ಧವಾಗಿದ್ದಿತು. ದಂಡಯಾತ್ರೆಯ ಕಾಲದಲ್ಲಿ ಆಕ್ರಮಿತ ಪ್ರದೇಶಗಳಲ್ಲಿ ಸ್ತ್ರೀಯರನ್ನೂ ದುರ್ಬಲರನ್ನೂ ನಿರಾಶ್ರಿತರನ್ನೂ ಹಿಂಸಿಸಕೂಡದೆಂದೂ, ಪ್ರದೇಶದ ಕೃಷಿ ಕೈಗಾರಿಕೆಗಳನ್ನು ನಾಶಮಾಡಕೂಡದೆಂದೂ ಕಟ್ಟಿದ್ದಿತು. ಆ ಕಾಲದಲ್ಲಿ ಪರಕೀಯರ ದಾಳಿಯ ಭಯವು ಯಾವ ಕ್ಷಣವೂ ತಪ್ಪಿರಲಿಲ್ಲವಾದುದರಿಂದ ರಾಜನು ಸೈನ್ಯವನ್ನು ಸದಾಕಾಲ ದಲ್ಲೂ ಸಜ್ಜುಗೊಳಿಸಿ ಇಟ್ಟಿರಬೇಕಾಗಿದ್ದಿತು.

ಕೋಶ :— ರಾಜ್ಯಾಡಳಿತಕ್ಕೆ ಮೂಲಪ್ರಾಯವಾದುದು ಕೋಶ. ರಾಜಭಂಡಾರದಲ್ಲಿ ಧನವಿದ್ದರೆ ಸೈನ್ಯ ಮತ್ತು ಇತರ ಎಲ್ಲಾ ಅಂಗಗಳೂ ನಡೆಯುತ್ತವೆ; ಕೋಶವಿಲ್ಲದಿದ್ದರೆ ರಾಜ್ಯವೇ ಇಲ್ಲ. ಅಧಿಕಾರಿಗಳ ವೇತನ, ಸೈನ್ಯಕ್ಕಾಗುತ್ತಿದ್ದ ವೆಚ್ಚ, ದಾನಧರ್ಮಗಳಿಗಾಗಿ ಕೊಡುತ್ತಿದ್ದ ಹಣ — ಇವುಗಳಿಗೆಲ್ಲಾ ಕೋಶದಿಂದಲೇ ಒದಗಿಸಬೇಕಾಗಿದ್ದಿತು. ಕರಗಳನ್ನು ಧರ್ಮಕ್ಕನುಸಾರವಾಗಿ ನಿಯಮಿಸುವುದು ವಾಡಿಕೆಯಲ್ಲಿದ್ದಿತು. ಸಾಧುಗಳು, ಬ್ರಾಹ್ಮಣರು, ಮಠಗಳು ಮತ್ತು ವಿದ್ಯಾಪೀಠಗಳು ಮುಂತಾದುವು ಕರವನ್ನು ಕೊಡುತ್ತಿರಲಿಲ್ಲ. ಧಾರ್ಮಿಕ, ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿಯಲ್ಲಿ ಗೊಂದಲ ಉಂಟಾದಾಗ ತೆರಿಗೆ ವಸೂಲಿಯನ್ನು ನಿಯಮಿತವಾದ ಕಾಲದ ವರೆಗೆ ಬಿಡುತ್ತಿದ್ದರು. ಬ್ರಾಹ್ಮಣರು ತಮ್ಮ ವರ್ಣದ ವೃತ್ತಿಗಳನ್ನು ಬಿಟ್ಟು ಇತರ ವರ್ಣದವರ ವೃತ್ತಿಗಳನ್ನು ಅನುಸರಿಸಿದರೆ ಆಗ ಮಾತ್ರ ಅವರು ತೆರಿಗೆಯನ್ನು ಕೊಡಬೇಕಾಗಿದ್ದಿತು. ವೃತ್ತಿಗಳು ವರ್ಣವನ್ನು ಅನುಸರಿಸಲೇಬೇಕೆಂಬ ನಂಬಿಕೆಯು ಕೌಟಿಲ್ಯನ ಕಾಲದಲ್ಲಿ ಬಿಗಿಯಾಗಿರಲಿಲ್ಲ. ಜನರು ತಮ್ಮ ವೃತ್ತಿಯನ್ನೇ ಅಲ್ಲದೆ ಬೇರೆ ವೃತ್ತಿಯನ್ನು ಬೇಕಾದರೂ

ಅನುಸರಿಸಲು ಸ್ವತಂತ್ರರಾಗಿದ್ದರು. ಕ್ಷಾಮ ರೋಗ ಮೊದಲಾದ ವಿಪತ್ತುಗಳು ರಾಷ್ಟ್ರಕ್ಕೆ ಒದಗಿದರೆ ಆ ಕಾಲದಲ್ಲಿ ಕಂದಾಯ ವನ್ನು ತೆಗೆದುಕೊಳ್ಳುತ್ತಿರಲಿಲ್ಲ. ಹೆಂಗಸರು, ವ್ಯಾಧಿಗ್ರಸ್ತರು, ವಿದ್ಯಾರ್ಥಿಗಳು, ಕುರುಡ ಕುಂಟರೇ ಮೊದಲಾದವರು ಕರವನ್ನು ಕೊಡಬೇಕಾದುದಿಲ್ಲ. ನಿಯತವಾದುದಕ್ಕಿಂತ ಹೆಚ್ಚು ತೆರಿಗೆಯನ್ನು ವಿಧಿಸಿದರೆ ಅಥವಾ ಜನಗಳ ಶಕ್ತಿಗೆ ಮೀರಿ ತೆರಿಗೆಗಳನ್ನು ವಿಧಿಸಿದರೆ ಆಗ ಪ್ರಜೆಗಳ ರಕ್ತವನ್ನು ಹೀರಿದಂತಾ ಗುವುದೆಂಬುದು ಕೌಟಿಲ್ಯನ ಅಭಿಪ್ರಾಯ. ಹೆಚ್ಚು ತೆರಿಗೆಗಳನ್ನು ವಿಧಿಸುವುದು ರಾಜನಿಗೆ ಅಪಾಯಕರವೆಂದು ಇದರಿಂದ ವ್ಯಕ್ತ ವಾಗುತ್ತದೆ. ಇಷ್ಟೇ ಅಲ್ಲದೆ ಯುದ್ಧ ಕ್ಷಾಮ ಮೊದಲಾದ ಆಪತ್ಕಾಲದ ಖರ್ಚಿಗಾಗಿ ಧನವನ್ನು ಶೇಖರಿಸಿಡಬೇಕಾಗಿದ್ದಿತು. ರಾಜಾದಾಯದ ಯಾವ ಭಾಗವನ್ನು ಈ ಕೆಲಸಗಳಿಗಾಗಿ ಇಡಬೇಕೆಂಬ ಅಂಶವನ್ನು "ಕೋಶಾಭಿಸಂಹರಣ" ಎಂಬ ಐದನೆಯ ಅಧಿಕರಣದ ಎರಡನೆಯ ಅಧ್ಯಾಯದಲ್ಲಿ ಉಲ್ಲೇ ಖಿಸಿದ್ದಾನೆ. ದೇಶದ ಖರ್ಚು ಮತ್ತು ಆದಾಯಗಳು ಸರಿತೂಗು ವಂತೆ ಮಾಡುವುದು ಕೋಶರಚನೆಯ ಉದ್ದೇಶ. ಕೌಟಿಲ್ಯನ ದೃಷ್ಟಿಯಲ್ಲಿ ರಾಷ್ಟ್ರಾಭ್ಯುದಯವೇ ಎಲ್ಲ ಕೆಲಸಗಳ ಮುಖ್ಯ ಗುರಿಯಾದುದರಿಂದ ಪ್ರಾಚೀನಕಾಲದಿಂದಲೂ ರೂಢಿಯಲ್ಲಿ ಬಂದ ತೆರಿಗೆಗಳಿಂದ ಉತ್ಪನ್ನವಾದ ಆದಾಯವು ಸಾಲದಿದ್ದಲ್ಲಿ ಭೂಕಂದಾಯವಲ್ಲದೆ ಖನಿ, ಉಪ್ಪು, ಅರಣ್ಯ, ಮದಿರಾ ಮತ್ತು ಸೂನಾಗೃಹಗಳು, ಅಮದು ರಫ್ತುಗಳು ಇವುಗಳ ಮೇಲೆ ಕರಗಳನ್ನು ವಿಧಿಸಿ ರಾಜಾದಾಯವನ್ನು ಹೆಚ್ಚಿಸಬಹುದೆಂದು ಹೇಳಿದ್ದಾನೆ. ಅಲ್ಲದೆ ಪ್ರತಿದಿನವೂ ಆದಾಯವೆಚ್ಚಗಳ ಖಾತೆ ಗಳನ್ನು ಪರೀಕ್ಷಿಸಿ ವೆಚ್ಚವು ಹೆಚ್ಚಾಗಿ ಕಂಡುಬಂದಲ್ಲಿ ಅದಕ್ಕೆ

ತಕ್ಕ ಏರ್ಪಾಡುಗಳನ್ನು ಮಾಡಬೇಕು ಎಂದು ರಾಜನಿಗೆ ಎಚ್ಚರಿಕೆ ಕೊಟ್ಟಿದ್ದಾನೆ.

ಕರ್ಮಸು ಚೈಷಾಂ ನಿತ್ಯಂ ಪರೀಕ್ಷಾಂ ಕಾರಯೇತ್ II-9

ಕಂದಾಯುಗಳಲ್ಲೆಲ್ಲಾ ಭೂಕಂದಾಯವೇ ಪ್ರಧಾನವಾದುದು. ಫಸಲಿನ ಆರನೆ ಒಂದು ಭಾಗ (ಧಾನ್ಯಷಡ್ಭಾಗ) ರಾಜನಿಗೆ ಸಲ್ಲುತ್ತಿದ್ದಿತು. ಕೆರೆ, ಸರೋವರ, ಮೊದಲಾದ ಜಲಾಶಯದ ಆಸರೆಯಲ್ಲಿ ಬೆಳೆದ ಬೆಳೆಗಳಲ್ಲಿ ಷಡ್ಭಾಗವಲ್ಲದೆ ಐದನೆ ಒಂದು ಭಾಗ ಉದಕಭಾಗವನ್ನೂ ಕೊಡಬೇಕಾಗಿದ್ದಿತು. ಭೂಮಿಯ ಮೇಲೆ ಹಾಕಿದ್ದ ಎಲ್ಲ ಕಂದಾಯಗಳೂ ಸೇರಿ ಒಟ್ಟು ಫಸಲಿನಲ್ಲಿ ೩.೧೦ ಭಾಗ ರಾಜನಿಗೆ ಸಲ್ಲುತ್ತಿತ್ತು.

ಮಿತ್ರ:— ಕೌಟಿಲ್ಯನ ಕಾಲದಲ್ಲಿ ಭರತಖಂಡವು ಅನೇಕ ಸಣ್ಣ ಸಣ್ಣ ರಾಜ್ಯಗಳಾಗಿ ಒಡೆದುಹೋಗಿ ದುರ್ಬಲವಾಗಿದ್ದಿತು. ರಾಷ್ಟ್ರವು ಪ್ರಬಲವಾಗಿಯೂ ಮತ್ತು ಸ್ವತಂತ್ರವಾಗಿಯೂ ಇರಬೇಕಾದರೆ ಅದು ಇತರ ರಾಷ್ಟ್ರಗಳೊಡನೆ ವಿವೇಕಯುತವಾದ ಸಂಬಂಧವನ್ನು ಹೊಂದಿರಬೇಕು. ಯಾವುದರೊಡನೆ ಸ್ನೇಹ ಬೆಳೆಸಬೇಕು, ಯಾವುದರೊಡನೆ ಸ್ನೇಹ ಬೆಳಸಬಾರದು, ಯಾವುದರಲ್ಲಿ ತಾಟಸ್ಥ್ಯನೀತಿಯನ್ನು ಅನುಸರಿಸಬೇಕು, ತಾನೂ ತನ್ನ ಮಿತ್ರರಾಷ್ಟ್ರಗಳೂ ಹಿತವಾಗಿ ಬದುಕುವುದು ಹೇಗೆ—ಎಂಬೀ ವಿಷಯಗಳಿಗೆ ಗಮನ ಸಲ್ಲಬೇಕು. ಶಾಂತಿ ಯಾವಾಗ, ಸಂಧಾನ ಯಾವಾಗ, ಯುದ್ಧವು ಯಾವಾಗ ಎಂಬ ವಿಷಯವನ್ನು ಪರ್ಯಾಲೋಚಿಸಬೇಕು. ಈ ವಿಷಯಕ್ಕೆ ಸೇರಿದ ನೀತಿ ಬಹುಮುಖ್ಯವಾದುದರಿಂದ ಕೌಟಿಲ್ಯನು ತನ್ನ ಗ್ರಂಥದ ಮೂರನೆ ಒಂದು ಭಾಗವನ್ನು ಇದರ ವಿವರಣೆಗೆ ಮೀಸಲಾಗಿಟ್ಟಿದ್ದಾನೆ.

ರಾಷ್ಟ್ರರಾಷ್ಟ್ರಗಳ ಪರಸ್ಪರ ಸಂಬಂಧಗಳು ನಾಲ್ಕು ವಿಧವಾಗಿವೆ. ನೆರೆಯ ರಾಜರೊಡನೆ ಸ್ನೇಹಭಾವದಿಂದ ವರ್ತಿಸುವವನು ಮಿತ್ರ. ಪ್ರಕಟವಾದ ಶತ್ರುತ್ವವನ್ನು ತೋರಿಸುವವನು ಸಹಜ ಶತ್ರು. ಶತ್ರುತ್ವದ ಸೂಚನೆಯನ್ನು ಕೊಡದೆ ಆಕ್ರಮಣ ನಡೆಸುವವನು ಕೃತ್ರಿಮ ಶತ್ರು. ಎರಡು ಶತ್ರುರಾಷ್ಟ್ರಗಳ ನಡುವೆ ಇದ್ದು ಯಾರಿಗೂ ಸಹಾಯಮಾಡುವುದಕ್ಕೆ ಇಷ್ಟಪಡದಿರುವವನು ಉದಾಸೀನ. ಈ ಸಂಬಂಧಗಳನ್ನುಳ್ಳ ರಾಷ್ಟ್ರಗಳ ವ್ಯೂಹಕ್ಕೆ ಮಂಡಲವೆಂದು ಹೆಸರು. ಮಂಡಲದೊಳಗಿನ ರಾಜ್ಯಗಳು ಒಂದರೊಡನೊಂದು ಸಂಧಿಮಾಡಿಕೊಳ್ಳಬಹುದು. ವಿಗ್ರಹವನ್ನು ನಡೆಸಬಹುದು; ಔದಾಸೀನ್ಯವನ್ನು ತೋರಿಸಬಹುದು; ಸದಾ ಯುದ್ಧಕ್ಕೆ ಸಿದ್ಧವಾಗಿರಬಹುದು. ಅಥವಾ ಯುದ್ಧನಿಮಿತ್ತವಾಗಿ ನೆರೆಯ ರಾಜರ ಸಹಾಯವನ್ನು ಕೋರಬಹುದು; ಅಥವಾ ಒಂದು ರಾಜ್ಯದೊಡನೆ ಸಂಧಿಮಾಡಿಕೊಂಡು ಮತ್ತೊಂದರೊಡನೆ ವಿರೋಧದಿಂದ ವರ್ತಿಸಬಹುದು. ಆದರೆ ಯಾವ ರೀತಿಯ ಸಂಬಂಧ ನಡೆದರೂ ಅದು ಶಾಸನಬದ್ಧವಾಗಿರಬೇಕು. ಪರರಾಷ್ಟ್ರದೊಡನೆ ಒಂದು ಯುದ್ಧದಲ್ಲಿ ಭಾಗವಹಿಸಬೇಕಾದರೂ ಅದರ ಪ್ರತಿಫಲವು ತನ್ನ ಸ್ವಾತಂತ್ರ್ಯರಕ್ಷಣೆಗಾಗಲೀ ಅಥವಾ ದೇಶೋನ್ನತಿಗಾಗಲೀ ಸಹಾಯಕವಾಗುವಂತಿರಬೇಕು. ರಾಷ್ಟ್ರರಕ್ಷಣೆ ಮತ್ತು ಲಾಭ ಇವು ಸಿದ್ಧಿಸದಿದ್ದಾಗ ಯುದ್ಧವು ನಡೆಯುತ್ತಿದ್ದರೂ ಅದನ್ನು ನಿಲ್ಲಿಸಿ ಒಪ್ಪಂದವನ್ನು ಮಾಡಿಕೊಳ್ಳಬೇಕು. ಮಂಡಲದಲ್ಲಿ ಯಾವುದಾದರೂ ರಾಜ್ಯವು ಅತಿ ಪ್ರಬಲವಾಗಿ ಬಲಹೀನವಾದ ನೆರೆಯ ರಾಷ್ಟ್ರದ ಸ್ವಾತಂತ್ರ್ಯಕ್ಕೆ ಕುಂದು ತರುವಂತಿದ್ದಲ್ಲಿ ಉಳಿದ ಶಕ್ತಿಯುತರಾಷ್ಟ್ರಗಳು ದುರ್ಬಲರಾಷ್ಟ್ರದೊಡನೆ ಸಂಧಿಯನ್ನು ಮಾಡಿಕೊಂಡು

ಅದನ್ನು ಕಾಪಾಡುವುದಲ್ಲದೆ ರಾಜ್ಯಶಕ್ತಿ ಸಮತೆಯನ್ನು ಕಾಪಾಡುವುದು ಅವುಗಳ ಕರ್ತವ್ಯ. ಎರಡು ರಾಷ್ಟ್ರಗಳ ಪರಸ್ಪರ ಸಹಾಯಕ್ಕಾಗಿ ಶಾಸನದ ಮೂಲಕ ಒಪ್ಪಂದ ಮಾಡಿಕೊಂಡಿದ್ದಲ್ಲಿ ತಮ್ಮ ಪ್ರತಿಜ್ಞೆಯನ್ನು ಕಾಪಾಡಿಕೊಳ್ಳಬೇಕು: ತಪ್ಪಿದಲ್ಲಿ ಅವುಗಳಿಗೆ ಇಹಪರ ಲೋಕಗಳೆರಡರಲ್ಲೂ ಗತಿ ಕೆಡುವುದು. ಕೌಟಿಲ್ಯನ ಪ್ರಕಾರ ಸ್ವಧರ್ಮ ಪ್ರವರ್ತಕನಾದ ನೆರೆಯ ರಾಜನ ಮೇಲೆ ದಂಡಯಾತ್ರೆ ನಡೆಸುವುದೂ, ಇನ್ನೊಂದರೊಡನೆ ಮಾಡಿಕೊಂಡಿರುವ ಶಾಸನಬದ್ಧವಾದ ಸಂಬಂಧವನ್ನು ಮುರಿಯುವುದೂ ಅಧರ್ಮ.

ರಾಜ್ಯವಿಸ್ತರಣೆಯು ರಾಜನ ಮುಖ್ಯೋದ್ದೇಶವಾದರೂ ಜಿತರಾಷ್ಟ್ರಗಳ ವಿಷಯದಲ್ಲಿ ರಾಜನು ಹೇಗೆ ವರ್ತಿಸಬೇಕೆಂಬ ಅಂಶವನ್ನು ಕೌಟಿಲ್ಯನು ಚರ್ಚಿಸಿರುವುದು ಗಮನಾರ್ಹವಾಗಿದೆ. ಜಿತರಾಷ್ಟ್ರಗಳಲ್ಲಿ ಸಂಪೂರ್ಣ ಅಧಿಕಾರವನ್ನು ನಡೆಸುವ ಹಕ್ಕು ದಂಡೋಪನಾಯಕನಿಗೆ ಸೇರಿದ್ದರೂ ಅವನು ಪ್ರಾಚೀನವಾಗಿ ಬಂದ ರಾಜಮನೆತನಕ್ಕೇ ಆಡಳಿತವನ್ನು ಒಪ್ಪಿಸಬೇಕು. ಈ ವಿಷಯವಾಗಿ ದಂಡೋಪನತನೊಡನೆ ಒಪ್ಪಂದವನ್ನು ಮಾಡಿಕೊಳ್ಳಬೇಕು. ಶಾಂತಿಸಂಧಾನಗಳನ್ನು ನಡೆಸುವಾಗ ದುರಾಗ್ರಹ ಮಾಡುವುದಕ್ಕಿಂತಲೂ ನ್ಯಾಯ ಮತ್ತು ಸೈರಣೆಯಿಂದ ವರ್ತಿಸಬೇಕು. ಜಿತರಾಷ್ಟ್ರದ ಧಾರ್ಮಿಕ, ಸಾಮಾಜಿಕ, ನಡತೆಗಳನ್ನು ಸನ್ಮಾನಿಸಬೇಕು. ಅವರ ಉಡುಪು ಭಾಷೆಗಳಿಗೆ ಮರ್ಯಾದೆ ತೋರಿಸಬೇಕು. ಅವರಲ್ಲಿ ಅವಗುಣಗಳಿದ್ದರೂ ಅವನ್ನು ತನ್ನ ಸುಗುಣದಂತೆ ಸಂಪೂರ್ಣ ಅಭಯಪ್ರದಾನ ಮಾಡಿ ಅವರ ಏಳಿಗೆಗೂ ಸುಸ್ಥಿತಿಗೂ ಅನುಕೂಲಗಳನ್ನು ಕಲ್ಪಿಸಬೇಕು. ಧರ್ಮಕ್ಕನುಸಾರವಾದ ಕಾನೂನುಗಳನ್ನು ಜಾರಿಗೆ ತಂದು ಆಡಳಿತವನ್ನು ಕ್ರಮಪಡಿಸಬೇಕು.

ಉತ್ತಮವಾದ ರಾಜನೀತಿಯಿಂದ ನಡೆದು ಜಿತರಾಜ್ಯದ ಪ್ರಜೆಗಳಿಂದ ಪ್ರೀತಿಸಂಪಾದನೆ ಮಾಡಬೇಕು. ಹೀಗೆ ನಡೆಯದೆ ತಾನು ಮಾಡಿಕೊಂಡಿದ್ದ ಕರಾರನ್ನು ಮುರಿದು ಪ್ರಜೆಗಳನ್ನು ದಂಡಿಸಿದರೆ, ಆ ದೇಶದ ಪ್ರಜೆಗಳೂ ಎದುರು ಬೀಳಬಹುದು. ಪೇಶೋನ್ನತಿಯಲ್ಲೇ ನಿರತರಾದ ತನ್ನ ಮಂತ್ರಿಗಳು ತನ್ನನ್ನು ಸಿಂಹಾಸನಚ್ಯುತನನ್ನಾಗಿ ಮಾಡಬಹುದು.

೫. ಆಡಳಿತಕ್ರಮ

ರಾಜನು ಸಮಸ್ತ ರಾಜಕಾರ್ಯಗಳನ್ನು ವಿಭಾಗಿಸಿ ಒಂದೊಂದು ಕಾರ್ಯಕ್ಕೆ ಒಬ್ಬೊಬ್ಬ ಅಮಾತ್ಯನನ್ನು ನೇಮಿಸ ಬೇಕು. ಅರ್ಥಶಾಸ್ತ್ರದಲ್ಲಿ ಹದಿನೆಂಟು ಅಮಾತ್ಯರ ಒಂದು ಪಟ್ಟಿ ಇದೆ. ಇದರಿಂದ ಆಡಳಿತವನ್ನು ಹದಿನೆಂಟು ಶಾಖೆಗಳಾಗಿ ವಿಭಾಗಿಸಿದ್ದರೆಂಬುದು ವ್ಯಕ್ತವಾಗುತ್ತದೆ. ಪ್ರತಿಯೊಬ್ಬನೂ ತನ್ನ ತನ್ನ ಶಾಖೆಯ ಕಾರ್ಯಗಳನ್ನು ಸ್ವತಂತ್ರವಾಗಿ ನಡೆಸುತ್ತ ಸಮಸ್ತ ರಾಜಕಾರ್ಯಗಳಲ್ಲೂ ರಾಜನಿಗೆ ಮಂತ್ರಾ ಲೋಚನೆಯನ್ನು ಹೇಳುತ್ತಿದ್ದನು.

ಧರ್ಮಾಧರ್ಮವನ್ನು ತಿಳಿಸುವುದೂ ಯಜ್ಞಯಾಗಾದಿ ಗಳನ್ನು ಮಾಡಿಸುವುದೂ ಮಂತ್ರ ಪೂಜೆಗಳಿಂದ ಪ್ರಜೆಗಳನ್ನು ಕ್ಷಾಮಾದಿ ಉಪದ್ರವಗಳಿಂದ ಪಾರುಮಾಡಿಸುವುದೂ ಪುರೋ ಹಿತನ ಕೆಲಸ. ಮುಖ್ಯಮಂತ್ರಿಗೆ ಪ್ರತಿನಿಧಿಯೆಂದು ಹೆಸರು. ಅವನಿಗೆ ಆಡಳಿತದ ಸಕಲಶಾಖೆಗಳ ಮೇಲೂ ಪೂರ್ಣ ಅಧಿ ಕಾರವಿತ್ತು. ಸೈನ್ಯಶಾಖೆಗೆ ಸೇನಾಪತಿ ಮುಖ್ಯನು. ರಾಜನ ಗೃಹಕೃತ್ಯ ಮತ್ತು ಅಂತರಂಗ ಕಾರ್ಯಗಳನ್ನೂ ಅಂತಃಪುರ

ವಾಸಿಗಳ ನಿತ್ಯಜೀವನದ ಮೇಲ್ವಿಚಾರಣೆಯನ್ನು ದೌವಾರಿಕ ತ್ತು ಅಂತರ್ವಂಶಿಕ ಎಂಬ ಅಧಿಕಾರಿಗಳು ನಿರ್ವಹಿಸು ದ್ದರು.

ಕೋಶ, ಕುಪ್ಯ, ಕೋಷ್ಠ, ಆಯುಧ ಮತ್ತು ಬಂಧನ ಲೆಗಳಿಗಾಗಿ ಕಟ್ಟಡಗಳನ್ನು ಕಟ್ಟಿಸುವುದು ಮತ್ತು ಮುಕ್ತ, ಯುಕ್ತ ಮತ್ತು ತತ್ಪುರುಷರೇ ಮೊದಲಾದ ನೌಕರರ ಮೇಲ್ವಿಚಾರಣೆ ನೋಡುವುದು ಸನ್ನಿಧಾತನ ಕೆಲಸ. ಭೂಮಿಯ ಅಳತೆ, ಸರ್ಕಾರಕ್ಕೆ ಸಲ್ಲತಕ್ಕ ನಾನಾಬಗೆಯ ಕರ ಗಳನ್ನು ನೇರವಾಗಿ ತಾನೇ ಅಥವಾ ಇತರ ಶಾಖಾಧಿಕಾರಿಗಳ ಮೂಲಕ ವಸೂಲುಮಾಡುವುದೂ ಜಮಾಖರ್ಚುಗಳನ್ನು ಪರಿಶೀಲಿಸುವುದೂ ಸಮಾಹರ್ತನ ಕೆಲಸ. ಕಂಟಕಶೋಧನ ಮತ್ತು ನ್ಯಾಯಾನ್ಯಾಯಗಳ ಪರಿಶೀಲನಕಾರ್ಯವೂ ಅವ ನಿಗೇ ಸೇರಿದ್ದುವು. ಕೋಶ, ಪೌತವ, ಮಾನ, ಕೋಷ್ಠ, ಕುಪ್ಯ, ಆಯುಧ, ಬಂಧನಶಾಲೆಗಳ ಅಧ್ಯಕ್ಷರೆಲ್ಲರೂ ಇವನ ಅಧೀನರು. ಖನಿ, ಸೇತು ವನಗಳಿಂದ ಸುಂಕ ವಸೂಲಿಯು ಶುಲ್ಕಾಧ್ಯಕ್ಷನಿಗೆ ಸೇರಿದ್ದಿತು. ಲೋಹ, ನಾಣ್ಯ, ಆಭರಣ ಮತ್ತು ಹವಳಾದಿಗಳ ಮಾರಾಟದ ಮೇಲ್ವಿಚಾರಣೆಯು ಲೋಹ, ಲಕ್ಷಣ, ಸುವರ್ಣ, ಖನ್ಯಧ್ಯಕ್ಷರುಗಳಿಂದ ನೋಡ ಲ್ಪಡುತ್ತಿದ್ದಿತು. ಒಕ್ಕಲತನ, ಪಶುಪಕ್ಷಿಗಳ ರಕ್ಷಣೆ, ಪುಂಡ ರನ್ನು ಹತೋಟಿಯಲ್ಲಿಡುವುದು, ಯಾತ್ರಿಕರಿಗೆ ಮತ್ತು ಅನ್ಯ ದೇಶೀಯರಿಗೆ ಪರವಾನಗಿಗಳನ್ನು ಕೊಡುವುದು, ಸೇಂದಿಶಾಲೆ ಗಳ ಮೇಲ್ವಿಚಾರಣೆ ಇವುಗಳಿಗೆ ಸಂಬಂಧಪಟ್ಟ ಅಧಿಕಾರವನ್ನು ಸೀತಾಧ್ಯಕ್ಷ, ಸೂನಾಧ್ಯಕ್ಷ, ಮುದ್ರಾಧ್ಯಕ್ಷ ಮತ್ತು ಸೂತ್ರಾ ಧ್ಯಕ್ಷರು ನಿರ್ವಹಿಸುತ್ತಿದ್ದರು. ಕಾಲುದಳ, ಗೋವು, ಅಶ್ವ,

ಹಸ್ತಿ, ರಥ ಮತ್ತು ನಾವೆ ಮುಂತಾದ ಶಾಖೆಗಳ ಅಧಿಕಾರವು ಪತ್ತ್ಯಧ್ಯಕ್ಷ, ವಿವೀತಾಧ್ಯಕ್ಷ, ಹಸ್ತ್ಯಧ್ಯಕ್ಷ, ನಾಗವನಾಧ್ಯಕ್ಷ, ರಥಾಧ್ಯಕ್ಷ ಮತ್ತು ನಾವಾಧ್ಯಕ್ಷ ಇವರುಗಳ ಕೈಲಿದ್ದಿತು.

ಪ್ರತಿ ಅಧ್ಯಕ್ಷನ ಜವಾಬ್ದಾರಿಯೂ ಬಹಳವಾಗಿದ್ದುದರಿಂದ ಆಯಾ ಸ್ಥಾನಕ್ಕೆ ಯೋಗ್ಯರಾದವರನ್ನೇ ಹುಡುಕಿ ನೇಮಿಸ ಬೇಕಾಗಿದ್ದಿತು. ಅನೇಕ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರು ಮಾತ್ರ ಆಯಾ ಸ್ಥಾನಕ್ಕೆ ಯೋಗ್ಯರು. ರಾಜನು ಪುರೋಹಿತ ಮತ್ತು ಮುಖ್ಯಮಂತ್ರಿಗಳ ಸಲಹೆಗಳ ಮೂಲಕ ಧರ್ಮೋಪಧ, ಅರ್ಥೋಪಧ, ಕಾಮೋಪಧ ಮತ್ತು ಭಯೋಪಧಗಳೆಂಬ ನಾಲ್ಕು ಪರೀಕ್ಷೆಗಳನ್ನು ನಡೆಯಿಸಿ ಉತ್ತೀರ್ಣರಾದವರನ್ನು ಅವರವರ ಯೋಗ್ಯತಾನುಸಾರ ಆಯಾ ಶಾಖೆಗಳಿಗೆ ನೇಮಿಸು ತ್ತಿದ್ದನು. ಅಮಾತ್ಯನಾಗುವವನು ರಾಜ್ಯನಿವಾಸಿಯಾಗಿ ಸತ್ಕುಲಪ್ರಸೂತನಾಗಿಯೂ ಸಮರ್ಥನಾಗಿಯೂ ಇರಬೇಕಾಗಿ ದ್ದಿತು. ಕಲೆಯಲ್ಲಿ ನಿಪುಣನೂ ದೂರದೃಷ್ಟಿಯುಳ್ಳವನೂ ಆಗಿ ಸತ್ಯಸಂಯುಕ್ತನಾಗಿಯೂ ನಿರ್ಭಯನಾಗಿಯೂ ಸಾಧು ವಾಗಿಯೂ ಇರಬೇಕಾಗಿದ್ದಿತು.

ಮೌರ್ಯಸಮ್ರಾಟನ ರಾಜಧಾನಿಯೂ ಕೌಟಿಲ್ಯನ ನಿವಾಸ ಸ್ಥಾನವೂ ಆದ ಪಾಟಲೀಪುತ್ರವು ಭರತಖಂಡದಲ್ಲೆಲ್ಲಾ ಅತಿ ಮುಖ್ಯವಾದ ನಗರವಾಗಿದ್ದಿತು. ನಗರದ ರಕ್ಷಣೆಗಾಗಿ ಆಡಳಿತ ವನ್ನು ಅನೇಕ ಭಾಗಗಳಾಗಿ ವಿಭಾಗಿಸಿದ್ದರು. ಪ್ರತಿಯೊಂದು ಭಾಗಕ್ಕೂ ಒಬ್ಬೊಬ್ಬ ಅಧ್ಯಕ್ಷನಿದ್ದು ತನ್ನ ಶಾಖೆಯ ಕಾರ್ಯ ವನ್ನು ದಕ್ಷತೆಯಿಂದ ನಿರ್ವಹಿಸುತ್ತಿದ್ದನು. ಅವರಲ್ಲಿ ಪ್ರದೇಷ್ಟಾ, ಪೌರವ, ವ್ಯವಹಾರಿಕ, ದಂಡಪಾಲ, ಸುರಾಧ್ಯಕ್ಷ ಮತ್ತು ಗಣಿಕಾಧ್ಯಕ್ಷರು ಮುಖ್ಯರಾದವರು.

ರಾಜಾದಾಯ—ರಾಜಾದಾಯವು ಅನೇಕ ವಿಧವಾಗಿದ್ದಿತು. ದೇಶವನ್ನು ಕರವಸೂಲಿಗೆ ಅನುಕೂಲವಾಗುವಂತೆ ಐದು ವಿಧವಾಗಿ ವಿಂಗಡಿಸಿದ್ದರು. ಕರವನ್ನು ಕೊಡದೆ ಇರತಕ್ಕ ಗ್ರಾಮಗಳು ಪರಿಹಾರಿಕಗಳು. ತೆರಿಗೆಗೆ ಬದಲಾಗಿ ಸೈನಿಕರನ್ನು ಒದಗಿಸುತ್ತಿದ್ದ ಭಾಗ ಆಯುಧೀಯ. ಇವಲ್ಲದೆ ತೆರಿಗೆಯನ್ನು ಹಿರಣ್ಯರೂಪವಾಗಿಯೋ ಅಥವಾ ದವಸ ಧಾನ್ಯದ ರೂಪವಾಗಿಯೋ ಒಪ್ಪಿಸುತ್ತಿದ್ದ ಭಾಗಗಳೂ ಇದ್ದವು. ಭೂ ಆದಾಯವಲ್ಲದೆ ಬಲಿ, ಕರ, ವಣಿಕ, ನದಿ ಮತ್ತು ಪಟ್ಟಣಗಳಿಂದಲೂ ರಾಷ್ಟ್ರಾದಾಯವು ಬರುತ್ತಿದ್ದಿತು. ಇತರ ರಾಜಾದಾಯವು ನವರತ್ನಗಳು, ಲೋಹ, ಉಪ್ಪು ಮೊದಲಾದುವುಗಳ ವ್ಯಾಪಾರದಿಂದ; ಹೂವು, ಹಣ್ಣು, ತರಕಾರಿ, ಕಬ್ಬು ಮುಂತಾದುವುಗಳ ವ್ಯಾಪಾರದಿಂದ ; ಅರಣ್ಯದಲ್ಲಿ ಬೆಳೆದ ವನಸ್ಪತಿಗಳು ಮತ್ತು ಮೃಗಪಕ್ಷಿಗಳ ಮಾರಾಟದಿಂದ ; ಕುದುರೆ, ಒಂಟೆ, ಕುರಿ, ಆಡು ಮೊದಲಾದ ಸಾಕಿದ ಪ್ರಾಣಿಗಳ ಮಾರಾಟದಿಂದ ; ಮತ್ತು ಭೂ ಜಲಮಾರ್ಗಗಳ ಮೇಲಿನ ಸುಂಕದಿಂದ ಬರುತ್ತಿದ್ದಿತು. ಅರ್ಥಶಾಸ್ತ್ರದಲ್ಲಿ ಇವುಗಳಲ್ಲದೆ ಇನ್ನೂ ಅನೇಕ ರೀತಿಯ ಆದಾಯಗಳು ವಿವರಿಸಲ್ಪಟ್ಟಿವೆ. ಸುರಾ, ಸೂನಾ, ಸೂತ್ರ, ತೈಲ, ಕ್ಷಾರ ಮತ್ತು ಆಕ್ರಾಯಿಗಳಿಂದ ಬಂದ ಸುಂಕಗಳು, ಅಪರಾಧಿಗಳಿಂದ ಬರುತ್ತಿದ್ದ ದಂಡ, ಆದಾಯ ಮತ್ತು ನಿಧಿಗಳ ಮೇಲಿನ ತೆರಿಗೆಗಳು ಇವುಗಳೂ ರಾಜಾದಾಯದಲ್ಲಿ ಸೇರಿದ್ದವು.

ಮೇಲೆ ಹೇಳಿದ ಆದಾಯಗಳು ಕಾಲಕಾಲಕ್ಕೆ ವಸೂಲಾಗುವಂತೆ ನೋಡಿಕೊಳ್ಳುವುದಕ್ಕೂ ಅವುಗಳ ಲೆಕ್ಕವನ್ನು ಸರಿಯಾಗಿಡುವುದಕ್ಕೂ ಅನೇಕ ರೀತಿಯಾದ ಅಧಿಕಾರಿಗಳಿದ್ದರು. ರಾಜ್ಯದ ಆದಾಯ ವೆಚ್ಚಗಳ ಮುಖ್ಯ ಅಧಿಕಾರಿ ಸಮಾಹರ್ತ.

ಇವನ ಕೈಕೆಳಗೆ ದ್ರೋಣಮುಖಕ್ಕೆ ಪ್ರದೇಷ್ಟನೂ, ಖಾರ್ವಟಿಕಕ್ಕೆ ಸ್ಥಾನಿಕನೂ, ಸಂಗ್ರಹಣಕ್ಕೆ ಗೋಪನೂ, ಗ್ರಾಮಕ್ಕೆ ಗ್ರಾಮಣಿಯೂ, ಅಧಿಕಾರಿಗಳು. ಗ್ರಾಮಸಂಸ್ಥೆಯು ರಾಜಕೀಯಕ್ಕೆ ನೆಲಕಟ್ಟಾಗಿದ್ದಿತು. ಭೂಮಿಯನ್ನು ಅಳತೆಮಾಡುವುದೂ ತರೀ ಕುಷ್ಕಿ ಭೂಮಿಗಳನ್ನು ಗೊತ್ತುಪಡಿಸುವುದೂ ಮನೆ, ಚಾವಡಿ ಮತ್ತು ದೇವಾಲಯಗಳನ್ನು ಕಟ್ಟುವ ರೀತಿಯನ್ನು ತಿಳಿಸಿ ಅವುಗಳ ಲೆಕ್ಕಪತ್ರವನ್ನು ಇಡುವುದೂ ಗ್ರಾಮಣಿಯ ಕೆಲಸ; ವರ್ತಕಶ್ರೇಣಿ, ಪಂಚಾಯಿತಿ ಸಭೆ, ವೃದ್ಧಮಂಡಲಿಗಳ ಸಹಾಯದಿಂದ ತಮಗೆ ಸೇರಿದ ಪ್ರದೇಶಗಳ ಸಾಮಾಜಿಕ, ಆರ್ಥಿಕ ಮತ್ತು ಬಡಬಗ್ಗರ ಸಮಸ್ಯೆಗಳನ್ನು ಪರಿಹರಿಸುವುದು, ಜನನಮರಣಗಳ ಲೆಕ್ಕವನ್ನಿಡುವುದು—ಈ ಕೆಲಸಗಳು ಇತರ ಅಧಿಕಾರಿಗಳಿಗೆ ಸೇರಿದ್ದುವು. ಅಡವು, ವಿಕ್ರಯ, ಕುಟುಂಬಗಳ ಆಯವ್ಯಯದ ಪಟ್ಟಿ ಮತ್ತು ಇತರ ಲೆಕ್ಕಪತ್ರಗಳನ್ನಿಡುವುದಕ್ಕಾಗಿ ಗಣನಿಕ, ಸಂಖ್ಯಾಯಿಕ, ರೂಪದರ್ಶಕ, ಮೊದಲಾದ ಅಧಿಕಾರಿಗಳು ಸನ್ನಿಧಾತನ ಕೈಕೆಳಗೆ ಕೆಲಸಮಾಡುತ್ತಿದ್ದರು. ಪ್ರತಿ ಅಧಿಕಾರಿಯೂ ತನ್ನ ಲೆಕ್ಕಪತ್ರಗಳನ್ನು ಆಷಾಢಮಾಸದೊಳಗೆ ಸರ್ಕಾರಕ್ಕೆ ಒಪ್ಪಿಸಬೇಕಾಗಿದ್ದಿತು.

ನ್ಯಾಯಾಡಳಿತ—ಧರ್ಮಪರಿಪಾಲನೆ ರಾಷ್ಟ್ರದ ಒಂದು ಮುಖ್ಯ ಧ್ಯೇಯವಾದುದರಿಂದ ಧರ್ಮಕ್ಕೆ ಸಂಬಂಧಪಟ್ಟ ನಡತೆ ಮತ್ತು ಪದ್ಧತಿಗಳನ್ನು ಬಹಳ ದಕ್ಷತೆಯಿಂದ ಕಾಪಾಡಬೇಕಾಗಿದ್ದಿತು. ದೇಶದಲ್ಲಿ ಶಾಂತಿ ಸೌಹಾರ್ದಗಳನ್ನೇರ್ಪಡಿಸಲು ದುಷ್ಟರನ್ನು ಅಡಗಿಸಿ ನ್ಯಾಯವಾದ ವಿಷಯಗಳಿಗೆ ಉತ್ತೇಜನಕೊಡಬೇಕಾಗಿದ್ದಿತು. ಈ ಕೆಲಸವನ್ನು ನಡೆಸುವ

ದೆಂದರೆ, ಅಪರಾಧವು ಯಾವದು ಮತ್ತು ಅಪರಾಧಿ ಯಾರು ಎಂಬುದರ ನಿರ್ದೇಶ ಅತಿ ಮುಖ್ಯ. ಇವುಗಳ ನಿರ್ಣಯಕ್ಕಾಗಿ ನ್ಯಾಯಾಂಗವು ಸಂಗ್ರಹಣ, ದ್ರೋಣಮುಖ ಮತ್ತು ಸ್ಥಾನೀಯವೇ ಮೊದಲಾದ ಮುಖ್ಯ ಸ್ಥಳಗಳಲ್ಲಿ ನ್ಯಾಯಾಸ್ಥಾನಗಳೂ ಇದ್ದವು. ಕುಲ, ಶ್ರೇಣಿ, ಗಣಗಳೂ ಸಹ ಪಂಚಾಯಿತಿಗಳನ್ನು ಏರ್ಪಡಿಸಿಕೊಂಡಿದ್ದವು. ನ್ಯಾಯಾಂಗವು ಸಮರ್ಥಕವಾಗಿ ಕೆಲಸಮಾಡುತ್ತಿದ್ದಿತೆಂಬುದಕ್ಕೆ ಬೇಕಾದ ಹಾಗೆ ಆಧಾರಗಳಿವೆ.

ಸಾಲ, ಮಾನಭಂಗ, ಹೊಡೆದಾಟ, ದಾಯವಿಭಾಗ ಮುಂತಾದ ವ್ಯವಹಾರಗಳ ತೀರ್ಮಾನಕ್ಕಾಗಿ 'ಧರ್ಮಸ್ಥೀಯ' ಎಂಬ ನ್ಯಾಯಾಸ್ಥಾನಗಳಿದ್ದವು. ಅಧಿಕಾರಿಗಳ ಅಪರಾಧ, ದ್ರೋಹ, ಕಳವು ಮತ್ತು ಉಪನಿಪಾತ ಮೊದಲಾದ ಅಪರಾಧಗಳನ್ನು ಗೊತ್ತುಮಾಡಿ ನಿರ್ಣಯಿಸಿ ಶಿಕ್ಷೆ ವಿಧಿಸುವುದು ಮತ್ತು ಶಾಸನಗಳ ಅರ್ಥವಿವರಣೆ ಮತ್ತು ಅನ್ವಯ — ಇವೆಲ್ಲವೂ ಕಂಟಕಶೋಧನ ಸಭೆಗಳ ಕೆಲಸ. ನ್ಯಾಯ ವಿಚಾರಗಳಲ್ಲಿ ಪಾಂಡಿತ್ಯವನ್ನು ಹೊಂದಿದ್ದ ಅಮಾತ್ಯರು ನ್ಯಾಯ ಕೆಲಸಗಳನ್ನು ನೋಡಿಕೊಳ್ಳುತ್ತಿದ್ದರು. ರಾಜನಾಗಲೀ ಧರ್ಮಾಧಿಕಾರಿಯಾಗಲೀ ಕೌಟಿಲ್ಯನ ಕಾಲದಲ್ಲಿ ನ್ಯಾಯಸ್ಥಾನದ ಕೆಲಸಗಳನ್ನು ನೆರವೇರಿಸುತ್ತಿರಲಿಲ್ಲ.

ಪೂರ್ವಪಕ್ಷ, ಪ್ರತಿಪಕ್ಷ ಮತ್ತು ಕ್ರಿಯಾನಿರ್ಣಯ ಇವು ಮುಖ್ಯವಾದ ನ್ಯಾಯಕ್ರಮ. ನ್ಯಾಯಸಭೆಯಲ್ಲಿ ತೃಪ್ತಿಕರವಾದ ತೀರ್ಪು ದೊರೆಯದಿದ್ದರೆ ಕಕ್ಷಿ ಪ್ರತಿ ಕಕ್ಷಿಗಳು ಪಂಡಿತರಿಂದ ಕೂಡಿದ ರಾಜಪ್ರಣಿಧಿ ಸಭೆಗೆ ಪುನರ್ವಿಮರ್ಶೆಗಾಗಿ ಹೋಗಬಹುದಾಗಿತ್ತು. ಈ ಸಭೆಗೆ ಪ್ರಾಡ್ವಿವಾಕನೇ ಮುಖ್ಯ ನ್ಯಾಯಾಧೀಶನು.

ವ್ಯವಹಾರಕ್ಕೆ ಸಂಬಂಧಪಟ್ಟ ವಿವಾದಗಳೆಲ್ಲವನ್ನೂ ಸ್ಥಳದ ಪ್ರಮುಖರು ನಿರ್ಧರಿಸುತ್ತಿದ್ದರು. ಭೂಮಿಗೆ ಸಂಬಂಧಪಟ್ಟ ವ್ಯವಹಾರಗಳೆಲ್ಲವೂ ಈ ಪ್ರಮುಖರ ಸಮ್ಮುಖದಲ್ಲಿ ಬಹಿರಂಗ ವಾಗಿ ನಡೆಯಬೇಕಾಗಿದ್ದಿತು. ಭೂಸಂಬಂಧವಾದ ವ್ಯವಹಾರ ಗಳು ಬಹಳವಾಗಿರಲಿಲ್ಲ. ಕಂದಾಯವನ್ನು ಕೊಡುತ್ತಿದ್ದ ಭೂಮಿಯನ್ನು ಕಂದಾಯವನ್ನು ಕೊಡಬೇಕಾಗಿದ್ದ ಜನರಿಗೆ, ಬ್ರಹ್ಮಾದಾಯ ಭೂಮಿಗಳನ್ನು ಅಂತಹ ಹಕ್ಕುಳ್ಳವರಿಗೇ ಮಾರಬೇಕಾಗಿದ್ದಿತು. ಇದರಿಂದ ರಾಜಾದಾಯವೇನೂ ಕಡಿಮೆ ಯಾಗುತ್ತಿರಲಿಲ್ಲ; ಆದರೆ ಹೆಚ್ಚು ವ್ಯವಹಾರಕ್ಕೆ ಮಾರ್ಗವಿರ ಲಿಲ್ಲ. ಈ ಕಾನೂನು ಎಷ್ಟು ಮಟ್ಟಿಗೆ ಗಡುಸಾಗಿತ್ತೆಂದರೆ, ಕಂದಾಯವನ್ನು ಕೊಡುತ್ತಿದ್ದ ಗ್ರಾಮವಾಸಿಯು ಕಂದಾಯ ವಿಲ್ಲದ ಭೂಮಿಗೆ ವಾಸಮಾಡಲು ಹೋದರೆ ಶಿಕ್ಷೆಗೆ ಗುರಿಯಾ ಗುತ್ತಿದ್ದನು.

ಭೋಗ್ಯಸ್ವತ್ತುಗಳ ಮೇಲೆ ಶೇ. ೧೫ಕ್ಕೆ ಜಾಸ್ತಿಯಾಗಿ ಬಡ್ಡಿಯನ್ನು ವಸೂಲು ಮಾಡುವಂತಿರಲಿಲ್ಲ. ಹತ್ತು ವರ್ಷ ಗಳಾದಮೇಲೆ ಕೊಟ್ಟ ಸಾಲವನ್ನು ಹಿಂದಕ್ಕೆ ಕೇಳಲು ಹಕ್ಕಿರ ಲಿಲ್ಲ. ತಂದೆ ತಾಯಿಯರು, ದಂಪತಿಗಳು ಮತ್ತು ಮಕ್ಕಳ ಮೇಲೆ ಋಣವ್ಯಾಜ್ಯವನ್ನು ಹೂಡುವುದಕ್ಕೆ ಅವಕಾಶವಿರಲಿಲ್ಲ; ಭೂಮಿಯು ಹತ್ತು ವರ್ಷಕಾಲ ಅನುಭವಕ್ಕೆ ಬಂದಮೇಲೆ ಅನುಭವದಾರನಿಗೆ ಭೂಸ್ವಾಮ್ಯದ ಹಕ್ಕು ದೊರೆಯುತ್ತಿತ್ತು.

ಕಂಟಕಶೋಧನೆಯು ಸಮರ್ಪಕವಾಗಿ ನಡೆಯುತ್ತಿದ್ದಿತು. ಕೃತ್ಯ ನಡೆದ ಮೂರು ದಿನಗಳು ಕಳೆದನಂತರ "ಗುಮಾನಿ" ಇದ್ದರೂ ಶಂಕಿತನನ್ನು ಹಿಡಿದು ಶಿಕ್ಷಿಸುವುದಕ್ಕೆ ನ್ಯಾಯದನು ಮತಿ ಇರಲಿಲ್ಲ. ಬಲವಾದ ಮತ್ತು ನಂಬಲರ್ಹವಾದ ಕಾರಣ

ಗಳು ಸಿಕ್ಕಿ ಶಂಕಿತನು ತಪ್ಪಿತಸ್ಥನೆಂದು ಧೃಢೀಕರಿಸಲ್ಪಟ್ಟ ಮೇಲೆ ಮಾತ್ರ ದಂಡ ವಿಧಿಸಬಹುದಾಗಿದ್ದಿತು. ಮುದುಕರನ್ನೂ, ರೋಗಗ್ರಸ್ತರನ್ನೂ, ಹಸಿವು, ಬಾಯಾರಿಕೆಗಳಿಂದ ಬಳಲಿದವರನ್ನೂ, ಆತ್ಮಕಾಸಿತರನ್ನೂ, ಅಪರಾಧಿಗಳಾಗಿದ್ದರೂ ಅವರನ್ನು ಶಿಕ್ಷಿಸಕೂಡದು. ಬ್ರಾಹ್ಮಣರಿಗೂ ವೇದಾಂತಿಗಳಿಗೂ ದೇಹದಂಡನೆಯ ಶಿಕ್ಷೆ ಇರಲಿಲ್ಲ. ಆದರೆ ಬ್ರಾಹ್ಮಣ ಅಪರಾಧಿಯ ಮುಖದ ಮೇಲೆ ಅವನ ತಪ್ಪನ್ನು ತೋರಿಸುವುದಕ್ಕಾಗಿ ಬರೆಹಾಕಿ ಗ್ರಾಮದ ಜನರೆದುರಿಗೆ ಆತನ ತಪ್ಪನ್ನು ಪ್ರಕಟಿಸಿ ಅವನನ್ನು ದೇಶಭ್ರಷ್ಟನನ್ನಾಗಿ ಮಾಡುವುದು ವಾಡಿಕೆಯಾಗಿತ್ತು.

೬. ಸಾಮಾಜಿಕ ಜೀವನ ವ್ಯವಸ್ಥೆ

ಕೌಟಿಲ್ಯನ ಕಾಲದಲ್ಲಿ ಜನಜೀವನವು ಸುವ್ಯವಸ್ಥಿತವಾಗಿದ್ದಿತು. ಜೀವನದ ವಿಕಾಸಕ್ಕೂ ಸಮುದಾಯ ಜೀವನದ ಅನ್ಯೋನ್ಯತೆಗೂ ಸೌಭಾಗ್ಯಕ್ಕೂ ಆ ಕಾಲದಲ್ಲಿ ಶ್ರೇಣಿ ಅಥವಾ ನಿಗಮ ಸಭೆಗಳೇ ಕಾರಣ. ಶ್ರೇಣಿಗಳು ಪಟ್ಟಣದ ನೈರ್ಮಲ್ಯ, ರಕ್ಷಣೆ, ನ್ಯಾಯಪಾಲನೆ, ಜಲವಸತಿ, ದಾನಧರ್ಮ ಮುಂತಾದ ಸಾರ್ವಜನಿಕ ಕೆಲಸಗಳನ್ನು ನೆರವೇರಿಸುತ್ತಿದ್ದವು. ಆ ಕಾಲದ ನಗರವಾಸಿಗಳ ಸೌಶೀಲ್ಯಾದಿ ಗುಣಗಳನ್ನೂ, ವೈಶಿಷ್ಟ್ಯವನ್ನೂ, ಸಂಸ್ಕೃತಿಯ ಮಟ್ಟವನ್ನೂ ಇಲ್ಲಿ ಹೆಚ್ಚು ವಿವರಿಸಲು ಸಾಧ್ಯವಿಲ್ಲ. ಮುಖ್ಯವಾಗಿ ಆ ಕಾಲದ ನಗರನಿರ್ಮಾಣಕ್ರಮ, ಸಾಮಾಜಿಕ ಜೀವನ, ಬೇರೆ ಬೇರೆ ಕಸಬಿನವರ ಮೇಲಿನ ಹತೋಟಿ ಮತ್ತು ಸಮಾಜದಲ್ಲಿ ಸ್ತ್ರೀಯರಿಗಿದ್ದ ಸ್ಥಾನಮಾನಗಳ ವಿಚಾರವಾಗಿ ಒಂದೆರಡು ಮಾತುಗಳನ್ನು ಮಾತ್ರ ಹೇಳಲಾಗಿದೆ.

ಕೌಟಿಲ್ಯನ ಕಾಲದಲ್ಲಿ ರಾಜಧಾನಿ, ನಗರ, ಪುರ, ಖೇಡ, ಖರ್ವಟ, ಕುಬ್ಜಕ, ಪಟ್ಟಣವೆಂದು ಏಳು ವಿಧವಾದ ನಗರಗಳೂ, ದಂಡಕ, ಸರ್ವತೋಭದ್ರ, ನಂದ್ಯಾವರ್ತ, ಪದ್ಮಕ, ಸ್ವಸ್ತಿಕ, ಪ್ರಸ್ತರ, ಕಾರ್ಮುಕ, ಚತುರ್ಮುಖ ಎಂಬ ಕೋಲು, ಕಮಲ ಮತ್ತು ಬಿಲ್ಲಿನಾಕಾರಗಳಾದ ಎಂಟು ವಿಧ ಗ್ರಾಮಗಳೂ ಇದ್ದುವು. ಗ್ರಾಮ ಮತ್ತು ನಗರ ರಚನೆ ವಿಹಿತವಾಗಿಯೂ ಸಂರಕ್ಷಣೆಗೆ ಅನುಕೂಲವಾಗಿಯೂ ವ್ಯವಸ್ಥಿತವಾಗಿರಬೇಕಾಗಿತ್ತು. ಮಾರ್ಗಗಳ ಉದ್ದಳತೆ ಎಷ್ಟಿರಬೇಕು, ಮುಖ್ಯ ಭಾಗಗಳಲ್ಲಿ ಯಾವ ಪ್ರಕಾರವಾದ ಜನವಸತಿಯಿರಬೇಕು, ಮನೆಗೆ ಅಂತರವೆಷ್ಟಿರಬೇಕು, ಕಿಟಕಿಗಳು ಎಷ್ಟು ಎತ್ತರವಿರಬೇಕು ಮುಂತಾದ ವಿಷಯಗಳನ್ನು ಅರ್ಥಶಾಸ್ತ್ರದಲ್ಲಿ ತಿಳಿಸಿದೆ.

ನಗರಸ್ಥಾಪನೆಗೆ ಮುಂಚೆ, ನಗರರಚನೆ, ಶಿಲ್ಪಶಾಸ್ತ್ರ ಮತ್ತು ಚಿತ್ರಕಲೆಯಲ್ಲಿ ಪ್ರವೀಣರಾದ 'ಸ್ಥಪತಿ', ಸೂತ್ರಗ್ರಾಹಿ, ಮತ್ತು ವರ್ಧಕಿ ಮುಂತಾದ ಅಧಿಕಾರಿಗಳು ವಿಹಿತವಾದ ಸ್ಥಳವನ್ನು ಗೊತ್ತು ಮಾಡಿ, ಛಾಯಾಯಂತ್ರದಿಂದ ಮುಖ್ಯ ದಿಕ್ಕುಗಳನ್ನು ವಿಂಗಡಿಸಿ, ಯಾಂತ್ರಿಕ ಚೌಕೋನಕ್ಕನುಸಾರವಾಗಿ ಮಾರ್ಗ, ಬೀದಿ, ಮತ್ತು ಕಟ್ಟಡಗಳನ್ನು ಕಟ್ಟುತ್ತಿದ್ದರು. ಶಿಲ್ಪಶಾಸ್ತ್ರಾನುಸಾರವಾಗಿ ನಗರವು ಚಕ್ರಾಕಾರವಾಗಿದ್ದು ಸುತ್ತಲೂ ಬಲವಾದ ಕೋಟೆಕಂದುಕಗಳಿಂದ ಅಲಂಕೃತವಾಗಿರುತ್ತಿತ್ತು. ಕೋಟೆಯ ಮಹಾದ್ವಾರಗಳ ಮತ್ತು ಗೋಡೆಗಳ ಭದ್ರವಾದ ರಚನೆಯನ್ನೂ, ವಿಸ್ತಾರವಾದ ಕೋಟೆಗಳ ಮಧ್ಯದಲ್ಲಿರುವ ತೋಟವನ್ನೂ, ಕಮಲಸರೋವರಗಳನ್ನೂ, ವಾಸದ ಮನೆಗಳನ್ನೂ, ಕುಮಾರಿದೇವತಾ ಗೃಹವನ್ನೂ, ಕೋಟೆಯಲ್ಲಿ ನಿರಂತರವಾಗಿದ್ದ ಕಾವಲಿನ ಶಿಸ್ತನ್ನೂ ಕೌಟಿ

ಲ್ಯನು ವಿವರಿಸಿದ್ದಾನೆ. ಅರಮನೆ ಸುತ್ತಲೂ ಕೋಟೆಯಿರು ತ್ತಿತ್ತು. ರಾಜಧಾನಿಯ ಮಧ್ಯದಲ್ಲಿ ಅರಮನೆ ಮತ್ತು ಕಚೇರಿ ಗಳನ್ನು ಕಟ್ಟುತ್ತಿದ್ದರು. ರಾಜಮಾರ್ಗವೂ ಮತ್ತು ದ್ರೋಣ ಮುಖ, ಸ್ಥಾನೀಯ, ಹುಲ್ಲುಗಾವಲಿಗೆ ಹೋಗುವ ಹೆದ್ದಾರಿ ಗಳೂ ನಾಲ್ಕು ದಂಡ ಅಥವಾ ೨೪ ಅಡಿ ಅಗಲವಾಗಿಯೂ, ಹಳ್ಳಿಗಳಿಗೂ ಸ್ಮಶಾನಕ್ಕೂ, ವ್ಯೂಹಗಳಿಗೂ ಹೋಗುವ ದಾರಿ ಗಳು ೬೪ ಅಡಿ ಅಗಲವಾಗಿಯೂ ಇರುತ್ತಿದ್ದವು. ರಾಜಪಥ, ಮಹಾಕಾಲ, ವಾಮನವೆಂಬ ಹೆಸರಿನ ಬೀದಿಗಳೂ ಸಾಮಾನ್ಯ "ಮಂಗಳವೀಥಿ" ಎಂಬ ಹೆಸರಿನ ಮಾರ್ಗವೂ ಕೋಟೆ ಗೋಡೆಯ ಸುತ್ತ ಒಳಭಾಗದಲ್ಲಿ ಊರನ್ನು ಸುತ್ತಿಕೊಂಡಿದ್ದುವು.

ಪಟ್ಟಣದ ಮಧ್ಯದಲ್ಲಿ ರಾಜನು, ಶತ್ರುಗಳಿಂದಲೂ ರಾಜ ದ್ರೋಹಿಗಳಿಂದಲೂ ಸಹಾಧ್ಯಾಯಿಗಳ ಮೋಸದಿಂದಲೂ ತಪ್ಪಿಸಿಕೊಳ್ಳುವುದಕ್ಕಾಗಿ ದುರ್ಭೇದ್ಯವಾದ ಮತ್ತು ಅನೇಕ ಗುಪ್ತ ಮಾರ್ಗಗಳಿಂದಲೂ ಸುರಂಗಗಳಿಂದಲೂ ಕೂಡಿದ ಅರಮನೆ, ಅಂತಃಪುರ ಮತ್ತು ಮೋಹನಗೃಹವೆಂಬ ತನ್ನ ನಿವಾಸಸ್ಥಾನಗಳನ್ನು ಕಟ್ಟಿಕೊಳ್ಳುತ್ತಿದ್ದನು. ಅರಮನೆಯ ಬೈಲಿನ ನಡುವೆ ರಾಜಸಭಾಗೃಹವಿದ್ದು ಅದರ ಸುತ್ತಲೂ ಮಂತ್ರಿಗಳ ವಾಸದ ಮನೆಗಳೂ, ಯೋಗಶಾಲೆಗಳೂ, ಗೋ, ಅಶ್ವ, ಹಸ್ತಿಗಳ ಶಾಲೆಗಳೂ, ಕೋಶಾಗಾರಗಳೂ ಇರುತ್ತಿದ್ದುವು. ಪಟ್ಟಣದ ಪಶ್ಚಿಮಕ್ಕೆ ರಥ ಮತ್ತು ಒಂಟೆಯ ಶಾಲೆಗಳು, ಶಿಲ್ಪಿಗಳ ಮತ್ತು ಕೂಲಿಗಾರರ ವಸತಿಗಳು; ಉತ್ತರಕ್ಕೆ ಅಂಗಡಿ ಗಳು, ಆಸ್ಪತ್ರೆಗಳು, ಬ್ರಾಹ್ಮಣವಸತಿಗಳು; ಪೂರ್ವದಿಕ್ಕಿನಲ್ಲಿ ಕ್ಷತ್ರಿಯರ, ವರ್ತಕರ, ಪರಿಮಳ ದ್ರವ್ಯವ್ಯಾಪಾರಿಗಳ ಮನೆಗಳು;

ದಕ್ಷಿಣದಲ್ಲಿ ಪಟ್ಟಣಾಧ್ಯಕ್ಷರ, ಸೇನಾನಾಯಕರ, ಸಂಗೀತಗಾರರ, ರೂಪದಾಸಿಯರ ವಸತಿಗಳಿರುತ್ತಿದ್ದವು. ಪಟ್ಟಣದ ಮಧ್ಯಭಾಗದಲ್ಲಿ ಅಪರಾಜಿತ, ಅಪ್ರತಿಹತ, ಜಯಂತ, ವೈಜಯಂತ, ಶಿವ, ವೈಶ್ರವಣ, ಅಶ್ವಿನೀದೇವತೆಗಳ ಪೂಜೆಗಾಗಿ ದೇವಾಲಯಗಳನ್ನು ಕಟ್ಟುತ್ತಿದ್ದರು. ದೇವಮಂದಿರದ ಹತ್ತಿರವೆ ಮದಿರಾದೇವಿಯ ದೇವಾಲಯವಿತ್ತು. ಪಟ್ಟಣದ ನಾಲ್ಕು ಮೂಲೆಗಳಲ್ಲಿಯೂ ಕ್ಷಾತ್ರದೇವತೆಗಳ ಆಲಯಗಳು ಮತ್ತು ಧರ್ಮಶಾಲೆಗಳೂ ಇರುತ್ತಿದ್ದುವು.

ಆಯಾ ವರ್ಣದವರ ಯೋಗ್ಯತೆಯ ಮೇರೆಗೆ ಅವರ ಮನೆಗಳಿಗೆ ಅಂತಸ್ತುಗಳಿರುತ್ತಿದ್ದವು. ಆದಷ್ಟು ಮಟ್ಟಿಗೆ ಒಂದು ಬೀದಿಯ ಮನೆಗಳು ಅಂತಸ್ತುಗಳಲ್ಲಿಯೂ ಎತ್ತರದಲ್ಲಿಯೂ ಸಮಾನವಾಗಿಯೂ, ಮನೆಗಳ ಹಿತ್ತಲು, ನಡುವಿನ ಬಾಗಿಲುಗಳು ಒಂದೇ ಸಾಲಿನಲ್ಲಿಯೂ ಎರಡು ಪಾರ್ಶ್ವಗಳಲ್ಲಿ ಕಟ್ಟೆಗಳುಳ್ಳವಾಗಿಯೂ ಇರಬೇಕಾಗಿತ್ತು. ಹತ್ತು ಮನೆಗಳಿಗೆ ಒಂದು ಬಾವಿ. ಅಲ್ಲಿ ನೀರು ಮತ್ತು ಇತರ ಸೌಕರ್ಯಗಳ ವ್ಯವಸ್ಥೆಯು ನೆಟ್ಟಗಿತ್ತು.

ಮದಿರಾಗೃಹಗಳು :–ರಾಜಧಾನಿಯಲ್ಲಿ ಮದ್ಯಪಾನ ಬಹು ಸಾಮಾನ್ಯವಾಗಿ ಇದ್ದಹಾಗೆ ಕಾಣುತ್ತದೆ. ಪುರಮಧ್ಯದಲ್ಲಿ ಕಟ್ಟಿದ ಮದಿರಾಗೃಹಗಳಲ್ಲಿ ದ್ರಾಕ್ಷಾರಸ ವ್ಯಾಪಾರ ವಿಶೇಷವಾಗಿ ನಡೆಯುತ್ತಿತ್ತು. ಮದಿರೆಯನ್ನು ಉತ್ತಮ ಕುಲದವರಿಗೂ ಶ್ರೀಮಂತರಿಗೂ ಮಾರಬೇಕಾಗಿತ್ತು. ಸುರೆಯನ್ನು ಮದಿರಾಗೃಹದಿಂದ ಹೊರಗೆ ತೆಗೆದುಕೊಂಡು ಹೋಗಕೂಡದೆಂದು ನಿರ್ಬಂಧವಿತ್ತು. ಹಾಗೆ ನಿಬಂಧನೆಯನ್ನು ಉಲ್ಲಂಘಿಸಿದರೆ ಕಠಿಣವಾದ ದಂಡವನ್ನು ಕೊಡಬೇಕಾಗಿತ್ತು.

ಮದಿರಾಗೃಹಗಳು ಹೂ ಬಳ್ಳಿಗಳಿಂದ ಶೋಭಿಸುವ ತೋಟಗಳಿಂದಲೂ ಸ್ಫಟಿಕ ಮಂದಿರಗಳಿಂದಲೂ, ವಿಹಾರಸ್ಥಾನಗಳಿಂದಲೂ ಪರಿಮಳ ಕುಸುಮ ಮಾಲೆಗಳಿಂದಲೂ ಅಲಂಕೃತವಾದ ಶಯ್ಯಾಗೃಹಗಳಿಂದಲೂ ಭೋಗವಸ್ತುಗಳಿಂದಲೂ ಕೂಡಿದ್ದವು. ಮದಿರೆಯನ್ನು ಕುಡಿಯುವ ಮಂದಿರವು ಗಾಯಕರಿಂದಲೂ ಗಣಿಕೆಯರಿಂದಲೂ ನರ್ತಕಿಯರಿಂದಲೂ ಶೋಭಾಯಮಾನವಾಗಿತ್ತು.

ಮದಿರಾಗೃಹಗಳಲ್ಲಿ ಅಧಿಕಾರಿಗಳು ಮೇದಕ, ಪ್ರಸನ್ನ, ಆಸವ, ಅರಿಷ್ಟ, ಮೈರೇಯ ಮತ್ತು ಮಧು ಎಂಬ ಅನೇಕ ವಿಧವಾದ ದ್ರಾಕ್ಷಾರಸಗಳನ್ನು ತಯಾರುಮಾಡಿ ಸೇವನೆಗಾಗಿ ಬಂದ ವಿಟಜನರಿಗೆ ಮಾರುತ್ತಿದ್ದರು. ಸುರಾಧ್ಯಕ್ಷನಿಗೆ ಮದಿರಾಗೃಹದ ಆಡಳಿತ ಜವಾಬ್ದಾರಿಯು ಗುರುತರವಾಗಿತ್ತು; ಮದಿರೆಯ ಸೇವನೆಗಾಗಿ ಬರುವ ಜನರು ಸ್ಥಳೀಯರೇ ಅಥವಾ ಅನ್ಯದೇಶೀಯರೇ ಎಂದು ತಿಳಿಯಲು ಕಷ್ಟವಾಗಿತ್ತು. ಗೂಢಚಾರರು ಶತ್ರುರಾಷ್ಟ್ರಗಳಿಂದ ಬಂದು ಪಟ್ಟಣ ಪ್ರವೇಶಿಸಿ, ಮದಿರಾಗೃಹಗಳಲ್ಲಿ ರಾಜಧಾನಿಯ ವ್ಯೂಹರಕ್ಷಣೆಗಳ ರಹಸ್ಯವನ್ನು ತಿಳಿದುಕೊಳ್ಳಬಹುದಾಗಿತ್ತು. ಈ ವಿಪತ್ತುಗಳನ್ನು ನಿವಾರಿಸುವುದಕ್ಕೋಸ್ಕರ ಮದಿರಾಗೃಹದ ಸುಂದರಿಯರು ಸ್ಥಳೀಯ ಮತ್ತು ಪರದೇಶದ ಜನರಿಗೆ ಸುರಾಪಾನಮಾಡಿಸಿ ಹಾವಭಾವಗಳನ್ನು ಬೀರಿ, ಅವರು ಉನ್ಮಾದಾವಸ್ಥೆಯಲ್ಲಿದ್ದಾಗ ಅವರ ರಹಸ್ಯಗಳನ್ನು ಭೇದಿಸುತ್ತಿದ್ದರು. ಕೆಲವು ವೇಳೆ ಗಣಿಕೆಯರು ಸುರಾಪಾನದಿಂದ ಮದೋನ್ಮತ್ತರಾದವರ ಹಾಗೆ ನಟಿಸಿ ಅನ್ಯದೇಶೀಯರ ವೃತ್ತಾಂತವನ್ನು ತಿಳಿಯುತ್ತಿದ್ದರು.

ಹಬ್ಬ, ಜಾತ್ರೆ ಸಮಾರಂಭಗಳಲ್ಲಿ ಕುಟುಂಬಿಗಳು ಕೂಡ

ಶ್ರೀತಸುರೆಯನ್ನು ತಯಾರುಮಾಡಿ ಸೇವಿಸಬಹುದಾಗಿತ್ತು. ಆದರೆ ಸಾಧಾರಣ ದಿವಸಗಳಲ್ಲಿ ಮದಿರಾಸೇವನೆಯ ಹಕ್ಕು ಕೆಲವರಿಗೆ ಮಾತ್ರವಿತ್ತು. ಸೇವನೆಯಲ್ಲಿ ಅಭಿರುಚಿಯಿದ್ದವರು ಮದಿರಾಗೃಹಕ್ಕೇ ಹೋಗಿ ಅಲ್ಲಿ ಸೇವಿಸಬೇಕಾಗಿತ್ತು. ಸುರಾಧ್ಯಕ್ಷನು ನಿತ್ಯವೂ ಸರ್ಕಾರದ ಮತ್ತು ವರ್ತಕರ ಮದಿರಾವ್ಯಾಪಾರದ ಲೆಕ್ಕವನ್ನು ತಿಳಿದು ಮಾರಾಟದಿಂದ ವಸೂಲಿಯಾದ ಸುಂಕ ಮತ್ತು ವೈಧರಣವನ್ನು ರಾಜನಿಗೆ ಒಪ್ಪಿಸುತ್ತಿದ್ದನು.

ಸೂನಾಗೃಹಗಳು—ಸುರಾಕ್ರಯ ವಿಕ್ರಯಗಳ ವಿಚಾರದಲ್ಲಿ ಎಷ್ಟು ನಿಬಂಧನೆಗಳಿದ್ದವೋ ಅಷ್ಟೇ ಮಾಂಸ ಕ್ರಯ ವಿಕ್ರಯಗಳಲ್ಲಿಯೂ ಬಹಳ ಸಮರ್ಪಕವಾದ ಏರ್ಪಾಡಿತ್ತು. ಅಭಯಾರಣ್ಯದಲ್ಲಿ ವಾಸಿಸುವ ಮೃಗಪಶುಗಳು ಹತ್ಯೆ ನಡೆಯಿಸಿದರೆ ವಿಶೇಷ ಶಿಕ್ಷೆ ಅನುಭವಿಸಬೇಕಾಗಿತ್ತು. ಕುದುರೆ, ಆನೆ, ಗೂಳಿ, ಕ್ರೌಂಚ, ಹಂಸ, ಚಕ್ರವಾಕ, ಭೃಂಗರಾಜ, ಚಕೋರ, ಕೋಕಿಲ, ನವಿಲು, ಗಿಣಿ ಮತ್ತು ಮದನಸಾರಿಕೆಗಳ ಮಾಂಸವು ನಿಷಿದ್ಧವಾಗಿತ್ತು. ಪರಿಸೂನದಲ್ಲಿಯೇ ಆಗತಾನೆ ಕಡಿದ ಮೃಗಪಶುಗಳ ಹೊಸ ಮಾಂಸವನ್ನು ಮಾರಬೇಕಾಗಿತ್ತು. ಪರಿಸೂನದಿಂದ ಹೊರಗೆ ಮಾರಿದರೆ, ಮೂಳೆಯಿಂದ ಕೂಡಿದ್ದ ಮಾಂಸವನ್ನು ವಿಕ್ರಯಮಾಡಿದರೆ, ತೂಕದಲ್ಲಿ ವ್ಯತ್ಯಾಸವಾದರೆ ಸೂನಾಧ್ಯಕ್ಷನಿಗೆ ಪ್ರತಿಪಾಕವನ್ನು ಕೊಡಬೇಕಾಗಿತ್ತು.

ಗಣಿಕೆಯರು—ಇವರು ವಿಶೇಷ ಸಂಖ್ಯೆಯಲ್ಲಿ ಪಟ್ಟಣದ ಮುಖ್ಯ ಭಾಗಗಳಲ್ಲಿಯೂ ಅರಮನೆ ಅಂತಃಪುರಗಳಲ್ಲಿಯೂ ವಾಸಿಸುತ್ತಿದ್ದರು. ವೇಶ್ಯಾವೃತ್ತಿಯು ಕೌಟಿಲ್ಯನ ಕಾಲದಲ್ಲಿ ಅಷ್ಟು ದೂಷ್ಯವಾಗಿದ್ದ ಹಾಗೆ ಕಾಣುವುದಿಲ್ಲ. ನರ್ತನ,

ೋಗ ವಿಷಯಗಳಲ್ಲಿಯೂ ರಾಜನ ಅಂತಃಪುರ ರಕ್ಷಣೆಗೂ ಂತಃಪುರದ ಒಳಸಂಚುಗಳಲ್ಲಿಯೂ ಪರರಾಷ್ಟ್ರಗಳೊಡನೆ ಂಧಿ ಸಂಧಾನಗಳಲ್ಲಿಯೂ ಗಣಿಕೆಯರು ಬಹಳ ಉಪಯೋಗ ಾರಿಗಳಾಗಿದ್ದರು

ನರ್ತಕಿಯರು ಎಂಟನೆಯ ವರ್ಷದಿಂದಲೇ ನೃತ್ಯಕಲಾ ್ಯಾಸಮಾಡಿ ರಾಜನ ಮುಂದೆ ಅಭಿನಯಿಸಬೇಕಾಗಿತ್ತು. ಯೌವ್ವನ ಸೌಂದರ್ಯದಿಂದ ಕೂಡಿದ ಗಣಿಕೆಯು ನೃತ್ಯ, ಾಟ್ಯ, ಲಾಸ್ಯತಾಂಡವ ಮುಂತಾದುವುಗಳಲ್ಲಿ ಪ್ರವೀಣತೆ ಯನ್ನು ಹೊಂದಿರಬೇಕಾಗಿತ್ತು. ಪೂರ್ವಿಕರಲ್ಲಿ ಕಲಾಭಿ ುಚಿಯು ನಾನಾ ವಿಧವಾಗಿತ್ತೆಂಬುದಕ್ಕೂ ಕಲೆಗಳೆಲ್ಲಾ ಪುಷ್ಟಿ ಯನ್ನೂ ತೇಜಸ್ಸನ್ನೂ ಪಡೆದಿದ್ದುವೆಂಬುದಕ್ಕೂ ಅರ್ಥಶಾಸ್ತ್ರ ಲ್ಲಿ ಸಾಕಾದಷ್ಟು ನಿದರ್ಶನ ಸಿಕ್ಕುತ್ತದೆ. ಗಣಿಕಾಧ್ಯಕ್ಷನು ೂಪದಾಸಿಯ ಆಯವ್ಯಯ, ಚಲನವಲನಗಳ ಮೇಲ್ವಿ ಾರಣೆಯನ್ನು ಆಗಿಂದಾಗ್ಗೆ ನಡೆಸಬೇಕು.

ಹಿತಕರವಾದ ಜೀವನಕ್ಕೆ ಸಮರ್ಪಕವಾದ ವ್ಯವಸ್ಥೆಗಳನ್ನು ಾಡಬೇಕು ; ರೂಪದಾಸಿಯರಿಗೆ ವಿಟಪುರುಷರಿಂದ ಅಪಾಯ ಂಭವಿಸಿದ ಸಂದರ್ಭದಲ್ಲಿ ಪುರುಷರಿಂದ ರೂಪದಾಸಿಯರಿಗೆ ಷ್ಟ್ರಯ ಮತ್ತು ದಂಡವನ್ನು ಕೊಡಿಸಬೇಕು. ಪ್ರಾಪ್ತ ಯಸ್ಕಳಲ್ಲದ ಕುಮಾರಿಯೊಡನೆ ಪುರುಷನು ಸಂಬಂಧವನ್ನು ಯಿಸಿದರೆ ಅಥವಾ ರೂಪದಾಸಿಯರನ್ನು ಬಲಾತ್ಕಾರ ಪಡಿಸಿ ರೆ ಪುರುಷನನ್ನು ಕಠಿಣವಾಗಿ ಶಿಕ್ಷಿಸಬೇಕೆಂಬುದು ಕೌಟಿಲ್ಯನ ೇಳಿಕೆ. ರೂಪಜೀವಿಗಳು ಪ್ರತಿ ತಿಂಗಳಲ್ಲಿಯೂ ತಮ್ಮ ಂದು ದಿನದ ಸಂಪಾದನೆಯ ಎರಡರಷ್ಟನ್ನು ("ಭೋಗ ಗುಣಂ") ಸರ್ಕಾರಕ್ಕೆ ಕೊಡಬೇಕಾಗಿತ್ತು. ಪ್ರೇಕ್ಷಾವೇತನ,

ವಿಟಪುರುಷರು ಕೊಡಬೇಕಾಗಿದ್ದ ದಂಡಗಳು, ಗಾಯಕರು, ವಾಗ್ಜೀವಿಗಳು, ಕುಶೀಲವರು, ಪ್ಲವಕರು, ಸೌಭಿಕರು, ಚಾರಣರು, ಗಣಿಕೆಯರು—ಇವರೆಲ್ಲರೂ ಪ್ರತಿ ತಿಂಗಳಲ್ಲಿ ಕೊಡುತ್ತಿದ್ದ ಸುಂಕಗಳು ಸರ್ಕಾರದ ಆದಾಯದ ಒಂದು ಮುಖ್ಯಾಂಶವಾಗಿತ್ತು.

ಕಸಬುಗಳು:—ಜೀವನೋದ್ಯೋಗಗಳಲ್ಲಿ ಕೃಷಿ ಕೈಗಾರಿಕೆ ವ್ಯಾಪಾರ ಮತ್ತು ಸೇವಾರೂಪವಾದ ವೃತ್ತಿಗಳೇ ಮುಖ್ಯ. ದೇಶದಲ್ಲಿ ಕೃಷಿಯೇ ಪ್ರಧಾನವಾಗಿದ್ದಾಗ್ಯೂ ಕೃಷಿಯ ಜೊತೆಗೆ ಅನೇಕ ಉದ್ಯೋಗ ಕೈಗಾರಿಕೆಗಳೂ ಉತ್ಕರ್ಷವಾಗಿ ರಾಷ್ಟ್ರ ರಂಜಕವಾಗಿದ್ದವು. ಕೈಗಾರಿಕೆಗಳಲ್ಲಿಯೂ, ಕುಶಲ ಕಲೆಗಳಲ್ಲಿಯೂ, ಕಬ್ಬಿಣ, ಚಿನ್ನ, ಬೆಳ್ಳಿ ಕೆಲಸಗಳಲ್ಲಿಯೂ, ಲೋಹ, ಮರ, ಚರ್ಮ ಸಾಮಾನುಗಳ ನಿರ್ಮಾಣದಲ್ಲಿಯೂ, ನೆಯ್ಗೆ ಮತ್ತು ಬಣ್ಣ ವೃತ್ತಿಗಳಲ್ಲಿಯೂ ಇಡಿ ಜಗತ್ತಿಗೆ ಕೌಟಿಲ್ಯನ ರಾಷ್ಟ್ರವು ತೌರುಮನೆಯಾಗಿತ್ತು. ಅಲಂಕಾರ ವಾಸನಾದ್ರವ್ಯಗಳನ್ನೂ ಭೋಗವಸ್ತುಗಳನ್ನೂ ಸೃಷ್ಟಿಸುವುದರಲ್ಲಿ ಜನರು ಪ್ರವೀಣತೆಯನ್ನು ಹೊಂದಿದ್ದರು. ವಾದ್ಯಗಳ ರಚನೆಯಲ್ಲೂ ವಾಸ್ತುಶಿಲ್ಪ ಮುಂತಾದ ಲಲಿತ ಕಲೆಗಳಲ್ಲಿಯೂ ವೈಶಿಷ್ಟ್ಯವಿತ್ತು. ಹತ್ತಿಬಟ್ಟೆಗಳು, ಆಭರಣ ಮತ್ತು ಅಲಂಕಾರ ಪದಾರ್ಥಗಳು ವಿಶೇಷವಾಗಿ ರಾಷ್ಟ್ರದಲ್ಲಿ ಉತ್ಪತ್ತಿಯಾಗಿ ಅನ್ಯದೇಶಗಳಿಗೆ ಕೂಡ ಹೋಗುತ್ತಿದ್ದವು. ಇದರಿಂದ ವ್ಯಾಪಾರ ವಿಸ್ತಾರವಾಯಿತು. ವ್ಯಾಪಾರ ವೃದ್ಧಿಯಾದುದರಿಂದ ಸಮುದ್ರಯಾನ, ನೌಕಾನಿರ್ಮಾಣ, ಜೀವನ ಸಮೃದ್ಧಿ ಮತ್ತು ವಿಕಾಸಕ್ಕೆ ಉತ್ತೇಜನ ಕೊಟ್ಟಿತು. ವ್ಯಾಪಾರದಿಂದ ಗಳಿಸಿದ ಐಶ್ವರ್ಯರಾಶಿಯು ಭೋಗ ವಿನಿಯೋಗಕ್ಕೂ ಕಲೆಗಳ

ಪ್ರೋತ್ಸಾಹಕ್ಕೂ ರಾಷ್ಟ್ರಭದ್ರತೆಗೆ ಬೇಕಾಗುವ ಸಲಕರಣೆಗಳನ್ನು ಒದಗಿಸಿಕೊಳ್ಳುವುದಕ್ಕೂ ಸೈನ್ಯತಿಸ್ತಿಗೂ ಉಪಯೋಗವಾಯಿತು.

ಕೃಷಿಯಂತೆಯೇ ವ್ಯಾಪಾರ ಕೈಗಾರಿಕೆಗಳೂ ರಾಷ್ಟ್ರೋನ್ನತಿಗೆ ಮೂಲವಾದುದರಿಂದ ಅವುಗಳ ರಚನೆ ಮತ್ತು ಆಡಳಿತಗಳು ನಿಯಮ ಬದ್ಧವಾಗಿರಬೇಕಾಗಿತ್ತು. ಸುವರ್ಣಾಧ್ಯಕ್ಷ, ಪಣ್ಯಾಧ್ಯಕ್ಷ, ಸೂತ್ರಾಧ್ಯಕ್ಷ, ನಾವಾಧ್ಯಕ್ಷ ಮೊದಲಾದ ಅಧಿಕಾರಿಗಳು ಆಡಳಿತವನ್ನು ನಿರ್ವಹಿಸುತ್ತಿದ್ದರು. ಇವರ ಕರ್ತವ್ಯಗಳನ್ನೂ ಕೈಗಾರಿಕೆ ವ್ಯಾಪಾರಗಳಿಗೆ ಸಂಬಂಧಪಟ್ಟ ನಿಯಮ ನಿಬಂಧನೆಗಳನ್ನು ಕೌಟಿಲ್ಯನು ಅರ್ಥಶಾಸ್ತ್ರದಲ್ಲಿ ಅನೇಕ ಪ್ರಕರಣಗಳಲ್ಲಿ ವಿವರಿಸಿದ್ದಾನೆ. ಒಂದೆರಡು ಕಸಬುಗಳ ವಿಷಯವನ್ನು ಇಲ್ಲಿ ಉಲ್ಲೇಖಿಸಿದೆ.

ಕೌಟಿಲ್ಯನ ಕಾಲದಲ್ಲಿ ಜನರು ಹತ್ತಿ, ರೇಷ್ಮೆ ಮತ್ತು ತುಪಟಗಳಿಂದ ವಸ್ತ್ರಗಳನ್ನು ತಯಾರುಮಾಡುತ್ತಿದ್ದರು. ಸೂತ್ರಾಧ್ಯಕ್ಷನು ಸೂತ್ರ, ವರ್ಮ, ವಸ್ತ್ರ ಮತ್ತು ರಜ್ಜುಗಳನ್ನು ತಯಾರುಮಾಡುವುದಕ್ಕೆ ಮುಖ್ಯವಾಗಿ ಹೆಂಗಸರನ್ನೇ ನೇಮಿಸುತ್ತಿದ್ದನು. ವಿಧವೆಯರು, ಅಂಗಹೀನರು, ವೃದ್ಧದಾಸಿಯರು, ರೂಪದಾಸಿಯರು, ದಂಡವನ್ನು ತೆರಲಾರದವರು ಉಣ್ಣೆ, ಹತ್ತಿ, ನಾರು ಮುಂತಾದವುಗಳಿಂದ ನೂಲನ್ನು ಮಾಡುತ್ತಿದ್ದರು. ಮನೆಯಿಂದ ಹೊರಕ್ಕೆ ಬರಲಾಗದ ಹೆಂಗಸರು ಮಾಡಿದ ಸೂತ್ರ ಮತ್ತು ವಸ್ತ್ರಗಳನ್ನು ಸೂತ್ರಾಧ್ಯಕ್ಷನ ದಾಸಿಯರು ಅವರ ಮನೆಯಿಂದ ಹೋಗಿ ಕೊಂಡುಕೊಂಡು ಬರುತ್ತಿದ್ದರು. ಇತರರು ನೂಲನ್ನೂ ಮತ್ತು ವಸ್ತ್ರಗಳನ್ನೂ ಸೂತ್ರಶಾಲೆಯಲ್ಲಿ ಮಾರಬಹುದಾಗಿತ್ತು. ವಸ್ತ್ರಗಳನ್ನು

ಮಾಡುವುದಕ್ಕೆ ಉತ್ತಮದರ್ಜೆಯ ನೂಲುಗಳನ್ನು ಅಲ್ಲಿ ಕೊಳ್ಳಬಹುದಾಗಿತ್ತು. ಕೊಳ್ಳುವುದಕ್ಕೆ ಸರ್ಕಾರವಾಗಲಿ ಅಥವಾ ಶ್ರೇಣಿಗಳಾಗಲಿ ಕೆಲಸಗಾರರಿಗೆ ತಮ್ಮ ನಿಧಿಗಳಿಂದ ದುಡ್ಡನ್ನು ಸಾಲರೂಪವಾಗಿ ಒದಗಿಸುತ್ತಿದ್ದವು. ತನ್ನ ಹೊಟ್ಟೆಯನ್ನು ತನ್ನ ಕುಶಲತೆಯಿಂದಲೇ ಹೊರೆದುಕೊಳ್ಳುವ ಸ್ವವಿತ್ತಕಾರನಿಗೆ ಹೆಚ್ಚು ಮನ್ನಣೆಯಿತ್ತು. ಉತ್ತಮ ನೂಲಿನ ಬದಲು ಕೀಳುನೂಲನ್ನು ಉತ್ತಮ ವಸ್ತ್ರ ನಿರ್ಮಾಣಕ್ಕಾಗಿ ಉಪಯೋಗಿಸಕೂಡದಾಗಿತ್ತು. ನೂಲನ್ನು ಕದ್ದರೆ ನೆಯ್ಗೆಯಲ್ಲಿ ಮೋಸ ಮಾಡಿದರೆ ಅಥವಾ ಕೆಲಸದಲ್ಲಿ ಉದಾಸೀನನಾದರೆ ದಂಡ ತೆರಬೇಕಾಗಿತ್ತು. ಆದರೆ ವಸ್ತ್ರಗಳನ್ನು ನೈಪುಣ್ಯದಿಂದಲೂ ದಕ್ಷತೆಯಿಂದಲೂ ಸಕಾಲಕ್ಕೆ ಸಿದ್ಧಪಡಿಸಿಕೊಟ್ಟರೆ ವೇತನದ ಜೊತೆಗೆ ದ್ರವ್ಯ, ಪುಷ್ಪ, ಸುಗಂಧಗಳು ಪಾರಿತೋಷಿಕವಾಗಿ ದೊರೆಯುತ್ತಿತ್ತು.

ಬಹಳ ಬೆಲೆಬಾಳುವ ಮತ್ತು ಉತ್ಕೃಷ್ಟವಾದ ವಸ್ತ್ರಗಳನ್ನು ನಿರ್ಮಾಣ ಮಾಡುತ್ತಿದ್ದುದರಿಂದ ಅಗಸರು ಬಹಳ ಜಾಗರೂಕತೆಯಿಂದಿರಬೇಕಾಗಿತ್ತು. ನುಣುಪಾದ ಕಲ್ಲಿನ ಮೇಲೆ ಅಥವಾ ಹಲಗೆಯ ಮೇಲೆ ಬಟ್ಟೆಗಳನ್ನು ಒಗೆಯಬೇಕು. ಅಗಸರು ಕುಡುಗೋಲು ಗುರುತಿನ ಬಟ್ಟೆಗಳನ್ನು ಧರಿಸಬೇಕೆಂಬ ನಿಯಮವಿದ್ದಿತು. ಇತರರ ಬಟ್ಟೆಗಳನ್ನೇ ಧರಿಸಿದರೆ, ಹರಿದರೆ, ಬಣ್ಣ ಹೋಗಿಸಿದರೆ, ಬಾಡಿಗೆಗೆ ಕೊಟ್ಟರೆ, ವಿಕ್ರಯ ಅಥವಾ ದಾನಮಾಡಿದರೆ ವಿಶೇಷ ದಂಡ ತೆರಬೇಕಾಗಿತ್ತು. ೫ ಅಥವಾ ೭ ದಿವಸಗಳಲ್ಲಿ ಬಟ್ಟೆಗಳನ್ನು ಮಲ್ಲಿಗೆಯ ಹೂವಿನಷ್ಟು ಬೆಳ್ಳಗೆ ಒಗೆದುಕೊಡಬೇಕು. ಅಗಸರು ಕುಶಲತೆಯಿಂದ ಬಟ್ಟೆಗಳನ್ನು ಒಗೆದು ಮಡಿಮಾಡಿಕೊಟ್ಟರೆ ಬಟ್ಟೆಯ ಬೆಲೆಗೆ ತಕ್ಕಹಾಗೆ ಮಜೂರಿ ದೊರೆಯುತ್ತಿತ್ತು; ಉತ್ತಮ

ಉಡುಪುಗಳಿಗೆ ಒಂದು ಬಗೆಗೆ ೧೨ ಆಣೆ; ಮಧ್ಯಮದರ್ಜೆಯ ಉಡುಪಿಗೆ ೬ ಆಣೆ, ಇತರ ಉಡುಪುಗಳಿಗೆ ೩ ಆಣೆ ಪ್ರಕಾರ ಕೂಲಿ ಸಿಕ್ಕುತ್ತಿತ್ತು.

ಅಕ್ಕಸಾಲಿಗನ ವಿಷಯದಲ್ಲೂ ಕೂಡ ಕಟ್ಟುಕಾಯಿದೆಗಳಿದ್ದವು: ನಿಯಮಿತ ಕಾಲದಲ್ಲಿ ಒಡವೆಗಳನ್ನು ಮಾಡಿಕೊಡಬೇಕು. ಆಭರಣಗಳನ್ನು ಸುವರ್ಣಾಧ್ಯಕ್ಷನಿಗೆ ತಿಳಿಸದೆ ಕೊಂಡುಕೊಂಡು ಕರಗಿಸಕೂಡದು. ಹಾಗೆ ಮಾಡಿದಲ್ಲಿ ಶಿಕ್ಷೆಗೆ ಗುರಿಯಾಗುತ್ತಿದ್ದನು. ಸುವರ್ಣದೊಡನೆ ಬೇರೆ ಲೋಹಗಳನ್ನು ಮಿಶ್ರಮಾಡಿ ಆಭರಣಗಳನ್ನು ಮಾಡಿಕೊಟ್ಟರೆ ದಂಡ ತೆರಬೇಕಾಗಿತ್ತು. ವಜ್ರ ವೈಡೂರ್ಯ ಮತ್ತು ಹವಳಗಳು ಸರ್ಕಾರದ ಸ್ವತ್ತು. ಭೂಮಿಯಲ್ಲಿ ಅಡಗಿರುವ ಖನಿಜ ಸಂಪತ್ತುಗಳನ್ನು ತೋರಿಸಿ ಕೊಟ್ಟವನಿಗೆ ಸಿಕ್ಕಿದ ಸಂಪತ್ತಿನಲ್ಲಿ ಷಡ್ಭಾಗ ಸಂದಾಯವಾಗಿ, ಮಿಕ್ಕಿದ್ದು ಕೋಶಕ್ಕೆ ಸೇರುತ್ತಿತ್ತು.

ವೈದ್ಯರು, ಕುಶೀಲವರು, ಸೌಭಿಕರು, ರೂಪದಾಸಿ ಮತ್ತು ನರ್ತಕಿಯರು ತಮ್ಮ ತಮ್ಮ ವೃತ್ತಿಗಳನ್ನು ಶಿಸ್ತಿನಿಂದ ನಡೆಸಿಕೊಳ್ಳಬೇಕಾಗಿತ್ತು. ನಿಬಂಧನೆಗಳಿಗೆ ವ್ಯತಿರಿಕ್ತವಾಗಿ ನಡೆದರೆ ಸರ್ಕಾರವು ಶಿಕ್ಷೆ ವಿಧಿಸುತ್ತಿತ್ತು.

ವೈದ್ಯವೃತ್ತಿಯ ವಿಷಯದಲ್ಲಿ ಕೌಟಿಲ್ಯನು ಮಾಡಿರುವ ನಿಯಮ ನಿಬಂಧನೆಗಳು ಅತ್ಯುಗ್ರವಾಗಿವೆ. ಪ್ರಾಣಹಾನಿಯನ್ನುಂಟುಮಾಡುವ ಉಪದ್ರವವು ರೋಗಿಯಲ್ಲಿ ಕಂಡರೆ ವೈದ್ಯನು ತಕ್ಷಣವೇ ಸರ್ಕಾರಕ್ಕೆ ತಿಳಿಸಬೇಕು. ಹಾಗೆ ತಿಳಿಸದೆ ಇದ್ದರೆ ಅಥವಾ ತನ್ನ ಔದಾಸೀನ್ಯದಿಂದ ರೋಗಿಯು ಬಾಯಿಲೆಯನ್ನು ಹೆಚ್ಚು ಮಾಡಿ ಅವನ ಮೃತ್ಯುವಿಗೆ ಕಾರಣನಾದರೆ ವೈದ್ಯನು ಕಠಿಣಶಿಕ್ಷೆಗೆ ಗುರಿಯಾಗುತ್ತಿದ್ದನು.

ಗಾನಕಲೆಯನ್ನು ನಿಪುಣರಾದವರೂ ನಿರ್ದಿಷ್ಟವಾದ ಕಾಲದಲ್ಲಿ ಜನರಿಗೆ ಮನೋರಂಜಕವಾಗುವಂತೆ ಗಾನಮಾಡಬೇಕು. ಜನರನ್ನು ಅದರಲ್ಲಿ ಮಗ್ನರನ್ನಾಗಿ ಮಾಡಿ ಅವರ ಜೀವನೋಪಾಯಕ್ಕೆ ಭಂಗಬರದಂತೆ ನಿರ್ದಿಷ್ಟವಾದ ಕಾಲಗಳಲ್ಲಿ ಹಾಡಬೇಕು. ಹೀಗೆಯೇ ವರ್ತಕರು ಮುಂತಾದ ವಿಚಾರದೊಲ್ಲೂ ಕಠಿಣತರವಾದ ನಿಬಂಧನೆಗಳಿತ್ತು. ವೃತ್ತಿಗಳಲ್ಲಿ ಸರ್ಕಾರದ ನೌಕರಿ ಬಹು ಮುಖ್ಯವಾದುದಾಗಿತ್ತು. ಸರ್ಕಾರದ ನೌಕರರನ್ನು ಚೆನ್ನಾಗಿ ಪರೀಕ್ಷಿಸಿ ನಿಯಮಿಸಿಕೊಳ್ಳುತ್ತಿದ್ದರು. ನಂಬಿಕೆಯಿಂದ ಕೆಲಸಮಾಡಿದವರಿಗೆ ನಿರ್ದಿಷ್ಟವಾದ ವೇತನವೂ ವಿಧಾಯಕವಾಗಿತ್ತು.

ವೃತ್ತಿಗಳಲ್ಲಿ ವರ್ಷಕ್ಕೊಂದು ಬಾರಿ ಆಡಳಿತ ಉದ್ಯೋಗಗಳ ವೇತನಗಳನ್ನು ದ್ರವ್ಯರೂಪವಾಗಿಯೇ ಕೊಡುವ ವಾಡಿಕೆಯಿತ್ತು. ''ಭೃತ್ಯ ಭರಣೀಯಂ'' ಎಂಬ ಪ್ರಕರಣದಲ್ಲಿ ಕೌಟಿಲ್ಯನು ಕೊಟ್ಟಿರುವ ಸರ್ಕಾರಿ ಅಧಿಕಾರಿಗಳ ವೇತನದ ಪಟ್ಟಿ ಈ ರೀತಿಯಾಗಿದೆ: ಮಂತ್ರಿ, ಪುರೋಹಿತ, ಯುವರಾಜ ರಾಣಿ, ರಾಜನತಾಯಿ, ಮತ್ತು ರಾಜಗುರು, ಇವರುಗಳಿಗೆ ೪೮,೦೦೦ ಪಣಗಳು;* ದೌವಾರಿಕ, ಅಂತರ್ವಂಶಿಕ, ಪ್ರಶಸ್ತಾ ಸನ್ನಿಧಾತಾ, ಮತ್ತು ಆ ದರ್ಜೆಯ ಅಧಿಕಾರಿಗಳಿಗೆ ೨೪,೦೦೦ ಪಣ; ಪೌರ, ವ್ಯವಹಾರಿಕ, ಕಾರ್ಮಾಂತಿಕ ಮತ್ತು ಮಂತ್ರಿ ಪರಿಷತ್ತಿನ ಸದಸ್ಯರಿಗೆ ೧೨,೦೦೦ ಪಣ; ಸಾಮಾನ್ಯ ನೌಕರರುಗಳಿಗೆ ೫೦೦ ಪಣ; ಬಡಗಿ ಮುಂತಾದ ಕಾರುಕರಿಗೆ ೧೨೦ ಪಣ; ಚಂಗೂಲಿಗಳಿಗೆ ೬೦ ಪಣ; ಕೆಲವು ವೇಳೆ ವೇತನದ ಜೊತೆಗೆ

---

*ಪಣ ಒಂದಕ್ಕೆ ಸುಮಾರು ೧೯ ಆಣೆ. ಇಲ್ಲಿ ಕೊಡುವ ವೇತನ ವಾರ್ಷಿಕವೇತನ.

ಭೂಮಿ ಮತ್ತು ಆಹಾರಸಾಮಗ್ರಿಗಳನ್ನು ಅಧಿಕಾರಿಗಳು ಪಡೆಯುತ್ತಿದ್ದರು. ಗೋಪ, ಸ್ಥಾನೀಯ ಮುಂತಾದ ಅಧಿಕಾರಿಗಳಿಗೆ ವೇತನದ ಬದಲಾಗಿ ಮನೆ ಭೂಮಿ ಕಾಣಿಕೆಗಳನ್ನು ಸರ್ಕಾರವು ಕೊಡುತ್ತಿತ್ತು. ಈ ಅಧಿಕಾರಿಗಳು ಭೂಮಿ ಮುಂತಾದ ಸ್ಥಿರಸ್ವತ್ತುಗಳನ್ನು ಅನುಭವಿಸಿ ವಂಶಪರಂಪರೆಯಾಗಿ ಅವಿಭಕ್ತವಾಗಿ ನಡೆಸಿಕೊಂಡು ಬರಬೇಕಾಗಿತ್ತು.

---

೭. ಮಹಿಳೆಯರ ಸ್ಥಾನ ಮತ್ತು ಹಕ್ಕುಬಾಧ್ಯತೆಗಳು

ಆರ್ಯರೆನಿಸಿಕೊಳ್ಳುವವರ ಜೀವಮಾನದಲ್ಲಿ ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥ, ಸನ್ಯಾಸ ಎಂಬ ನಾಲ್ಕುವಿಧಗಳಾದ ಅವಸ್ಥೆಗಳು ವಿಹಿತವಾಗಿದ್ದುವು. ಸ್ತ್ರೀಯು ವಿವಾಹಿತಳಾದ ಮೇಲೆ ತನ್ನ ಏಕತ್ವವನ್ನು ಬಿಟ್ಟು ಪುರುಷನ ಸಮಭಾಗಿಯಾಗಿ ವರ್ತಿಸಿ, ಸಾಂಘಿಕ ಮತ್ತು ಮತಾಚಾರಗಳಲ್ಲಿ ಪತಿಯೊಡನೆ ಸೇರಿ ಕೆಲಸಮಾಡುವುದು ಅವಳ ಮುಖ್ಯ ಧರ್ಮವಾಗಿತ್ತು. ಭಾರ್ಯಾಭರ್ತರಿಬ್ಬರೂ ಸೇರಿ ಮಾಡುವ ಕೆಲಸಗಳಿಗೆ ಧರ್ಮಶಾಸ್ತ್ರಗಳ ಅಂಗೀಕಾರವಿತ್ತೇ ಹೊರತು ಪ್ರತ್ಯೇಕವಾಗಿ ಮಾಡಿದ ಕೆಲಸಗಳಿರಲಿಲ್ಲ. ಕೌಟಿಲ್ಯನು ಬ್ರಾಹ್ಮ, ಪ್ರಾಜಾಪತ್ಯ. ಆರ್ಷ ಮತ್ತು ದೈವಪದ್ಧತಿಯ ವಿವಾಹಗಳು ಪ್ರಾಚೀನವಾದುವೆಂದೂ ಶಾಸ್ತ್ರೀಯವಾದುವೆಂದೂ ಹೇಳುತ್ತಾನೆ. ಅರ್ಥಶಾಸ್ತ್ರದ ಪ್ರಕಾರ ಗಾಂಧರ್ವ, ಆಸುರ, ರಾಕ್ಷಸ, ಪೈಶಾಚ ವಿವಾಹಗಳೂ ಕೂಡ ತಾಯಿತಂದೆಗಳ ಅನುಮತಿಯಿದ್ದರೆ ಸಮಾಜದಲ್ಲಿ ಮನ್ನಣೆ ಹೊಂದುವುವು.

ಹೆಂಗಸು ಹನ್ನೆರಡನೆಯ ವರ್ಷಕ್ಕೆ ಬ್ರಹ್ಮಚಾರಿಣಿ, ಹದಿನಾರಕ್ಕೆ ಪ್ರಜಾಪತ್ಯ ವಿವಾಹಕ್ಕೆ ಯೋಗ್ಯಳಾಗುತ್ತಿದ್ದಳು, ಸಂತತಿಯಾಗಬೇಕೆಂದೇ ಪರಮಾತ್ಮನು ಸ್ತ್ರೀಯರನ್ನು ನಿರ್ಮಾಣಮಾಡಿದ್ದನೆಂದು ಕೌಟಿಲ್ಯನ ನಂಬಿಕೆ. ಮಕ್ಕಳಾಗದಿದ್ದರೆ ಲಗ್ನವಾದ ನಂತರ ಎಂಟು ವರ್ಷ ಕಾಯ್ದು ಅನಂತರ ಪುರುಷನು ಅನ್ಯ ಸ್ತ್ರೀಯನ್ನು ಪಾಣಿಗ್ರಹಣ ಮಾಡಿಕೊಳ್ಳಬಹುದಾಗಿತ್ತು. ಹೆಣ್ಣು ಮಕ್ಕಳು ಹುಟ್ಟಿದರೆ ಹನ್ನೆರಡು ವರ್ಷಗಳ ತನಕ ಪುನರ್ವಿವಾಹಕ್ಕಾಗಿ ತಡೆಯಬೇಕು. ಪುತ್ರಾಕಾಂಕ್ಷೆಯೇ ಬಲವಾಗಿದ್ದ ಪಕ್ಷದಲ್ಲಿ ಹನ್ನೆರಡು ವರ್ಷಗಳ ಮೇಲೆ ಅನ್ಯ ಸ್ತ್ರೀಯನ್ನು ವರಿಸಬಹುದು. ಈ ನಿಬಂಧನೆಯನ್ನು ಉಲ್ಲಂಘಿಸಿದಲ್ಲಿ ಪುರುಷನು ಹೆಂಗಸಿಗೆ ಶುಲ್ಕ, ಸ್ತ್ರೀಧನ, ವೃತ್ತಿ ಅಧಿವೇದನಕಾಮಾರ್ಥಕ್ಕಾಗಿ ಹಣ ಮುಂತಾದವುಗಳನ್ನು ಕೊಟ್ಟು, ಸರ್ಕಾರಕ್ಕೆ ೨೪ ಪಣ ದಂಡ ಸಲ್ಲಿಸಬೇಕಾಗಿತ್ತು. ಈ ರೀತಿಯ ಹಣ ವಿನಿಯೋಗಕ್ಕೆ ಶಕ್ತಿ ಸಂಪತ್ತುಗಳಿದ್ದ ಪಕ್ಷದಲ್ಲಿ ಎಷ್ಟು ಮಂದಿ ಸ್ತ್ರೀಯರನ್ನಾದರೂ ವರಿಸಬಹುದಾಗಿತ್ತು. ಹೆಂಡತಿಯು ಅವಿನೀತೆಯಾದರೆ ಬಯ್ದಾಗಲಿ, ಬಿದುರುಕೋಲಿನಿಂದ ಅಥವಾ ಅಂಗೈಯಿಂದ ಹೊಡೆದಾಗಲಿ, ಅವಳನ್ನು ಧರ್ಮಭಾಗಕ್ಕೆ ತಿರುಗಿಸಬೇಕು. ಸ್ವೇಚ್ಛೆಯಿಂದ ನಡೆಯುವ ದುಷ್ಟ ಹೆಂಗಸರು ದಂಡ ತೆರಬೇಕಾಗಿತ್ತು. ದುಡ್ಡು ಕೊಟ್ಟು ದೇಹದಂಡಗಳನ್ನು ತಪ್ಪಿಸಿಕೊಳ್ಳಬಹುದಾಗಿತ್ತು.

ಗೃಹಿಣಿಯು ಗಂಡನಿಗೆ ವಿರೋಧವಾಗಿ ನಡೆದರೆ, ಅಪ್ಪಣೆಯಿಲ್ಲದೆ ಅಕ್ಕಪಕ್ಕದ ಮನೆಗಳಿಗೆ ಹೋದರೆ, ಅವಳ ದಂಡ ಕೊಡಬೇಕಾಗಿತ್ತು. ಆದರೆ ದಾನ, ಧರ್ಮ, ಯಾತ್ರಾಕಾಂಕ್ಷೆಗಾಗಿ ಸ್ತ್ರೀ ಸ್ವಾತಂತ್ರ್ಯದಿಂದ ವರ್ತಿಸುವುದಕ್ಕೆ ಅನುಮತಿ

ಯಿತ್ತು. ರಾಜದ್ರೋಹ, ನೀಚವಾದ ಸ್ವೈರವೃತ್ತಿ, ಗಾರ್ಹಸ್ಥ್ಯಕ್ಕೆ ವಿರೋಧವಾದ ವರ್ತನೆಗಳಿಂದ ಗೃಹಿಣಿಯು ತನಗೆ ಸಲ್ಲಬೇಕಾದ ಸ್ತ್ರೀಧನ, ಆಹಿತ ಮತ್ತು ಶುಲ್ಕಗಳನ್ನು ಕಳೆದುಕೊಳ್ಳುತ್ತಿದ್ದಳು.

ಕೌಟಿಲ್ಯನ ಕಾಲದಲ್ಲಿ ಹೆಂಗಸರಿಗೆ ತಮ್ಮ ಹಕ್ಕು ಬಾಧ್ಯತೆಗಳಲ್ಲಿ ಹೆಚ್ಚು ಸ್ವಾತಂತ್ರ್ಯವಿದ್ದಂತೆ ತೋರುತ್ತದೆ. ಬುದ್ಧನು ಧರ್ಮ ಸುಧಾರಕನಾಗಿ ಸ್ತ್ರೀಪುರುಷರ ಸಂಬಂಧವು ಧರ್ಮ ಸಂಬಂಧವೆಂದೂ ಪ್ರಪಂಚ ಸೃಷ್ಟಿಯಲ್ಲಿ ಅವರು ಸಮಾನರೆಂದೂ ಪ್ರಚಾರ ಮಾಡಿದ ಸಲುವಾಗಿ ಅವನ ತರುವಾಯ ಕೆಲವು ಶತಮಾನಗಳು ಹೆಚ್ಚು ಸ್ವಾತಂತ್ರ್ಯವನ್ನು ಅನುಭವಿಸುತ್ತಿದ್ದಂತೆ ಕಾಣುತ್ತದೆ. ಪುರುಷನಿಗೆ ಸಮಾನವಾದ ಹಕ್ಕುಗಳಿದ್ದವು. ಮಿಶ್ರವಿವಾಹ ಪದ್ಧತಿಯು ರೂಢಿಯಲ್ಲಿದ್ದಿತು. ಕ್ಷತ್ರಿಯ ಮತ್ತು ವೈಶ್ಯಪತ್ನಿಯರಿಂದ ಉತ್ಪನ್ನರಾದ ಮಕ್ಕಳು ಸವರ್ಣರೆನ್ನಿಸಿ ಕೊಳ್ಳುತ್ತಿದ್ದರು. ಅನುಲೋಮ ವಿವಾಹಕ್ಕೆ ಸಮ್ಮತಿಯಿತ್ತು. ಪ್ರತಿಲೋಮ ವಿವಾಹಗಳನ್ನು ಕೌಟಿಲ್ಯನು ನಿಷೇಧಿಸುತ್ತಾನೆ. ಅಶೋಕ ಚಕ್ರವರ್ತಿಯು ಸುಭದ್ರಾಂಗಿ ಎಂಬ ಬ್ರಾಹ್ಮಣ ಕನ್ಯೆಯ ಮಗನಾಗಿದ್ದ ಅಂಶವು ಐತಿಹಾಸಿಕವಾದುದರಿಂದ ಪ್ರತಿಲೋಮ ವಿವಾಹಗಳೂ ರೂಢಿಯಲ್ಲಿ ಇದ್ದಿರಬಹುದು.

ಹೆಂಗಸು ಪುನರ್ವಿವಾಹ ಮಾಡಿಕೊಳ್ಳಬಹುದಾಗಿತ್ತು. ಪುನರ್ವಿವಾಹಕ್ಕೆ ಪತಿಯು ಮೃತನಾಗಿರಬೇಕೆಂದಿರಲಿಲ್ಲ. ಬ್ರಾಹ್ಮಣ ಪತಿಯು ವಿದ್ಯಾರ್ಜನೆಗೆ ಪರದೇಶಕ್ಕೆ ಹೋಗಿ ಹತ್ತು ವರ್ಷಗಳ ನಿಯಮಿತ ಕಾಲದಲ್ಲಿ ಬಾರದಿದ್ದ ಪಕ್ಷದಲ್ಲಿ ಮಕ್ಕಳಿಲ್ಲದ ಸ್ತ್ರೀಯು ಅನ್ಯಪುರುಷನನ್ನು ವರಿಸಬಹುದಾಗಿತ್ತು.

ಕ್ಷತ್ರಿಯ ವರ್ಗದಲ್ಲಿ ಗಂಡನು ಮೃತನಾಗುವವರೆಗೂ ತಡೆಯ ಬೇಕಾಗಿತ್ತು. ಆದರೆ ಕ್ಷತ್ರಿಯ ಸ್ತ್ರೀಯು ಪುತ್ರಾಕಾಂಕ್ಷೆಯಿಂದ ಸವರ್ಣ ಪುರುಷರಿಂದ ಮಕ್ಕಳನ್ನು ಪಡೆದರೆ ಅದು ಅಧರ್ಮ ವೆನ್ನಿಸಿಕೊಳ್ಳುತ್ತಿರಲಿಲ್ಲ.

ಧರ್ಮವಿವಾಹಕ್ಕನುಸಾರವಾಗಿ ಮದುವೆಯಾದ ಕುಮಾ ರಿಯು, ಪರದೇಶಗಳಿಗೆ ಹೋದ ಪತಿಗಾಗಿ, ಆರು ತಿಂಗಳು ಮಾತ್ರ ತಡೆದು ಪುತ್ರಾಪೇಕ್ಷೆಯಿಂದ ಧರ್ಮಾಧಿಕಾರಿಗಳ ಅನುಮತಿಯನ್ನು ಪಡೆದು ತನ್ನ ಇಚ್ಛಾನುಸಾರ ಪತಿಯ ಜ್ಞಾತಿಗಳಲ್ಲೊಬ್ಬರನ್ನು ವರಿಸಬೇಕಾಗಿತ್ತು. ಪತಿಯು ದೀರ್ಘ ಪ್ರವಾಸಮಾಡಿದರೆ, ರಾಜದ್ರೋಹಿಯಾದರೆ, ದುರ್ವರ್ತನೆ ಯಲ್ಲಿ ನಿರತನಾದರೆ, ಧರ್ಮತ್ಯಾಗಿಯಾದರೆ ಅಥವಾ ನಪುಂಸಕ ನಾದರೆ ಹೆಂಡತಿಯು ಅವನನ್ನು ತ್ಯಜಿಸಿ ಅವನ ತಮ್ಮಂದಿರ ಲ್ಲಿಯೋ ಜ್ಞಾತಿಗಳಲ್ಲಿಯೋ ಎರಡನೆಯ ಪತಿಯನ್ನು ಆರಿಸಿ ಕೊಳ್ಳಬಹುದಾಗಿತ್ತು. ಜ್ಞಾತಿಗಳು ಅವಳನ್ನು ಕಾಪಾಡು ವುದಕ್ಕೆ ಒಪ್ಪದಿದ್ದರೆ ಅವಳು ಅನ್ಯ ಪುರುಷನನ್ನು ವರಿಸುವುದಕ್ಕೆ ಸ್ವಾತಂತ್ರ್ಯವಿತ್ತು.

ಕೌಟಿಲ್ಯನ ಕಾಲದಲ್ಲಿ ಅಧಿವೇದನ ಅಥವಾ ವಿವಾಹ ವಿಚ್ಛೇದ ರೂಢಿಯಲ್ಲಿದ್ದ ಹಾಗೆ ಕಾಣುತ್ತದೆ. ಪತಿಪತ್ನಿಯರು ಪರಸ್ಪರ ಇಚ್ಛೆಗೆ ವಿರೋಧವಾಗಿ ಪಾಣಿಗ್ರಹಣಸಂಬಂಧವನ್ನು ರದ್ದು ಮಾಡುವುದಕ್ಕಾಗುತ್ತಿರಲಿಲ್ಲ. ಅವರಿಬ್ಬರೂ ವಿವಾಹ ಸಂಬಂಧವನ್ನು ತ್ಯಜಿಸುವುದಕ್ಕೆ ಒಪ್ಪಿದ ಪಕ್ಷದಲ್ಲಿ ಅಧಿವೇದನ ಸಂಭವಿಸುತ್ತಿತ್ತು. ಬ್ರಾಹ್ಮ, ಪ್ರಾಜಾಪತ್ಯ, ಆರ್ಷ, ದೈವ ವಿವಾಹ ಪದ್ಧತಿಗಳ ಪ್ರಕಾರ ಪಾಣಿಗ್ರಹಣವಾಗಿದ್ದರೆ ಅಧಿವೇದ ನಕ್ಕೆ ಸಮ್ಮತಿಯಿಲ್ಲವೆಂದು ಕೌಟಿಲ್ಯನ ಅಭಿಪ್ರಾಯ.

ಐಹಿಕಸಾಧನೆಗೆ ತಕ್ಕಷ್ಟು ಆಹಾರ ಬಟ್ಟೆಯನ್ನು ಪತಿಯು ಹೆಂಗಸಿಗೆ ಒದಗಿಸಬೇಕಾಗಿತ್ತು. ಸ್ತ್ರೀಧನ, ಶುಲ್ಕ, ಆಹಿತ, ಅಧಿವೇದನಕ್ಕೆ ಸಮ್ಮತಿಕೊಟ್ಟದ್ದಕ್ಕಾಗಿ ಹಣ ಇವೆಲ್ಲವೂ ಗೃಹಿಣಿಗೆ ಸೇರತಕ್ಕದ್ದು. ಗಂಡನು ತ್ಯಜಿಸಿದರೆ ಶ್ವಶುರಕುಲದವರ ಆಶ್ರಯದಲ್ಲಿರತಕ್ಕದ್ದು. ಸ್ತ್ರೀಯು ಮೇಲೆ ಹೇಳಿದ ತನ್ನ ಸಂಪತ್ತನ್ನು ಮಕ್ಕಳ ಪೋಷಣೆಗಾಗಿಯೂ, ಕಷ್ಟನಿವಾರಣೆಗಾಗಿಯೂ, ಧರ್ಮಕಾರ್ಯಗಳಿಗಾಗಿಯೂ ಯಾರ ಅಡ್ಡಿಯೂ ಇಲ್ಲದೆ ಉಪಯೋಗಿಸಬಹುದಾಗಿತ್ತು. ಪತಿಯು ಮರಣಾನಂತರ ಗೃಹಿಣಿಯು ಧರ್ಮನಿಷ್ಠಳಾಗಿ ಸಾಧ್ವೀಮಣಿಯಾದರೆ ಸ್ತ್ರೀಧನ, ಸ್ಥಾಪ್ಯಾಭರಣವನ್ನು ಜ್ಞಾತಿಗಳು ಅವಳಿಗೆ ಒಪ್ಪಿಸಬೇಕಾಗಿತ್ತು. ಅವಳ ಮರಣಾನಂತರ, ಗಂಡು ಹೆಣ್ಣು ಮಕ್ಕಳಿಗೆ, ತಪ್ಪಿದಲ್ಲಿ ದಾಯಾದಿಗಳಿಗೆ ಅವಳ ಸಂಪತ್ತು ಸೇರತಕ್ಕದ್ದಾಗಿತ್ತು. ಆದರೆ, ಕುಟುಂಬಕಾಮದಿಂದ ಎರಡನೆ ಮದುವೆ ಅಪೇಕ್ಷಿಸಿದರೆ ಮಾವನು ಆರಿಸಿದ ಪುರುಷನನ್ನು ವರಿಸಿದಲ್ಲಿ ವಿವಾಹಕಾಲದಲ್ಲಿ ಅವಳ ಮಾವನು ಗತಿಸಿದ ಗಂಡನ ಸಂಪತ್ತನ್ನು ಅವಳಿಗೆ ಒಪ್ಪಿಸಬೇಕಾಗಿತ್ತು. ಮಾವನು ಒಪ್ಪದಿದ್ದವನನ್ನು ಮದುವೆಯಾದರೆ ಯಾವವಿಧವಾದ ಸಂಪತ್ತೂ ಅವಳಿಗೆ ಸೇರುತ್ತಿರಲಿಲ್ಲ.

ಹೆಂಗಸಿಗೆ ಜನ್ಮ ಸಹಜಗುಣಗಳಿಗೆ ಅನುಗುಣವಾಗಿ ಸ್ವಾತಂತ್ರ್ಯವನ್ನು ಕೊಡುವುದು ಸಮಾಜದ ಮುಖ್ಯ ಧ್ಯೇಯವಾಗಿತ್ತು. ಕೌಟಿಲ್ಯನ ಕಾಲದಲ್ಲಿ ಸ್ತ್ರೀಯರಿಗೆ ಹೆಚ್ಚು ಗೌರವ ಸಲ್ಲುತ್ತಿದ್ದ ಹಾಗೆ ಕಾಣುತ್ತದೆ. ಹೆಂಗಸು ಗಂಡಸಿನ ಐಹಿಕ, ಪಾರತ್ರಿಕ ಸಂಬಂಧವಾದ ಸುಖ, ದುಃಖ, ಸಂಪತ್ತು, ವಿಪತ್ತು, ವೈಭವ, ಪರಿಭವ ಇವೇ ಮೊದಲಾದ ಸಮಸ್ತ

ವಿಷಯಗಳಿಗೂ ಕಾರಣಕರ್ತೃಗಳು ಮತ್ತು ಸಮಭಾಗಿನಿಯೆಂದು ಕೌಟಿಲ್ಯನು ತಿಳಿದಿದ್ದನೆಂಬುವುದು ಅರ್ಥಶಾಸ್ತ್ರದಲ್ಲಿ ವ್ಯಕ್ತವಾಗಿದೆ. ಕೌಟಿಲ್ಯನು ಕಾಲಾಧೀನನಾದ ಮೇಲೆ ಕೆಲವು ಕಾಲದಲ್ಲಿಯೇ ಅಧಿವೇದನ, ವಿಧವಾವಿವಾಹ, ಪ್ರೌಢಾ ವಿವಾಹ, ಸ್ವಯಂವರ, ಅನುಲೋಮ ಪ್ರತಿಲೋಮ ವಿವಾಹಗಳು ಅಧರ್ಮವೆಂದು ಗಣಿಸಲ್ಪಟ್ಟದ್ದರಿಂದ ನಿಂತು ಹೋದವು. ಸ್ತ್ರೀಪುರುಷರೆಂಬ ಭೇದಭಾವದೊಂದಿಗೆ ಸ್ವಭಾವ ತಾರತಮ್ಯವಿರುವುದರಿಂದ ಪುರುಷ ಸಮಾಜವು ಸ್ತ್ರೀಯನ್ನು ಪೂಜ್ಯಭಾವದಿಂದ ಪೋಷಿಸಬೇಕೆಂದು ಸ್ಮೃತಿಕಾರರ ಮತವಾಯಿತು. ಮನುವು ತನ್ನ ಸ್ಮೃತಿಯಲ್ಲಿ ಹೇಳಿರುವ "**ಯತ್ರನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ**" ಎಂಬ ಉಕ್ತಿಯು ಸಮಾಜದ ಉನ್ನತ ಉದ್ದೇಶವಾಯಿತು. ಆದರೆ ಧರ್ಮವು ಸ್ತ್ರೀಯರನ್ನು ಆಶ್ರಯಿಸಿಕೊಂಡಿರುವುದರಿಂದಲೂ, ಸ್ತ್ರೀ ಜನಾಂಗದ ಉತ್ಕರ್ಷವೇ ಸಮಾಜದ ಏಳಿಗೆಗೆ ಮೂಲವಾದುದರಿಂದಲೂ, ಅವರು ದುಷ್ಟೆಯರಾದರೆ ವರ್ಣಸಂಕರವಾಗಬಹುದೆಂದು ಭಯವಿದ್ದುದರಿಂದಲೂ ಸ್ಮೃತಿಕಾರರು ಹೆಂಗಸಿನ ಸ್ವಾತಂತ್ರ್ಯವನ್ನು ಕಡುತರವಾದ ನಿಯಮಗಳಿಂದ ಬಂಧಿಸಿದರು. ಆದುದರಿಂದ ಹೆಂಗಸು ಸ್ವಾರ್ಥತ್ಯಾಗದಿಂದ ಜೀವನ ಮಾಡುವುದೇ ಪರಮೋದ್ದೇಶವಾಯಿತು. ತನ್ನ ಗಂಡಸು ಮಾಡುವ ಕೆಲಸವನ್ನು ತಾನು ಮಾಡಬಾರದೆಂದೂ ತನ್ನ ಕೆಲಸಗಳು ಪ್ರತ್ಯೇಕವೆಂದೂ ಹೆಂಗಸು ತಿಳಿದಿದ್ದರಿಂದ ಅವಳು ಹೆಚ್ಚು ಸ್ವಾತಂತ್ರ್ಯಕ್ಕಾಗಿ ಹೋರಾಡುವ ಪ್ರಸಂಗಗಳೊದಗಲಿಲ್ಲ. ಪತಿಯೇ ಪರಮಗುರು, ಪತಿಯೇ ಸದ್ಗತಿ ಯೆಂಬುದು ಹದಿಬದೆಯರ ಧರ್ಮವಾಯಿತು.

೮. ಉಪಸಂಹಾರ

ಅರ್ಥಶಾಸ್ತ್ರದಲ್ಲಿ ವರ್ಣಿತವಾಗಿರುವ ಸಂಸ್ಕೃತಿಯಲ್ಲಿ ದೂಷ್ಯವೂ ಅಗ್ರಾಹ್ಯವೂ ಆದ ಅನೇಕ ರೀತಿನೀತಿಗಳೂ ದುಷ್ಟಪದ್ಧತಿಗಳೂ ಕಾಣುತ್ತವೆ. ಸ್ಮೃತಿಗಳಿಗೆ ವಿರುದ್ಧವಾದ ಮತ್ತು ಅಧರ್ಮವೆಂದು ಕಾಣುವ ಅನೇಕ ಪದ್ಧತಿಗಳೂ ಆಚಾರಗಳೂ ಕೌಟಿಲ್ಯನ ಒಪ್ಪಿಗೆಯನ್ನು ಹೊಂದಿದ ಹಾಗೆ ತೋರುತ್ತದೆ. ಪ್ರಭುವಿನ ಮತ್ತು ರಾಷ್ಟ್ರದ ಬಲವನ್ನು ಗಳಿಸಲು ಎಷ್ಟು ಹೀನವಾದ ನೀತಿ ಉಪಾಯಗಳನ್ನಾದರೂ ಆಚರಿಸಬಹುದು ಎನ್ನುವುದು ಅರ್ಥಶಾಸ್ತ್ರಸಮ್ಮತವೆಂದು ಸಾಮಾನ್ಯ ತಿಳಿವಳಿಕೆ.

ರಾಜಕುಮಾರರನ್ನೂ ಉನ್ನತಾಧಿಕಾರಿಗಳನ್ನೂ ಅಂತಃಪುರದಲ್ಲಿ ಕೊಲೆಮಾಡುವುದು, ಕ್ಷಾಮ, ಆಕ್ರಮಣಭಯ ಮುಂತಾದ ರಾಷ್ಟ್ರವಿಪತ್ತಿನ ನೆಪದಲ್ಲಿ ಶ್ರೀಮಂತರನ್ನು ಸುಲಿಯುವುದು, ವಿಧವೆಯರ ಮತ್ತು ಗುಡಿಗಳ ಧನವನ್ನು ಅಪಹರಿಸುವುದು, ಧರ್ಮದ ಹೆಸರಿನಲ್ಲಿ ವಿಧವಿಧವಾದ ತೆರಿಗೆಗಳನ್ನು ವಸೂಲುಮಾಡುವುದು, ಮಾಂಸಾಹಾರಕ್ಕಾಗಿ ಅಸಂಖ್ಯಾತ ಪ್ರಾಣಿಗಳನ್ನು ಕೊಲ್ಲುವುದು, ಮದಿರಾಗೃಹಗಳನ್ನು ಕಟ್ಟಿಸಿ ಸುರಪಾನಕ್ಕೆ ಉತ್ತೇಜನಕೊಡುವುದು, ಪುರುಷ ಪುರುಷರಿಗೂ ಪುರುಷ ಸ್ತ್ರೀಯರಿಗೂ ದೂತರ ಮತ್ತು ಗುಪ್ತಚಾರರ ಮೂಲಕ ಅವಿಶ್ವಾಸ ತಂದುಹಾಕುವುದು, ಶತ್ರುಗಳನ್ನು ಕೊಲ್ಲುವುದಕ್ಕೆ ನಾನಾ ವಿಧದ ಔಷಧ ವಿಷ, ಮಂತ್ರ ತಂತ್ರಗಳನ್ನು ಪ್ರಯೋಗಿಸುವುದು—ಇವೇ ಮುಂತಾದ ದುಷ್ಟಪದ್ಧತಿಗಳು ಅರ್ಥಶಾಸ್ತ್ರವಾಚಕರಿಗೆ ಮನವರಿಕೆಯಾಗದಿರದು.

ಕೌಟಿಲ್ಯನಿಗೆ ರಾಷ್ಟ್ರದ ಶಕ್ತಿಯನ್ನು ಕುಗ್ಗಿಸುವ ಧರ್ಮದಲ್ಲಿ ನಂಬಿಕೆಯಿರಲಿಲ್ಲ. ಅಂದರೆ ವೇದತತ್ವಗಳ ಅಥವಾ ವರ್ಣಾಶ್ರಮ ಧರ್ಮಗಳ ವಿರೋಧಿ ಎಂದಲ್ಲ. ವೇದಜ್ಞಾನ ಆವಶ್ಯಕವೆಂದು, ವರ್ಣಾಶ್ರಮ ಧರ್ಮಗಳ ಅನುಸರಣೆಯಿಂದ ಇಹಪರಲೋಕಗಳಲ್ಲಿ ಸುಖವುಂಟೆಂದೂ, ಇಲ್ಲದಿದ್ದರೆ ವರ್ಣಸಂಕರವಾಗಿ ರಾಷ್ಟ್ರಕ್ಷೀಣವಾಗುವುದೆಂದೂ ತಿಳಿದಿದ್ದನು. ಆದರೆ ಮತವನ್ನು ರಾಷ್ಟ್ರಡಳಿತಕ್ಕೆ ಅಧೀನವಾದ ಉಪಯೋಗಿಸುವುದಕ್ಕೆ ಆಕಾಂಕ್ಷೆಯಿತ್ತು.

ರಾಷ್ಟ್ರಧ್ಯೇಯಸಿದ್ಧಿಗಾಗಿ ಉದಾಸ್ಥಿತ, ತಾಪಸ, ಬಿಕ್ಷುಕೀ ಸನ್ಯಾಸಿ, ಸನ್ಯಾಸಿನಿಯರನ್ನು ಗೂಢಚಾರರನ್ನಾಗಿ ನೇಮಿಸುವುದು; ಅವರು ದೇವಧ್ಯಾನಪರರಂತೆ ನಟಿಸಿ ಜನರನ್ನು ಮೋಸಗೊಳಿಸುವುದು; ದೇವತಾಧ್ಯಕ್ಷನು ರಾತ್ರಿ ವೇಳೆಗಳಲ್ಲಿ ಅಗೋಚರನಾಗಿ ದೇವರ ಸ್ಥಾಪನೆ ಮಾಡಿಸಿ, ಉತ್ಸವ ಸಮಾರಂಭಗಳನ್ನು ನಡೆಸಿ ಜನಗಳಿಂದ ಕಾಣಿಕೆಗಳನ್ನು ವಸೂಲುಮಾಡಿ ಬೊಕ್ಕಸವನ್ನು ತುಂಬುವುದು; ಕೆಲವು ಗೃಹಗಳು, ಗಿಡಗಳು, ಮಹತ್ವಪೂರಿತವಾದವು, ದೇವರ ಆವಾಸಸ್ಥಾನ, ಎಂದು ಸಾರಿ ಜನರಿಂದ ಧರ್ಮ ತೆರಿಗೆಗಳನ್ನು ಸುಲಿಯುವುದು; ಆಕ್ರಮಣ ರಾಷ್ಟ್ರದ ರಾಜನು ದೇವಾಂಶ ಸಂಭೂತನು ಎಂದು ಮಹಾತ್ಮೆಗಳನ್ನು ಹುಟ್ಟಿಸಿ ಕಪಟವಿಲ್ಲದ ಜನರನ್ನು ಅವನ ಅಧಿಕಾರಕ್ಕೆ ವಶಪಡಿಸುವುದು—ಈ ಅಂಶಗಳಿಂದ, ಶುಷ್ಕ ಧರ್ಮಕ್ಕಾಗಲಿ, ಅಥವಾ ಮತಕ್ಕಾಗಲಿ ಅರ್ಥಶಾಸ್ತ್ರದಲ್ಲಿ ಉಚ್ಚಸ್ಥಾನವಿಲ್ಲವೆಂದು ವ್ಯಕ್ತವಾಗುತ್ತದೆ. ಬುದ್ಧನ ತತ್ವಗಳ ಪರಿಣಾಮ ಕೌಟಿಲ್ಯನ ಸಮಾಜದಲ್ಲಿ ಕಾಣುವುದಿಲ್ಲ. ಬುದ್ಧನ ತತ್ವವು ಜನಜೀವನವನ್ನು ರೂಪಗೊಳಿಸಿದುದು ಮೌರ್ಯಸಮ್ರಾಟರ ಕಾಲಾನಂತರ.

ಕೌಟಿಲ್ಯನ ಕಾಲವು ಕಲಹ ವೈಷಮ್ಯಗಳಿಂದ ಕೂಡಿತ್ತು. ಶಾಂತಿ ಸುಖಗಳಿರಲಿಲ್ಲ. ರಾಜರ ಕುಟಿಲೋಪಾಯಗಳನ್ನು ಕುಟಿಲಸಾಧನಗಳಿಂದಲೇ ಮುರಿಯಬೇಕಾಗಿತ್ತು. ರಾಜದ್ರೋಹ ಭ್ರಾತೃದ್ರೋಹಪೂರಿತವಾದ ಜಗತ್ತಿನಲ್ಲಿ ಧರ್ಮವನ್ನಾಚರಿಸಿ ಬದುಕುವುದಕ್ಕೆ ಅವಕಾಶವಿರಲಿಲ್ಲ. ಅಹಿಂಸೆಯೇ ಪರಮಧರ್ಮ, ಶತ್ರುಮಿತ್ರರೆಂಬ ಭಾವನೆಯಿರಬಾರದು, ಎಂಬ ಒಂದು ಧರ್ಮ ಪರಾಕಾಷ್ಠತೆಯನ್ನು ಸರ್ವರು ಸರ್ವಕಾಲದಲ್ಲಿಯೂ ಆಚರಿಸಬೇಕೆಂದು ಕೌಟಿಲ್ಯನ ತತ್ವವಲ್ಲ. ಶಾಂತಿಯುಗದ ರೀತಿನೀತಿಗಳಿಗೂ ಕುಟಿಲ ಕಲಹ ಪೂರ್ಣ ಜಗತ್ತಿಗೂ ಭೇದವಿದೆ. ಒಂದರ ರೀತಿನೀತಿಗಳು ಇನ್ನೊಂದಕ್ಕೆ ಪ್ರಮಾಣವಾಗಲಾರವು. ರಾಜನು ಅವಲಂಬಿಸುವ ಆಪದ್ಧರ್ಮ ಕಾಲಾನುಕಾಲದಲ್ಲಿ ನಿಂದಾರ್ಹವಾದರೂ ಅವನ ಕಾಲದಲ್ಲಿ ಮಾತ್ರ ಅದು ಆತ್ಮಸಂರಕ್ಷಣೆಗೆ ಅನಿವಾರ್ಯವಾಗಿದ್ದಿರಬಹುದು.

ಕೌಟಿಲ್ಯನು ಧ್ಯೇಯವಾದಿಯಲ್ಲ, ಕೇವಲ ಕ್ರಿಯಾವಾದಿ. ಅರ್ಥಶಾಸ್ತ್ರವನ್ನು ಓದುವಾಗ ಈ ವಿಷಯವನ್ನು ನಾವು ನೆನಪಿನಲ್ಲಿಡಬೇಕು. ರಾಜಕೀಯದ ಗುರಿ ಅವನ ಮನಸ್ಸಿನಲ್ಲಿ ಸ್ಪಷ್ಟವಾಗಿತ್ತು; ಅದು ಯಾವುದೆಂದರೆ: ಪ್ರಜೆಗಳ ಐಹಿಕ ಅಭ್ಯುದಯ. ಕಾಲಕ್ಕೆ ಅನುಗುಣವಾದ ನೀತಿಯ ತಳಹದಿಯ ಮೇಲೆ ರಾಜ್ಯವನ್ನು ಸ್ಥಾಪನೆ ಮಾಡುವುದು ಉತ್ತಮವೆಂದು ಅವನ ನಂಬಿಕೆ. ರಾಜಕೀಯ ವಿಚಾರಗಳಲ್ಲಿ ಕಾರ್ಯಸಾಧನೆ ಪ್ರತಿಬಂಧಕಗಳನ್ನು ಮತಧರ್ಮಗಳು ತಂದೊಡ್ಡುವುದಾದರೆ ಅವುಗಳನ್ನು ಅನುಸರಿಸಬೇಕಾಗಿಲ್ಲವೆಂಬುದು ಕೌಟಿಲ್ಯನ ಅಭಿಪ್ರಾಯ.

ರಾಷ್ಟ್ರವು ಧರ್ಮಕ್ಕೆ ಆಸರೆಯೆಂಬುದು ಅವನ ಗೌಣಪಕ್ಷ. ಪ್ರಜಾಹಿತಸಾಧನೆಗಾಗಿಯೇ ರಾಷ್ಟ್ರನಿರ್ಮಾಣವಾಗಿರತಕ್ಕದ್ದು. ಕೆಲವು ಪೇಳೆ ನೀತಿಯ ಅನುಸರಣೆಯಿಂದ ರಾಷ್ಟ್ರಸಿದ್ಧಿಯಾಗು ವುದಾದರೆ ನೀತಿಯುತವಾದ ಜೀವನವನ್ನು ಅವಲಂಬಿಸ ಬೇಕೆಂದೇ ಅವನ ಮತ. ಕೆಲವು ನಿದರ್ಶನಗಳನ್ನು ಇಲ್ಲಿ ಕೊಡಬಹುದು. ರಾಜಕುಮಾರರು ತಂದೆಯನ್ನು ದ್ವೇಷಿಸು ವುದಕ್ಕೆ ಅವಕಾಶವಾಗದಹಾಗೆ ಅವರನ್ನು ಭೋಗವಿಲಾಸ ಗಳಲ್ಲಿ ಮಗ್ನರನ್ನಾಗಿ ಮಾಡಬೇಕೆಂದು ವಾತವ್ಯಾಧಿ ಹೇಳು ತ್ತಾನೆ. ಆದರೆ ಅಂಥ ಇಂದ್ರಿಯದಮನವಿಲ್ಲದ ಹೇಯವಾದ ಜೀವನದಿಂದ ಹುಳು ಹಿಡಿದ ಮರದಂತೆ ರಾಜಮನೆತನವು ನಶಿಸಿಹೋಗಿ ರಾಷ್ಟ್ರಕ್ಕೆ ವಿಪತ್ತು ಒದಗುತ್ತದೆಯೆಂದು ಕೌಟಿಲ್ಯನ ಹೇಳಿಕೆ. ಆದರಿಂದಲೆ ರಾಜಕುಮಾರರ ವಿದ್ಯಾ ಭ್ಯಾಸದ ವಿಚಾರದಲ್ಲಿ ಕೌಟಿಲ್ಯನು ಹೆಚ್ಚು ಉತ್ಸಾಹ ಮತ್ತು ದಕ್ಷತೆಯನ್ನು ತೋರಿಸುತ್ತಾನೆ. ಪ್ರಭುವು ಕಾಲಾಧೀನನಾದರೆ ಅವನ ಅಮಾತ್ಯನು ಸಿಂಹಾಸನವನ್ನು ಅಪಹರಿಸಬಹುದೆಂದು ಭಾರದ್ವಾಜನ ಮತ. ಇದನ್ನು ಖಂಡಿಸಿ, ಈ ನೀತಿ ಪ್ರಜೆಗಳ ಕೋಪವನ್ನು ಉದ್ರೇಕಿಸುವುದಲ್ಲದೆ ಅಧರ್ಮವೂ ಆಗುತ್ತದೆ ಯೆಂದು ಕೌಟಿಲ್ಯನು ಹೇಳುತ್ತಾನೆ. ಪರರಾಷ್ಟ್ರದೊಡನೆ ಮಾಡಿದ ಪ್ರತಿಜ್ಞಾಪೂರ್ವಕವಾದ ಸಂಧಿಗಳಿಗೆ ತಪ್ಪಿ ನಡೆಯು ವುದು ಇಹಕ್ಕೂ ಪರಕ್ಕೂ ಹಾನಿಕರವಾದುದೆಂದು ಕೌಟಿಲ್ಯನು ಸ್ಪಷ್ಟವಾಗಿ ಹೇಳಿದ್ದಾನೆ.

ವ್ಯಾವಹಾರಿಕ ವಿಚಾರಗಳಲ್ಲಿ ರಾಜತಂತ್ರಜ್ಞನು ಧರ್ಮಕ್ಕೆ ಸಂಬಂಧಪಟ್ಟ ವಿಷಯಗಳನ್ನು ದೇಶದ ಅವಶ್ಯಕತೆಗೆ ತಕ್ಕಂತೆ ಬದಲಾಯಿಸಿಕೊಳ್ಳುವುದೇ ರಾಜನಿಗೆ ಸರಿಯಾದ ಮನೋಭಾವ.

ಮನುಷ್ಯನು ಕಾಲ, ದೇಶ, ವರ್ತಮಾನಗಳಿಗೆ ಅಧೀನನಾಗಿರುವುದರಿಂದ ಅವನ ರೀತಿನೀತಿಗಳು ಅವನ ಸಂದರ್ಭಕ್ಕೆ ಅನುಗುಣವಾಗಿರುವುದೇ ಹೊರತು ಯಾವಾಗಲೂ ಧರ್ಮಾನುಗುಣವಾಗಿರುವುದಿಲ್ಲ. ಆ ಸಂದರ್ಭಕ್ಕೆ ಸಿಕ್ಕಿ ಮಾಡುವ ಅಧರ್ಮಗಳು ಆ ಕಾಲದಲ್ಲಿ ಧರ್ಮವೆನ್ನಿಸಬಹುದು. ಕೌಟಿಲ್ಯನ ಅರ್ಥಶಾಸ್ತ್ರವು ಆ ಕಾಲದ ಆರ್ಥಿಕ ಮತ್ತು ರಾಜಕೀಯ ಪರಿಸ್ಥಿತಿಗಳಿಗೆ ಹೊಂದಿಕೊಂಡಿದ್ದಾಗಿದ್ದಿತು. ಇವನ ಮೇಲ್ಪಂಕ್ತಿಯನ್ನನುಸರಿಸಿ ಅನೇಕ ಶತಮಾನಗಳವರೆಗೂ ರಾಜನೀತಿಜ್ಞರು ಗ್ರಂಥರಚನೆ ಮಾಡಿರುತ್ತಾರೆ. ಇವನ ಅನುಯಾಯಿಗಳಲ್ಲಿ ಕಾಮಂದಕ, ಸೋಮದೇವ ಸೂರಿ—ಇವರು ಮುಖ್ಯರಾದವರು.

ಆದರೆ ಕಾಲಕ್ರಮದಲ್ಲಿ ಇದಕ್ಕೆ ಪ್ರತಿಯಾದ ರಾಜನೀತಿ ಪ್ರಬಲಗೊಂಡಿತು. ರಾಜತಂತ್ರಕ್ಕೂ ಧರ್ಮಜೀವನಕ್ಕೂ ಇರುವ ಪರಸ್ಪರ ಸಂಬಂಧವನ್ನು ಕುರಿತು ವಿಜ್ಞಾನೇಶ್ವರನು ತನ್ನ ಮಿತಾಕ್ಷರದಲ್ಲಿ ಈ ರೀತಿ ಹೇಳಿದ್ದಾನೆ: ಧರ್ಮಶಾಸ್ತ್ರಾಂತರ್ಗತಮೇವ ರಾಜನೀತಿಲಕ್ಷಣಮರ್ಥಶಾಸ್ತ್ರಂ ಸ್ಮೃತಿಕಾರರೆಲ್ಲರೂ ಧರ್ಮಶಾಸ್ತ್ರಕ್ಕೆ ಹೆಚ್ಚು ಮನ್ನಣೆಯನ್ನು ಕೊಡಬೇಕೆಂದು ಘೋಷಿಸಿದ್ದಾರೆ. ಇದು 'ಯತ್ರವಿಪ್ರತಿಪತ್ತಿ ಸ್ಯಾದ್ಧರ್ಮಶಾಸ್ತ್ರಾರ್ಥಶಾಸ್ತ್ರಯೋಃ ! ಅರ್ಥಶಾಸ್ತ್ರೋಕ್ತಮುತ್ಸೃಜ್ಯ ಧರ್ಮಶಾಸ್ತ್ರೋಕ್ತಮಾಚರೇತ್' ಎಂಬ ವಾಕ್ಯದಿಂದ ಸ್ಪಷ್ಟಪಡುತ್ತದೆ.

ಹಿಂದೂಸಮಾಜವು ಮಾನಸಿಕ, ನೈತಿಕ ಮತ್ತು ಅಧ್ಯಾತ್ಮಿಕ ಅಸ್ತಿಭಾರದಮೇಲೆ ನಿಂತಿತ್ತೆಂಬುದೂ ಅಧ್ಯಾತ್ಮಿಕ ಸಾಧನೆಗಳಲ್ಲಿ ಪ್ರಾಚೀನಕಾಲದಲ್ಲಿ ಭಾರತವು ಎಲ್ಲಾ ಮಾನವ ವರ್ಗ

ಗಳಿಗಿಂತಲೂ ಮುಂದಾಗಿದ್ದು ಉನ್ನತಿಯನ್ನು ಪಡೆದಿತ್ತೆಂಬ ಅಂಶವೂ ಸರ್ವಸಮ್ಮತವಾದುದು. ಸ್ವಾರ್ಥಕ್ಕಿಂತಲೂ ಪರಾರ್ಥವೇ ಮೇಲು ಎಂಬ ನಂಬಿಕೆ ಭಾರತೀಯರಲ್ಲಿ ಬಲವಾಗಿರುವುದರಿಂದ ನೀತಿ, ಶಾಂತಿ ಮುಂತಾದ ಅಧ್ಯಾತ್ಮಿಕ ತತ್ವಗಳು ಭಾರತೀಯರಿಗೆ ಆದರ್ಶಪ್ರಾಯವಾದ ಧ್ಯೇಯಗಳೆಂಬುದನ್ನು ನಮ್ಮ ಚರಿತ್ರೆಯು ಸಾರುತ್ತಾ ಬಂದಿದೆ. ತತ್ವಗಳ ಉಪದೇಶ ಪ್ರಭಾವದಿಂದ ಸಕಲ ವರ್ಣದವರಲ್ಲಿಯೂ ದೈವಭಕ್ತಿ, ಕರ್ತವ್ಯ ನಿಷ್ಠೆ, ಸ್ವಾರ್ಥತ್ಯಾಗ, ಸ್ವಧರ್ಮಪ್ರೀತಿ, ಇವೇ ಮೊದಲಾದ ಸುಗುಣಗಳು ವೃದ್ಧಿಗೊಂಡಿವೆ. ಒಟ್ಟಿನಲ್ಲಿ ಪ್ರಾಚೀನಕಾಲದಿಂದಲೂ ಭರತಖಂಡದ ಸಿದ್ಧಪುರುಷರು ರಾಜನೀತಿಯನ್ನು ಧರ್ಮ, ನೀತಿ ಮತ್ತು ತತ್ವಗಳೊಂದಿಗೆ ಸಮನ್ವಯಗೊಳಿಸಿ ರಾಜಕೀಯ ವಿಚಾರಗಳನ್ನು ಸಂಪೂರ್ಣವಾಗಿ ನೀತಿಯುತವನ್ನಾಗಿ ಮಾಡಿ ಸರ್ವರೂ ಸತ್ಯಾನ್ವೇಷಣದಲ್ಲಿ ಒಗ್ಗಟ್ಟಾಗಿ ಮುಂದುವರಿಯಬೇಕೆಂದು ಸಾರಿದ್ದಾರೆ.

WO 21876—MUPM—10,000-22-12-80

೨೭. ವೇಮನ—ಕೆ. ವೆಂಕಟರಾಮಪ್ಪ
೨೮. ಕನ್ನಡದಲ್ಲಿ ಅನುಭಾವ ಸಾಹಿತ್ಯ—ಡಾ॥ ಎಚ್. ತಿಪ್ಪೇರುದ್ರಸ್ವಾಮಿ
೨೯. ಅಲ್ಲಮಪ್ರಭು—ಡಾ॥ ಟಿ. ಜಿ. ಸಿದ್ದಪ್ಪಾರಾಧ್ಯ
೩೦. ಕಾಳಿದಾಸನ ನಾಟಕಗಳು—ಡಾ॥ ಕೆ. ಕೃಷ್ಣಮೂರ್ತಿ
೩೧. ಅಣ್ಣನ ಆದರ್ಶ—ಡಾ॥ ಟಿ. ಜಿ. ಸಿದ್ದಪ್ಪಾರಾಧ್ಯ
೩೨. ಹೊಸಗನ್ನಡ ಭಾವಗೀತೆಗಳಲ್ಲಿ ಜೀವನ ವಿಕಾಸ—ದೇವಂಗಿ ಟಿ. ಚಂದ್ರಶೇಖರ
೩೩. ಸೂರದಾಸ—ಎಂ. ಕೃಷ್ಣಮೂರ್ತಿ
೩೪. ಜನ್ನ—ಡಾ॥ ಸಿ. ಪಿ. ಕೃಷ್ಣಕುಮಾರ್
೩೫. ರತ್ನಾಕರ ಮಹಾಕವಿ—ಜಿ. ಬ್ರಹ್ಮಪ್ಪ
೩೬. ಮಾಘಕವಿ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೩೭. ನಿಜಗುಣಶಿವಯೋಗಿ—ಎಚ್. ಗಂಗಾಧರನ್
೩೮. ಮುದ್ರಾರಾಕ್ಷಸ—ಡಾ॥ ಎನ್. ಎಸ್. ಅನಂತರಂಗಾಚಾರ್
೩೯. ರಾಘವಾಂಕ—ರಾಮೇಗೌಡ
೪೦. ಮೂರನೆಯ ಮಂಗರಸ ಕವಿ—ಹಂಪ ನಾಗರಾಜಯ್ಯ
೪೧. ನಾಗಚಂದ್ರ—ಡಾ॥ ಸಿ. ಪಿ. ಕೃಷ್ಣಕುಮಾರ್
೪೨. ವಡ್ಡಾರಾಧನೆ—ಹಂಪ ನಾಗರಾಜಯ್ಯ
೪೩. ಮಹಾಕವಿ ಭಾರವಿ—ಎಂ. ಜಿ. ನಂಜುಂಡಾರಾಧ್ಯ
೪೪. ಕವಿ ಮುರಾರಿ—ಎಂ. ಜಿ. ನಂಜುಂಡಾರಾಧ್ಯ
೪೫. ಚೆನ್ನಬಸವಣ್ಣ—ಓ. ಎನ್. ಲಿಂಗಣ್ಣಯ್ಯ
೪೬. ಕವಿ ಶ್ರೀ ಹರ್ಷ—ಎಂ. ಜಿ. ನಂಜುಂಡಾರಾಧ್ಯ
೪೭. ಕಬೀರದಾಸ—ಡಾ॥ ಹಿರಣ್ಮಯಿ
೪೮. ವಿದ್ಯಾಪತಿ—ಎಂ. ಎಸ್. ಕೃಷ್ಣಮೂರ್ತಿ
೪೯. ಕವಿ ಭಟ್ಟನಾರಾಯಣ—ಎಂ. ಜಿ. ನಂಜುಂಡಾರಾಧ್ಯ
೫೦. ಕಾವ್ಯದಲ್ಲಿ ಧ್ವನಿ—ಗುರುಪಾದ ಕೆ. ಹೆಗಡೆ
೫೧. ಪೊನ್ನ—ಎನ್. ಅನಂತರಂಗಾಚಾರ್
೫೨. ಎಡೆಯೂರು ತೋಂಟದ ಸಿದ್ಧಲಿಂಗಯತಿ—ಓ. ಎನ್. ಲಿಂಗಣ್ಣಯ್ಯ
೫೩. ದೇವರ ದಾಸಿಮಯ್ಯ—ಕೆ. ಅನಂತರಾಮು
೫೪. ಸಂಸ್ಕೃತ ಸಾಹಿತ್ಯ—ಡಾ॥ ಆರ್. ಶಿವಗಣೇಶಮೂರ್ತಿ
೫೫. ಚಾಮುಂಡರಾಯ—ಉ. ಕಾ. ಸುಬ್ಬರಾಯಾಚಾರ್
೫೬. ಶ್ರೀ ಸಮರ್ಥರಾಮದಾಸರು—ಬಿ. ಪಿ. ಚಂದ್ರಾಬಾಯಿ
೫೭. ಉಪಭಾಷಾ ಅಧ್ಯಯನ—ಶಾಲಿನಿ ರಘುನಾಥ